ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಐತಿಹ್ಯಗಳು

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧನಾ ಅಭ್ಯರ್ಥಿ

ಪ್ರಸನ್ನ ಕೆ.ಎಲ್.

ಮಾರ್ಗದರ್ಶಕ

ಡಾ. ಕೆ.ಸಿ.ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
2008

ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಐತಿಹ್ಯಗಳು

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧನಾ ಅಭ್ಯರ್ಥಿ
ಪ್ರಸನ್ನ ಕೆ.ಎಲ್.

ಮಾರ್ಗದರ್ಶಕ
ಡಾ. ಕೆ.ಸಿ.ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
2008

ಪ್ರಮಾಣ ಪತ್ರ

"ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಐತಿಹ್ಯಗಳು " ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಸಲ್ಲಿಸಲು ಡಾ.ಕೆ.ಸಿ.ಶಿವಾರೆಡ್ಡಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಸಂಪ್ರಬಂಧದ ಯಾವುದೆ ಭಾಗವನ್ನು ಈ ಮೊದಲು ಯಾವುದೆ ಪದವಿಗಾಗಲಿ ಅಥವಾ ಇತರೆ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 4-10-2008

ಸ್ಥಳ : ಹಂಪಿ.

(ಪ್ರಸನ್ನ ಕೆ.ಎಲ್.)
ಕೆಸಲೂರು,
ಕಡ್ತೂರು -ಅಂಚೆ, ತೀರ್ಥಹಳ್ಳಿ ತಾ॥

ದೃಢೀಕರಣ ಪತ್ರ

ಶ್ರೀ ಪ್ರಸನ್ನ ಕೆ.ಎಲ್. ಇವರು "ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಜಾತ್ರೆಗಳು" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 4-10-2008

ಸ್ಥಳ : ಕುಪ್ಪಳಿ

(ಡಾ. ಕೆ.ಸಿ.ಶಿವಾರೆಡ್ಡಿ)
ಮುಖ್ಯಸ್ಥರು,
ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ.
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಐತಿಹ್ಯಗಳು

ಪರಿವಿಡಿ

ಅಧ್ಯಾಯ -1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಎಲ್ಲೆಲ್ಲಿ ಮಾನವ ಸಂಸ್ಕೃತಿಯ ನೆಲೆಗಳಿವೆಯೋ ಅಲ್ಲೆಲ್ಲಾ ಐತಿಹ್ಯಗಳು ಕಂಡುಬರುತ್ತವೆ. ಅದಕ್ಕೆ ಕಾಲ, ದೇಶದ ಎಲ್ಲೆ ಇಲ್ಲ. ಆ ಎಲ್ಲಾ ಐತಿಹ್ಯಗಳಿಗೆ ಒಂದಲ್ಲಾ ಒಂದು ಚಾರಿತ್ರಿಕ, ಪೌರಾಣಿಕ ಕಾರ್ಯಕಾರಣ ಸಂಬಂಧವಿದೆ. ಸಾಮಾನ್ಯವಾಗಿ ಈ ಐತಿಹ್ಯಗಳು ರಾಮಾಯಣ, ಮಹಾಭಾರತ, ಪುರಾಣ ಮತ್ತು ಜನಪದ ಜೀವನ ಹೀಗೆ ಯಾವುದಾದರೊಂದರೊಡನೆ ತಳುಕು ಹಾಕಿಕೊಂಡಿವೆ. ಅದಾವುದೂ ಇರದಿದ್ದರೆ ಘಟಿಸಿದ ಘಟನೆಗಳಿಗೆ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ , ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಗೊಳ್ಳುತ್ತದೆ. ಹೀಗೆ ಕಾಲ, ದೇಶಗಳನ್ನು ಮೀರಿ ವರ್ಗಾವಣೆಗೊಳ್ಳುವ ಐತಿಹ್ಯಗಳು ಆಯಾ ಸಂದರ್ಭಕ್ಕನುಸಾರವಾಗಿ ಬೇರೆ- ಬೇರೆ ಸಂಗತಿಗಳು ಅದಕ್ಕೆ ಸೇರಿಕೊಂಡು ರೋಚಕ ರಂಜನೆಯನ್ನು ನೀಡುತ್ತಾ ಅತಿಮಾನುಷವಾಗಿಬಿಡುತ್ತವೆ. ಕೇವಲ ಕಲ್ಪನಾ ಜಗತ್ತಿನ ನಂಬಿಕೆಗಳಾಗಿ ಉಳಿದಿರುವ ಐತಿಹ್ಯಗಳ ಬಗೆಗೆ ನಮ್ಮ ಸಂಸ್ಕೃತಿಯಲ್ಲಿ ಬೇರೂರಿದ ಅಲಿಖಿತ ಸಂಗತಿಗಳನ್ನು ಕೇಳುವುದಕ್ಕೆ ಎಷ್ಟು ರಂಜನೆಯೋ ದಾಖಲಿಸುವುದು ಕೂಡ ಅಷ್ಟೇ ಸೊಗಸು.

ಭೂಮಿಯ ಮೇಲೆ ಮನುಷ್ಯನ ಉಗಮದೊಂದಿಗೆ ಪ್ರಕೃತಿಯ ಜೀವವೈವಿಧ್ಯಗಳೊಂದಿಗೆ ಮಾನವ ಕೋಟಿಯೂ ಸಮ್ಮಿಳಿತಗೊಂಡಿದೆ. ದೈನಂದಿನ ಚಟುವಟಿಕೆಗಳೊಂದಿಗೆ ಈ ಪ್ರಕೃತಿಯೊಂದಿಗೆ ತನ್ನ ಜೀವಿತಾವಧಿಯ ಬಹುಪಾಲು ಸಮಯವನ್ನು ಕಳೆಯುತ್ತಾನೆ. ಸೂರ್ಯೋದಯ, ಸೂರ್ಯಾಸ್ತಗಳಲ್ಲಿ ಎಷ್ಟೋ ಸಾವಿರ ವರ್ಷಗಳನ್ನು ತನ್ನ ಇತಿಹಾಸದಲ್ಲಿ ಕಳೆದಿದ್ದಾನೆ. ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ವನ್ನಿರಿಸಿಕೊಂಡಿರುವ ಮಾನವ ಈ ಪ್ರಕೃತಿಯ ಪ್ರತಿ ಘಟನೆಗಳಿಗೂ ಒಂದೊಂದು ಅತಿಮಾನುಷ ಶಕ್ತಿಯ ಅಸ್ತಿತ್ವವನ್ನು ಗುರುತಿಸುತ್ತಾ ಹೋಗುತ್ತಾನೆ. ತನ್ನ ಅನುಭವಕ್ಕೆ ಬಾರದ ಆಶ್ಚರ್ಯಕರ ಸಂಗತಿಗಳನ್ನು ಗಮನಿಸಿ ಅದನ್ನು ಪ್ರಸಿದ್ಧಗೊಳಿಸಲು ಅದಕ್ಕೊಂದು ಕಥೆ ಹೆಣೆದು, ಪುರಾಣವಾಗಿ ನಿರೂಪಿದನು. ಅವುಗಳೇ ಇಂದು ನಮ್ಮ ಮುಂದೆ ಐತಿಹ್ಯಗಳಾಗಿವೆ. ಇಂತಹ ಐತಿಹ್ಯಗಳು ತೀರ್ಥಹಳ್ಳಿಯ ತಾಲ್ಲೂಕಿನ ಸುತ್ತಮುತ್ತಲು ವಿಫುಲವಾಗಿ ದೊರಕುತ್ತವೆ. ಇವುಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಸಂಪ್ರಬಂಧ

ನಿರ್ಮಿಸುವುದು ನನ್ನ ಉದ್ದೇಶ. ತೀರ್ಥಹಳ್ಳಿ ತಾಲ್ಲೂಕಿನವನೇ ಆದ ನಾನು ಈ ಪ್ರದೇಶವನ್ನು ಬಲ್ಲವನಾಗಿದ್ದೇನೆ. ಈ ಪ್ರದೇಶದ ಬಹುತೇಕ ಚಾರಿತ್ರಿಕ, ಪೌರಾಣಿಕ ಸ್ಥಳಗಳನ್ನು ಸಂದರ್ಶಿಸಿದ್ದೇನೆ. ಅವುಗಳ ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಿಸರದ ಪರಿಚಯ ನನಗಿದೆ. ಈ ಅನುಭವದ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ಸುತ್ತಮುತ್ತಲಿನ ಐತಿಹ್ಯಗಳನ್ನು ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವೇ ಈ ಸಂಪ್ರಬಂಧದ್ದು.

ಈ ತಾಲ್ಲೂಕು ಸುತ್ತಮುತ್ತಲಿನ ಐತಿಹ್ಯಗಳನ್ನು ಇದುವರೆಗೂ ಯಾರೂ ಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸಿಲ್ಲ. ಆಗೊಮ್ಮೆ , ಈಗೊಮ್ಮೆ , ಅಲ್ಲೊಮ್ಮೆ , ಇಲ್ಲೊಮ್ಮೆ , ಸಮಾರಂಭಗಳಲ್ಲೋ, ಸ್ಮರಣ ಸಂಚಿಕೆಗಳಲ್ಲೋ ಪ್ರಾಸಂಗಿಕವಾಗಿ ಮಾತ್ರ ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಗಳ ಹಿಂದೆ ಅಪೇಕ್ಷಿತ ಗಂಭೀರ ಚಿಂತನೆ ಅಡಗಿಲ್ಲ. ಈ ಪ್ರಾಸಂಗಿಕ ಪ್ರಸ್ತಾವಗಳಾದರೂ ಸ್ಥಳ ಪುರಾಣಗಳನ್ನೋ, ಜನಪದರ ನಂಬಿಕೆಗಳನ್ನೋ ಇಲ್ಲವೇ ಕಾಲ್ಪನಿಕತೆಯನ್ನೋ ಆಧರಿಸಿವೆ. ಆದ್ದರಿಂದ ಈ ಪ್ರದೇಶದ ಐತಿಹ್ಯಗಳನ್ನು ಒಂದು ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಈ ಕ್ಷೇತ್ರದಲ್ಲಿ ಆವರಿಸಿರುವ ಶೂನ್ಯ ವಾತಾವರಣವನ್ನು ಕೆಲಮಟ್ಟಿಗಾದರೂ ಹೋಗಲಾಡಿಸುವ ಬಯಕೆಯನ್ನು ಈ ಅಧ್ಯಯನ ಹೊಂದಿದೆ. ಪ್ರಸ್ತುತ ಸಂಪ್ರಬಂಧದ ಶೀರ್ಷಿಕೆಯಲ್ಲಿಯೇ ಸ್ಪಷ್ಟಪಡಿಸಿರುವಂತೆ ತೀರ್ಥಹಳ್ಳಿ ತಾಲ್ಲೂಕು ಸುತ್ತಮುತ್ತಲಿನ ಐತಿಹ್ಯಗಳನ್ನು ಮಾತ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಜಲಾವೃತವಾಗಿರುವ ಪುರಾತನ ದೇವಾಲಯದ ಗೋಪುರದ ಕಳಸವನ್ನಷ್ಟೇ ಗಮನಿಸುತ್ತಾ ಅದರ ವಿಸ್ತಾರ, ವೈಭವಗಳನ್ನು ಊಹಿಸುವಂತೆ ಯಾವುದೋ ಕಾಲದಲ್ಲಿ ಯಾವುದೋ ಕಾರಣಕ್ಕಾಗಿ ಯಾವುದೋ ಅರ್ಥವನ್ನು ಹುದುಗಿಸಿಕೊಂಡಿರುವ ಐತಿಹ್ಯಗಳ ಸತ್ಯ ಮತ್ತು ಸತ್ತ್ವವನ್ನು ಪ್ರಸ್ತುತ ಭಾಷಾಮಾನದಂಡಗಳಿಂದ ಅನಾವರಣಗೊಳಿಸಬೇಕಾಗಿದೆ. ಈ ಸವಾಲಿನ ಕಾರ್ಯಕ್ಕೆ ಭಾಷಾ ಸಾಮಗ್ರಿ (ಲಿಖಿತ ಮತ್ತು ಮೌಖಿಕ) , ವಸ್ತು ಸಾಮಗ್ರಿ, ಕ್ರಿಯಾ ಸಾಮಗ್ರಿ ಮತ್ತು ಜ್ಞಾನ ಸಾಮಗ್ರಿಗಳಂತಹ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಾಯ -2

ಐತಿಹ್ಯಗಳ ನಿಷ್ಪತ್ತಿ , ವ್ಯಾಖ್ಯೆ , ವಿಕಾಸ ಮತ್ತು ವರ್ಗೀಕರಣ

ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಿಸಿದ ಪರಂಪರಾಗತ ನಂಬಿಕೆಗಳೇ ಐತಿಹ್ಯ. ಇದು ಪುರಾತನವಾಗಿದ್ದು, ವಾಸ್ತವ ಸಂಗತಿಯೊಂದರ ಆಚಾರದಿಂದ ಕಲ್ಪನಾ ವಿವರಗಳನ್ನು ಬೆಳೆಸಿಕೊಳ್ಳುತ್ತಾ ತಲೆತಲಾಂತರದಿಂದ ನಂಬಿಕೊಂಡ ಸಂಗತಿಯಾಗಿದೆ. ಐತಿಹ್ಯ ಈ ಪದದ ಮೂಲ ಲ್ಯಾಟಿನ್ ಪದ ಲೆಜೆಂಡ್ (Legend) ನಿಂದ ಬಂದಿದೆ. ಲ್ಯಾಟಿನ್‌ನಲ್ಲಿ ಅದಕ್ಕೆ 'Thinks to be read'[1] ಜನಪದ ತಜ್ಞ ಆ್ಯಡಮ್ಸ್‌ನು ಅಭಿಪ್ರಾಯಪಡುತ್ತಾನೆ. ಇದೇ ರೀತಿ ಫಾವ್ಲರ್ ಹೆಚ್.ಡಬ್ಲ್ಯೂ. 'Traditional story, Mith such litreture or tredition'[2] ಎಂದು ಹೇಳುತ್ತಾನೆ. Kirkepatrick ಎಂಬ ಜಾನಪದ ತಜ್ಞನು ' A story of saints life. A colection of such stories, A treditional story, a body of tredition, a untrue or un historical story'[3] ಎಂದು ಅಭಿಪ್ರಾಯ ಪಡುತ್ತಾನೆ.

ಇದೇ ರೀತಿ ಇಂಗ್ಲಿಷ್-ಕನ್ನಡ ನಿಘಂಟುಗಳು ಆಂಗ್ಲ ಮಾದರಿಯನ್ನೇ ಅನುಸರಿಸಿವೆ. ಇಂಗ್ಲಿಷ್ -ಕನ್ನಡ ನಿಘಂಟಿನಲ್ಲಿ 'ಸಾಧು ಸಂತರ ಜೀವನ ಕಥೆ, 13ನೇ ಶತಮಾನದಲ್ಲಿ ಇಂಗ್ಲಿಷ್‌ನಲ್ಲಿ ಸಂಗ್ರಹಿಸಿದ ಸಾಧು ಸಂತರ ಜೀವನ ಕಥಾ ಸಂಗ್ರಹ '[4] ಎಂದು ದಾಖಲಿಸಲಾಗಿದೆ. ಕಿಟಲ್ ನಿಘಂಟಿನಲ್ಲಿ 'Oral tredition, a legend'[5] ಎಂಬುದನ್ನು ಸಮಾನಾರ್ಥಕವಾಗಿ ಬಳಸಿದ್ದಲ್ಲದೇ, ಕನ್ನಡದಲ್ಲಿ ಅದಕ್ಕೆ 'ಐತಿಹ್ಯ' ಎಂಬ ಪದವಿರುವುದನ್ನು ಗುರುತಿಸಲಾಗಿದೆ.

ಐತಿಹ್ಯಗಳು ಪುರಾತನವಾದ ಐತಿಹಾಸಿಕ ಘಟನೆಗಳ ಪುರಾವೆಗಳು ಎಂದು ಕಂಡು ಬಂದರೂ ಪೌರಾಣಿಕ ಮತ್ತು ಕಾಲ್ಪನಿಕ ಅಂಶಗಳ ಕಡೆ ಇವು ತಮ್ಮ ಬೆಳಕು ಚೆಲ್ಲುತ್ತವೆ. ಸ್ವರೂಪದಲ್ಲಿ ಐತಿಹ್ಯಗಳು ಬಹಳ ಚಿಕ್ಕದಾಗಿ ತೋರಿದರೂ ಅನೇಕ ವಿವರಣಾತ್ಮಕ ಸಂಗತಿಗಳನ್ನು ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಿವೆ. ಕೆಲವು ಐತಿಹ್ಯಗಳು ಗದ್ಯಾತ್ಮಕವಾಗಿಯೂ ಒಂದು ಅಥವಾ ಎರಡು ಆಶಯುಗಳ ವ್ಯಾಪ್ತಿಯನ್ನಷ್ಟೇ ಪಡೆದಿರುತ್ತವೆ. ಇಂತಹ ಐತಿಹ್ಯಗಳು ಒಂದು ಘಟನೆ, ವ್ಯಕ್ತಿಯ ಸವಿವರವಾದ

ಕಥೆಯಾಗಿರುತ್ತದೆ. ಯಾವುದೇ ಐತಿಹ್ಯಗಳು ಆ ಭೌಗೋಳಿಕ ಪ್ರಾದೇಶಿಕತೆಗೆ ಹೆಚ್ಚು ಹೊಂದಿಕೊಂಡಿರುವುದು ಕಂಡುಬರುತ್ತದೆ.

ಕಿವಿಯಿಂದ ಕಿವಿಗೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಹರಿದುಬಂದಿರುವ ಮಾತೊಂದು ಜನಪ್ರಿಯವೂ, ನಂಬುವಂತೆಯೂ ಇದ್ದಾಗ ಇದನ್ನು ಇಲ್ಲಿಯ ಜನರು ಐತಿಹ್ಯವೆಂದು ಕರೆಯುತ್ತಿದ್ದರು. ಸತ್ಯದ ಶೋಧಕ್ಕೆ ಇದೂ ಒಂದು ಪ್ರಮಾಣವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಿತ ಸುವರ್ಣ ಸಾಹಿತ್ಯ ಗ್ರಂಥಮಾಲೆಯ ಸುವರ್ಣ ಜಾನಪದ ಲೇಖನದಲ್ಲಿ

> 'ಭಾರತದಲ್ಲಿ ಇಂತಹ ಒಂದು ನಂಬಿಕೆ ಬಹುಕಾಲದಿಂದಲೂ ಉಳಿದು ಬಂದಿರುವುದಕ್ಕೆ ಕಾರಣವಿದೆ. **ಇತಿಹಾಸವು** ಈ ದೇಶದ ಪ್ರಾಚೀನ ಪದಗಳಲ್ಲಿ ಒಂದು. ಐತಿಹ್ಯ ಮತ್ತು ಇತಿಹಾಸ ಇವೆರಡೂ ಒಂದೇ ಮೂಲದ ಸಂಸ್ಕೃತ ಪದಗಳು. 'ಹೀಗೆ ಇತ್ತು' ಎಂಬುದು ಇದರ ಸಾಮಾನ್ಯ ಅರ್ಥ. ಇವು ಪೂರ್ಣವಾಗಿ ಭೂತಕಾಲಕ್ಕೆ ಸೇರಿದವು. ಒಂದು ಕಾಲದಲ್ಲಿ **ಇದ್ದದ್ದು** -ನಿರೂಪಣೆಯ ಕಾಲಕ್ಕಾಗುವಾಗ ಸಾಕಷ್ಟು ಕಲ್ಪನಾಂಶಗಳು ಸೇರಿಕೊಂಡು 'ವೈಭವದಿಂದ ಇದ್ದದ್ದು ' ಆಗಿ ಮಾರ್ಪಡುತ್ತದೆ '[6].

ಈ ಬಗ್ಗೆ ಜಾನಪದ ವಿದ್ವಾಂಸ ಎ.ಕೆ. ಘೋಶ್‌ರವರು ಹೀಗೆ ಬರೆದಿದ್ದಾರೆ.

> 'History becomes much more exciting and interesting when we read stories of what people said and did. No one knows if those stories are true, but they are generally believed to be true, they are legents'.[7]

ಈ ಒಟ್ಟು ವ್ಯಾಖ್ಯಾನಗಳ ಆಧಾರವನ್ನಿಟ್ಟುಕೊಂಡು ವಿಶ್ಲೇಷಿಸಿದಾಗ ಪ್ರಸ್ತುತ ಇತಿಹಾಸ ಈ ಪದಕ್ಕೆ ಸಮಾನವಾಗಿ ಚರಿತ್ರೆ ಎಂಬ ಪದ ಬಳಸಲಾಗುತ್ತಿದೆ. ಅಂದರೆ ಈ 'ಇತಿಹಾಸ' ಚರಿತ್ರೆಯ ಆಧಾರಗಳನ್ನು ಹೊಂದಿರುವ ವಿಷಯ. ಈ ಆಧಾರದಲ್ಲಿ ಐತಿಹ್ಯವೂ ಒಂದು. ನಮ್ಮ ದೇಶದ ಮಟ್ಟಿಗೆ ಐತಿಹ್ಯವೇ ಇತಿಹಾಸ ಅಥವಾ ಆಧ್ಯಾತ್ಮ ದೃಷ್ಟಿಯಿಂದ ಚರಿತ್ರೆ ಆಧಾರವಿರುವುದು ಇತಿಹಾಸವೆಂದೂ ಅಸ್ಪಷ್ಟ ಆಧಾರವನ್ನೊಳಗೊಂಡ ಸಮರ್ಥನೆ ಮಾಡಿಕೊಳ್ಳಲು ಅಸಾಧ್ಯವಾದ ಇತಿಹಾಸದ ಹಿಂದಿನ ಕಾಲದ ವಿವರಗಳನ್ನು ಐತಿಹ್ಯವೆಂದೂ

ಪರಿಭಾವಿಸಬಹುದು. ಏಕೆಂದರೆ ಅನಾದಿ ಕಾಲದಿಂದಲೂ ನಂಬಿಕೊಂಡು ಬಂದ ಯಾವುದೇ ಘಟನೆ, ವಿವರಗಳು ನಿಜವಾಗಿ ನಡೆದಿದೆ ಎಂದು ಜನರು ನಂಬಿರುವ ಸಾಮಾನ್ಯ ಘಟನೆ ಐತಿಹ್ಯವಾಗಿದೆ. ಅಂದರೆ ಪೂರ್ವದ ಒಂದು ಸಂಗತಿ, ಘಟನೆಯನ್ನು ರೋಚಕವಾಗಿ ವರ್ಣಿಸುತ್ತ ತಲೆತಲಾಂತರದಿಂದ ಕಲ್ಪಿಸಿಕೊಂಡು ಕಥೆಯಾಗಿ ಐತಿಹ್ಯಗಳಾಗಿ ಉಳಿದುಕೊಂಡಿವೆ. ಅದನ್ನು ಪ್ರಮಾಣೀಕರಿಸಲೂ ಕಲ್ಪನಾ ಕುರುಹುಗಳನ್ನು , ಆಧಾರಗಳನ್ನು ಮೌಖಿಕ ಸಾಹಿತ್ಯವನ್ನು ದಾಖಲಿಸಲಾಗುತ್ತಿದೆ.

'ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳನ್ನು ಕುರಿತು ಸಂಶೋಧನೆ ನಡೆಸಿದ ವಸಂತಕುಮಾರ್ ತಾಳ್ತಜೆಯವರು

'ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅದು ಪೂರ್ತಿ ಕಲ್ಪಿತ ದಂತಕತೆಯೂ ಅಲ್ಲ. ಎಲ್ಲೋ, ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ, ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ. ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ಒಂದು ವ್ಯಕ್ತಿಗೆ ಸಂಬಂಧಿಸಿದಂತೆ ಐತಿಹ್ಯ ಉಂಟಾಗುತ್ತದೆ '[8] ಎಂದು ಅಭಿಪ್ರಾಯಪಡುತ್ತಾರೆ.

ಸುವರ್ಣ ಜಾನಪದ ಲೇಖನದಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು

'ಐತಿಹ್ಯದ ಗರ್ಭದೊಳಗಿರುವ ಭೌತಿಕ ಸತ್ಯವು ವಿಶ್ವದ ಮಾನವವರ್ಗ, ಪ್ರಾಣಿವರ್ಗ ಮತ್ತು ಸಸ್ಯವರ್ಗದ ಯಾವುದೇ ವಿಷಯಗಳನ್ನು ಕುರಿತಾಗಿರಬಹುದು. ಅಥವಾ ಈ ಮೂರರ ಹೊಕ್ಕು ಬಳಕೆಯಲ್ಲಿಯೇ ಹುಟ್ಟಬಹುದು. ಹೀಗಾಗುವಾಗ ಭೌತಿಕ ಸತ್ಯದ ಅಥವಾ ಆಧಾರದ ನಿರೂಪಣೆ ವೈಜ್ಞಾನಿಕವಾಗಿದ್ದಂತೆ ಮೇಲ್ನೋಟಕ್ಕೆ ತೋರಿದರೂ ಐತಿಹ್ಯದಲ್ಲಿ ಹಾಗಿರುವುದಿಲ್ಲ. ಅದು 'ನಾಟಕೀಯ ಅತಿಮಾನುಷತೆ 'ಯನ್ನು ಹೊಂದುತ್ತದೆ.

ಇಲ್ಲವೇ ಅವಿಮರ್ಶಕ ತಿಳುವಳಿಕೆಯಿಂದಲೂ ಹೊಸ ರೂಪ ಪಡೆಯಬಹುದು. ಹೀಗೆ ಆದಾಗಲೂ ಐತಿಹ್ಯದ ನಿರೂಪಕ ಕೊಡುವ ಭೌತಿಕ ಆಧಾರದ ಕಣ್ಣೆದುರಲ್ಲಿ ಇರುತ್ತದೆ. ಆ ಆಧಾರಕ್ಕೂ ನಿರೂಪಣೆಗೂ ವೈಜ್ಞಾನಿಕ ಸಂಬಂಧ ಇರುವುದಿಲ್ಲ, ಸುಸಂಬದ್ಧ ತರ್ಕ ಮಾತ್ರ ಇರುತ್ತದೆ. ಕಲ್ಲಿನಲ್ಲಿ ಒಂದೆರಡು ಗೆರೆ ಇದ್ದರೆ ಮಾತ್ರ ಅದು 'ಸೀತೆಯ ಸೆರಗಿನ ಗುರುತು' ಎಂಬ ನಿರೂಪಣೆಯನ್ನು ಪಡೆದುಕೊಳ್ಳುತ್ತದೆ. ಅದೇ ರೀತಿ ಕಲ್ಲಿದ್ದರೆ ಮಾತ್ರ 'ಭೀಮನ ಗುಹೆ' -ಸಿದ್ಧವಾಗುತ್ತದೆ. ಪುರಾಣಗಳ ಸೃಷ್ಟಿಗೆ ಭೌತಿಕ ಆಧಾರಗಳ ಅಗತ್ಯವಿಲ್ಲ. ಆದರೆ ಐತಿಹ್ಯದ ವಸ್ತುಗಳಾದ ಪ್ರಾಣಿವರ್ಗ -ಸಸ್ಯವರ್ಗ -ಮಾನವವರ್ಗ ಮತ್ತು ಅವು ಮೂರರ ಸಮನ್ವಯದ ತಾತ್ತ್ವಿಕತೆ ಪುರಾಣದ ಹುಟ್ಟಿಗೆ ಕಾರಣವಾಗುತ್ತದೆ. ಜನರ ನಂಬಿಕೆ, ಶ್ರದ್ಧೆ ನಡವಳಿಕೆ, ಮೌಲ್ಯ ವ್ಯವಸ್ಥೆ ಆದರ್ಶಗಳು ಪುರಾಣವನ್ನು ಸೃಷ್ಟಿಸುತ್ತವೆ. ಹಾಗಂತ ಭೌತಿಕ ವಸ್ತುಗಳ ಮೂರ್ತತೆಯ ಅವಲಂಬನೆ ಅದಕ್ಕೆ ಬೇಡ. ಕತೆಗಳಿಗಾದರೂ ಅಷ್ಟೆ, ಮೂಲವಸ್ತುಗಳು ಹೊಸ ಆಕೃತಿಯೊಂದನ್ನು ಪಡೆದುಕೊಂಡು ನಿರ್ದಿಷ್ಟ ತಾತ್ತ್ವಿಕತೆಯೊಂದನ್ನು ಅಲ್ಲಿ ಪ್ರಕಟಪಡಿಸುತ್ತವೆ. ಈ ದೃಷ್ಟಿಯಿಂದ ಕತೆಗಳು ಐತಿಹ್ಯದತ್ತ ಸುಳಿದಾಡಿದರೆ, ಐತಿಹ್ಯಗಳು ಚರಿತ್ರೆಯತ್ತ ವಾಲುತ್ತವೆ. ಚರಿತ್ರೆ ಬದುಕಿನ ವಸ್ತಾವತೆಯ ಅಧಿಕೃತ ನಿರೂಪಣೆಯಾಗಿದೆ '[9]

ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಐತಿಹ್ಯಗಳು ಸೃಷ್ಟಿಯಾಗುವ ಕಾರಣವನ್ನು ಹೇಳುತ್ತಾ ಡಾ. ಪುರುಷೋತ್ತಮ ಬಿಳಿಮಲೆಯವರು

'ಕಾಲಮಾನದ ದೃಷ್ಟಿಯಿಂದ ಸಾಕಷ್ಟು ದೂರವನ್ನು ಕಾಪಾಡಿಕೊಂಡಿರುವ ದೂರವನ್ನು ವರ್ತಮಾನಕ್ಕೆ ಒಗ್ಗಿಸಿಕೊಳ್ಳುವ ಅವಸರದಲ್ಲಿಯೂ ಐತಿಹ್ಯಗಳು ಸೃಷ್ಟಿಯಾಗುತ್ತವೆ '[10] ಎನ್ನುತ್ತಾರೆ.

ಐತಿಹ್ಯಕ್ಕೆ ಸಂಬಂಧಿಸಿದ ಸಂಬಂಧಗಳನ್ನು ನಿರೂಪಿಸುವುದು ಕೇವಲ ರಂಜನೆಗಾಗಿಯಲ್ಲ, ಅವು ನಾಶವಾಗದಂತೆ ಮತ್ತು ಬದಲಾಗದಂತೆ ಜನರಿಂದ ಜನರಿಗೆ, ಕಾಲಾನು ಕಾಲಕ್ಕೆ ಕಾಪಾಡಿಕೊಳ್ಳುವುದೂ ಇನ್ನೊಂದು ಉದ್ದೇಶವಾಗಿದೆ. ಐತಿಹ್ಯಗಳು ಮೊದಲು ಚಿಕ್ಕದಾಗಿ ಮತ್ತು ಸರಳವಾಗಿ ಕೂಡಿರುತ್ತವೆ. ನಂತರ ರೂಪಕ ವರ್ಣನೆ, ಸಂಗತಿಗಳ ಸೇರ್ಪಡೆಯಿಂದ ವಿವರವಾದ ಐತಿಹ್ಯಗಳಾಗಿ ಬೆಳೆದು ಬಂದಿವೆ. ಆದ್ದರಿಂದ

ಐತಿಹ್ಯಗಳು ಪೂರ್ವದ ಘಟನೆ, ನಂಬಿಕೆಗಳಾಗಿದ್ದು, ಜನಸಾಮಾನ್ಯರ (ಜನಪದದ) ಜನ ಜೀವನದ ಒಂದು ಅಂಗವಾಗಿ ತಲೆತಲಾಂತರದಿಂದ ಬೆಳೆದುಕೊಳ್ಳುತ್ತಾ ಗೀತೆ, ಕಥೆ, ಕಾವ್ಯ, ಆಚರಣೆಗಳ ರೂಪದಲ್ಲಿ ಬೆಳೆದುಬಂದಿವೆ.

ಪ್ರಪಂಚದ ಎಲ್ಲಾ ಕಡೆ ಐತಿಹ್ಯಗಳು ಕಂಡುಬರುತ್ತವೆ. ಪುರಾತನ ನಾಗರೀಕತೆಯಿಂದ ಆಧುನಿಕ ಯುಗದ ಈ ಮನುಕುಲದ ಪರಂಪರೆಯಲ್ಲಿ ಭಾರತದಂತಹ ಜಾತ್ಯಾತೀತ ಸರ್ವಧರ್ಮ ಸಂಸ್ಕೃತಿಯ ದೇಶದಲ್ಲಿ ಹಲವು ರೂಡಕ ಐತಿಹ್ಯಗಳನ್ನು ಗಮನಿಸಬಹುದು. ಹಲವು ಸಂಸ್ಕೃತಿಗಳ ಕರ್ನಾಟಕವೂ ಕೂಡ ಇದಕ್ಕೆ ಹೊರತಲ್ಲ. ಪ್ರಸ್ತುತ ನಾನು ತೀರ್ಥಹಳ್ಳಿ ತಾಲ್ಲೂಕಿನ ಐತಿಹ್ಯಗಳಿಗೆ ಮಾತ್ರ ನನ್ನ ಸಂಶೋಧನಾ ಸಂಪ್ರಬಂಧದ ನಿರ್ಮಿತಿಗೆ ನನ್ನ ಅಧ್ಯಯನವನ್ನು ಮಿತಿಗೊಳಿಸಿಕೊಂಡಿದ್ದೇನೆ.

ಐತಿಹ್ಯಗಳ ವರ್ಗೀಕರಣ (ವಿಧಾನ)

ಐತಿಹ್ಯಗಳು ಈ ಭೂಮಿಯಲ್ಲಿ ಮನುಷ್ಯನ ಬದುಕಿನೊಂದಿಗೆ ಆರಂಭವಾಗಿ ಅವನ ಬದುಕಿನ ಘಟನೆಗಳನ್ನಾಧರಿಸಿ ಅವನ ಜೀವನದ ಅಂತಿಮದೊಂದಿಗೆ ವಿವರವಾಗಿ ಬೆಳೆದಿದೆ. ಜಾನಪದ ತಜ್ಞರು ಇದರ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಐತಿಹ್ಯಗಳ ವಸ್ತು, ತಂತ್ರ, ಸ್ವರೂಪ ಮತ್ತು ರೀತಿಗಳು ಬಹಳ ವಿಸ್ತೃತ ಮತ್ತು ಸಂದೇಹವಾಗಿರುವುದರಿಂದ ಐತಿಹ್ಯಗಳನ್ನು ನಿಖರವಾಗಿ ವಿಭಜಿಸಲು ಸಾಧ್ಯವಾಗದಿದ್ದರೂ ಹಲವು ತಜ್ಞರು ತಮ್ಮದೇ ಆದ ವರ್ಗೀಕರಣವನ್ನು ಮಾಡಿದ್ದಾರೆ.

ಐತಿಹ್ಯಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಮೊದಲು ಪಾಶ್ಚಾತ್ಯರು ಐತಿಹ್ಯಗಳ ವರ್ಗೀಕರಣ ಕೆಲಸಕ್ಕೆ ಕೈ ಹಾಕಿರುವುದು ಕಂಡುಬರುತ್ತದೆ. ದೇಶಕ್ಕಿರುವ ಐತಿಹ್ಯಗಳನ್ನು ಆಧಾರವಾಗಿಟ್ಟುಕೊಂಡು ಥಾಮ್ಸನ್‌ರವರು ಸಂಪಾದಿಸಿದ ಕೃತಿಯಲ್ಲಿ ಐತಿಹ್ಯಗಳನ್ನು ಈ ಕೆಳಗಿನಂತೆ ವರ್ಗೀಕರಿಸಿದ್ದಾರೆ.

ಸ್ಥಳೀಯ ಐತಿಹ್ಯಗಳು (Local Legends)

ವಿವರಣಾತ್ಮಕ ಐತಿಹ್ಯಗಳು (Etiological Legends)

ಚಾರಿತ್ರಿಕ ಐತಿಹ್ಯಗಳು (Historical Legends)[11]

ಈ ಮೇಲಿನ ವರ್ಗೀಕರಣ ಸಮರ್ಪಕವಾಗಿರಬಹುದೆಂದೆನಿಸಿದರೂ ಸ್ಥೂಲವಾಗಿ

ಪರಿಶೀಲಿಸಿದಾಗ ಒಂದರೊಳಗೊಂದು ಸೇರಿಕೊಂಡಂತೆ ತೋರಿಬರುತ್ತದೆ. ಸ್ಥಳೀಯ ಐತಿಹ್ಯಗಳು ವಿವರಣಾತ್ಮಕ ಐತಿಹ್ಯಗಳೊಳಗೆ ಸೇರಿಕೊಂಡು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ್ದಾದರೂ ಆ ಸ್ಥಳದ ವಿಶೇಷತೆಯನ್ನು ವಿವರಿಸುತ್ತದೆ. ಚಾರಿತ್ರಿಕ ಐತಿಹ್ಯಗಳು ಚರಿತ್ರೆಗೆ ಸಂಬಂಧಿಸಿದರೂ ಅದನ್ನು ಒಂದು ಪ್ರದೇಶಕ್ಕೆ ಸೀಮಿತಗೊಳಿಸಿರುವುದು ಸರಿಯಾದ ಕ್ರಮವಲ್ಲವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅಂದರೆ ಎಲ್ಲವೂ ಸ್ಥಳೀಯ ಐತಿಹ್ಯಗಳೆಂದು ಪರಿಭಾವಿಸುವುದರಿಂದ ಗ್ರೀವಸ್ ಸಹೋದರರ ವರ್ಗೀಕರಣ ಸರ್ವಸಮ್ಮತವೆಂದು ಪರಿಗಣಿಸುವುದು ಕಷ್ಟವಾಗುತ್ತದೆ.

ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಐತಿಹ್ಯಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

ವಿವರಣಾತ್ಮಕ ಮತ್ತು ಅಂತಿಮಗತಿ ಶಾಸ್ತ್ರದ ಐತಿಹ್ಯಗಳು.

(Etiological and Eschotological Legends)

ಚಾರಿತ್ರಿಕ ಐತಿಹ್ಯಗಳು ಮತ್ತು ನಾಗರೀಕತೆಯ ಚರಿತ್ರೆಗೆ ಸಂಬಂಧಿಸಿದ ಐತಿಹ್ಯಗಳು.

(Historical Legends and Legends of the History of civilization)

ಅತಿಮಾನುಷ ಶಕ್ತಿಗಳ ಅಥವಾ ಪೌರಾಣಿಕ ಐತಿಹ್ಯಗಳು.

(Beinges and Forces of Mythical Legends)

ಧಾರ್ಮಿಕ ಐತಿಹ್ಯಗಳು ಅಥವಾ ದೇವರುಗಳು ಮತ್ತು

ನಾಯಕರುಗಳ ಪುರಾಣಗಳು.

(Religious Legends of Myths of Gods and Heroes)[12]

ಈ ಮೇಲಿನ ವಿಂಗಡನೆಯಲ್ಲಿ ಕ್ರೈಸ್ತ ಧರ್ಮದ ತತ್ತ್ವ ಕೆಲಸ ಮಾಡಿರುವುದನ್ನು ಗಮನಿಸಿಬಹುದು. ಮೊದಲ ವರ್ಗೀಕರಣದಲ್ಲಿ ಅಂತಿಮವಾಗಿ ಶಾಸ್ತ್ರವು ಮಾನವ ಜೀವನದ ಕೊನೆ ಹಂತದಲ್ಲಿ ಬರುವ ಮೃತ್ಯು, ಪ್ರಾಯಶ್ಚಿತ್ತ, ಸ್ವರ್ಗ - ನರಕಗಳಿಗೆ ಸಂಬಂದಿಸಿದ ವಿವರಗಳನ್ನೊಳಗೊಂಡ ಐತಿಹ್ಯಗಳನ್ನು ನೋಡಬಹುದು. ಎರಡನೇ ವಿಭಜನೆ ಸ್ವಲ್ಪ ಅಸ್ಪಷ್ಟವಾಗಿದೆ. ಏಕೆಂದರೆ ಚರಿತ್ರೆಯನ್ನು ಹೊಸ ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಚರಿತ್ರೆ ಎಲ್ಲವನ್ನು ಒಳಗೊಂಡಿರುತ್ತದೆ.

ಅತಿಮಾನುಷ ಶಕ್ತಿಗಳ ಐತಿಹ್ಯ ಮತ್ತು ಧಾರ್ಮಿಕ ಐತಿಹ್ಯಗಳು ಎರಡೂ ಒಂದೇ

ರೂಪದಲ್ಲಿ ಕಂಡುಬರುತ್ತಿದೆ. ಏಕೆಂದರೆ ಇಲ್ಲಿ ಅತಿಮಾನುಷ ವ್ಯಕ್ತಿಗಳೆ ಧಾರ್ಮಿಕ ವ್ಯಕ್ತಿಯಾಗಿಯೂ, ಸಾಮಾಜಿಕ ನಾಯಕನಾಗಿ ಪುರಾಣ ಪುರುಷನಾಗಿ ಪರಿಣಮಿಸುತ್ತಾನೆ. ಆ ಕಾರಣದಿಂದ ಈ ವಿಭಜನೆ ಯೂರೋಪಿಗೆ ಸರಿಯೇ ಹೊರತು ಭಾರತದ ಮಟ್ಟಿಗೆ ಸರಿ ಹೊಂದುವುದಿಲ್ಲವೆಂದು ಬಹುತೇಕ ಜನಪರ ತಜ್ಞರು ಅಭಿಪ್ರಾಯಪಡುತ್ತಾರೆ.

ಐತಿಹ್ಯದ ವಸ್ತುವನ್ನಾಧರಿಸಿ ಕನ್ನಡ ವಿಶ್ವಕೋಶದಲ್ಲಿ ಈ ಕೆಳಗಿನಂತೆ ವರ್ಗೀಕರಿಸಲಾಗಿದೆ. ಅವುಗಳೆಂದರೆ

ಸೃಷ್ಟಿ ಅಥವಾ ಜಗತ್ತಿನ ಮೂಲವನ್ನು ಕುರಿತ ವಿವರಣಾತ್ಮಕ ಐತಿಹ್ಯ.

ಅತಿಮಾನುಷ ವ್ಯಕ್ತಿಗಳನ್ನು ಕುರಿತ ಐತಿಹ್ಯಗಳು

ಐತಿಹಾಸಿಕ ಮತ್ತು ಮಿಥ್ಯೆತಿಹಾಸಿಕ ಐತಿಹ್ಯಗಳು[13]

ಮೊದಲನೇ ವರ್ಗೀಕರಣದಲ್ಲಿ ಸೃಷ್ಟಿ ಅಥವಾ ಜಗತ್ತಿನ ಐತಿಹ್ಯಗಳು ಸೃಷ್ಟಿ ಮತ್ತು ಅದರ ಪೂರ್ವ ಸಂದರ್ಭಗಳು ಮನುಕುಲದ ಅಸ್ತಿತ್ವ ಮತ್ತು ಜೀವ ವೈವಿಧ್ಯಗಳ ಕುರಿತಾದ ಐತಿಹ್ಯಗಳು. ಇವುಗಳು ಬಹುತೇಕ ಪೌರಾಣಿಕ ಕಥೆಗಳ ಸಂಪರ್ಕದಲ್ಲೇ ಇರುತ್ತದೆ. ಇವು ಸೃಷ್ಟಿ , ಸ್ಥಿತಿ, ಲಯ ಕುರಿತಾದ ಐತಿಹ್ಯಗಳಾಗಿರುವುದರಿಂದ ಇವಕ್ಕೆ ಪುರಾಣದ ಗಡಿಯನ್ನು ನಿರ್ಧರಿಸುವುದು ಕಷ್ಟವಾಗುತ್ತದೆ.

ಎರಡನೇಯ ವರ್ಗೀಕರಣ ಮಾನವೇತರ ವ್ಯಕ್ತಿಗಳನ್ನು ಅಂದರೆ ಪಿಶಾಚಿ, ದೆವ್ವ, ಕಿನ್ನರ, ರಾಕ್ಷಸ, ಯಕ್ಷಗಳನ್ನು ಕುರಿತ ಐತಿಹ್ಯಗಳಾಗಿವೆ.

ಅದೇ ಕನ್ನಡ ವಿಶ್ವಕೋಶದಲ್ಲಿ ವಿತರಣೆ (distribution) ದೃಷ್ಟಿಯಿಂದ ಪುನಃ ಐತಿಹ್ಯಗಳನ್ನು ಎರಡು ಭಾಗವಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ.

ಸ್ಥಳೀಯ ಐತಿಹ್ಯಗಳು

ವಲಸೆ ಬಂದ ಐತಿಹ್ಯಗಳು [14]

ಸಾಮಾನ್ಯವಾಗಿ ಸ್ಥಳೀಯ ಐತಿಹ್ಯಗಳು ಒಂದು ಗೊತ್ತಾದ ಸ್ಥಳಕ್ಕೆ ಸಂಬಂಧಿಸಿದವುಗಳು. ಅವು ಆ ಸ್ಥಳದ ಪರಂಪರೆಯನ್ನು ಸಂಪ್ರದಾಯವನ್ನು ವಿವರಿಸುವ ಕಥೆಗಳು. ಜಗತ್ತಿನ ಭಿನ್ನಭಿನ್ನ ಸ್ಥಳಗಳಲ್ಲಿ ಒಂದೇ ರೀತಿಯ ಸ್ಥಳೀಯ ಐತಿಹ್ಯಗಳು ಕಂಡು ಬಂದರೂ

ಅವು ನಿಖರವಾದ ಚಾರಿತ್ರಿಕ ಸಂಬಂಧ ಹೇಳುವುದಿಲ್ಲ ಮತ್ತು ಅವುಗಳು ಆ ಸ್ಥಳದಿಂದ ನೆರೆಹೊರೆಯಲ್ಲಿ ಸಂಚರಿಸುತ್ತವೆ ವಿನಃ ದೂರ ಪ್ರದೇಶಗಳಿಗೆ ಪ್ರಯಾಣಿಸುವುದಿಲ್ಲ.

ಸ್ಥಳೀಯ ಐತಿಹ್ಯಗಳನ್ನು ಕೆಲವು ಉಪ ಪ್ರಬೇಧಗಳಾಗಿ ವಿಂಗಡಿಸಲಾಗಿದೆ.

ಪ್ರವಾಹ ಐತಿಹ್ಯ

ಬಲಿಗಳ ಐತಿಹ್ಯ

ಕೌಟುಂಬಿಕ ಐತಿಹ್ಯ

ಚಾರಿತ್ರಿಕ ಐತಿಹ್ಯ

ಜನಪದ ನಿರುಕ್ತಿಯ ಐತಿಹ್ಯ

ವಿವರಣಾತ್ಮಕ ಐತಿಹ್ಯ[15]

ಹೊಳೆ, ಕೆರೆ, ಸರೋವರಗಳಿರುವೆಡೆಯಲ್ಲಿ ಪ್ರವಾಹ ಐತಿಹ್ಯಗಳು ಕಂಡುಬರುತ್ತವೆ. ಇವುಗಳ ಬಗೆಗೆ ಆಳ ಕಂಡು ಹಿಡಿಯಲು ಹೋಗಿ ಮುಳುಗಿದ ಕಥೆ, ಚಿನ್ನದ -ಬೆಳ್ಳಿಯ ರಥ ಮುಳುಗಿದ ಕಥೆಗಳಿವೆ. ಸನಾತನ ನಾಗರೀಕತೆ ಹೊಂದಿ ಭಾರತದಲ್ಲಿಯೂ ಕೂಡ ಪ್ರತಿಯೊಂದು ನದಿ, ಪರ್ವತ ಮತ್ತು ಸರೋವರಗಳು ಹಲವು ಐತಿಹ್ಯಗಳನ್ನು ಹೊಂದಿದೆ.

ಆರಾಧನಾ ಮಂದಿರ, ಸೇತುವೆ, ಕೆರೆ ದಂಡೆ, ಕಟ್ಟಡ, ಕೋಟೆಗಳು ನಿಲ್ಲಲು ಮಾಡಿದಂತಹ ಬಲಿ ಐತಿಹ್ಯಗಳು ಸಿಗುತ್ತವೆ. ಕೆರೆಗೆ ಹಾರ ಜಾನಪದ ಕಥೆ ಇದಕ್ಕೆ ಒಳ್ಳೆಯ ಉದಾಹರಣೆ.

ಅವಿಭಕ್ತ ಕುಟುಂಬ ವ್ಯವಸ್ಥೆಯಿರುವ ಹಲವಾರು ಕುಟುಂಬಗಳಲ್ಲಿ ಸತ್ತವರು ಪಿಶಾಚಿಗಳಾಗಿ ಶತ್ರುಗಳನ್ನು ಕಾಡುವ ಒಳ್ಳೆಯವರಿಗೆ ಒಳಿತು ಮಾಡುವ ಹಲವು ದೊಡ್ಡ ಪಿಶಾಚಿಗಳ ಐತಿಹ್ಯಗಳಾಗಿ ಅಸ್ತಿತ್ವದಲ್ಲಿದೆ.

ಐತಿಹಾಸಿಕ ವ್ಯಕ್ತಿಗಳ ಬಗೆಗೆ ರೂಪಗೊಂಡ ಹಲವಾರು ಐತಿಹ್ಯಗಳು ಇವೆ. ಅಲೆಗ್ಸಾಂಡರ್, ಕುಮಾರರಾಮ, ಪ್ಯಾಂಟವಮ್ ಮೊದಲಾದ ಪ್ರಖ್ಯಾತ ರಾಜರ ಬಗೆಗೆ ಇರುವ ಐತಿಹ್ಯಗಳೂ ಇವೆ. ಮಂಟೆಸ್ವಾಮಿ, ಜುಂಜಪ್ಪ , ಮೈಲಾರ ಲಿಂಗ, ಮಲೆಮಹಾದೇಶ್ವರ ಮೊದಲಾದ ಜಾನಪದ ಪೌರಾಣಿಕ ಹಿರಿಯರ ಐತಿಹ್ಯಗಳಿವೆ.

ಜಾನಪದ ನಿರುಕ್ತಿಗೆ ಸಂಬಂಧಿಸಿದ ಐತಿಹ್ಯಗಳು ಊರು, ನದಿ, ಬೆಟ್ಟ , ಸ್ಥಳ

ಇತ್ಯಾದಿಗಳ ಹೆಸರುಗಳಿಗೆ ಸಂಬಂಧಿಸಿದವುಗಳಾಗಿರುತ್ತದೆ. ಅರಸೀಕೆರೆ, ಸೂಳೆಕೆರೆ, ಬೆಂಗಳೂರಿಗೂ ಕೆಂಪೇಗೌಡನಿಗೂ ಇರುವ ಸಂಬಂಧ ಇತ್ಯಾದಿ.

ಸ್ಥಳೀಯ ಐತಿಹ್ಯಕ್ಕೆ ವಿವರಣಾತ್ಮಕ ಐತಿಹ್ಯವನ್ನು ಗಮನಿಸಿದಾಗ ಒಂದಲ್ಲಾ ಒಂದು ವಿಧದಲ್ಲಿ ಸ್ಥಳೀಯ ಐತಿಹ್ಯಗಳಲ್ಲಿಯೂ ಈ ಮೇಲಿನ ಕಾರ್ಯಕಾರಣ ಅಂಶವೇ ಪ್ರಧಾನವಾದುದು. ನಕ್ಷತ್ರಗಳ, ಸಸ್ಯಗಳ, ಪ್ರಾಣಿಗಳ, ಮಾನವ ಕುಲದ ಮೂಲ ಮತ್ತು ವೈಲಕ್ಷಣವನ್ನು ವಿವರಿಸುವುದಕ್ಕಾಗಿ ಹುಟ್ಟಿಕೊಂಡಂತಹುಗಳು.

ವಲಸೆ ಬಂದ ಐತಿಹ್ಯಗಳು : ಈ ಮೇಲಿನ ಸ್ಥಳೀಯ ಐತಿಹ್ಯಗಳ ವಿಭಜನೆ , ಪ್ರಸರಣದ ದೃಷ್ಟಿಯಿಂದ ಮುಖ್ಯವಾದವುಗಳಾದರೂ ಇವು ಐತಿಹ್ಯಗಳ ಅಗತ್ಯ ಗುಣಗಳನ್ನು ವಿವರಿಸುವುದಿಲ್ಲ. ಅನೇಕ ಬಾರಿ ವಲಸೆ ಐತಿಹ್ಯ ಮತ್ತು ಸ್ಥಳೀಯ ಐತಿಹ್ಯಗಳು ಸಮ್ಮಿಶ್ರಗೊಂಡು ಹೊಸ ರೂಪ ಪಡೆದಿರುತ್ತವೆ. ವಲಸೆ ಬಂದ ಐತಿಹ್ಯಗಳು ಯಾವುದೋ ಒಂದು ಸ್ಥಳ, ಪ್ರದೇಶದಲ್ಲಿ ಜನ್ಮತಾಳಿ ವಿಶ್ವವ್ಯಾಪಕತೆಯನ್ನು ಪಡೆದಿರುತ್ತದೆ. ಇವುಗಳು ಸ್ಥಳೀಯ ಐತಿಹ್ಯಕ್ಕಿಂತ ವಿಸ್ತಾರವಾದುದು. ಆಶಯಗಳು ಬಹುಸಂಖ್ಯಾತವಾಗಿದ್ದರೂ, ಸ್ಥಿರವಾದ ಐತಿಹ್ಯಗಳಾಗಿರುತ್ತದೆ. ಚಂದ್ರಹಾಸನ ಕಥೆ, ರಾಮಾಯಣದ ಕಥೆ, ಮಹಾಭಾರತದ ಕಥೆಗಳನ್ನು ಇವುಗಳಿಗೆ ಉದಾಹರಿಸಬಹುದು. ಚಂದ್ರಹಾಸನ ಕಥೆ ಮಹಾರಾಷ್ಟ್ರದಲ್ಲಿ ಜನ್ಮತಾಳಿ ಹೊರಗೆಲ್ಲಾ ಪ್ರಸಾರವಾಗಿ ಪ್ರಚಲಿತವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳನ್ನು ಕುರಿತು ಸಂಶೋಧನೆ ನಡೆಸಿದ ತಾಳ್ತಜೆ ವಸಂತಕುಮಾರ್‌ರವರು ಅಮೇರಿಕನ್ ಜಾನಪದ ತಜ್ಞ ಡಾರ್ಸನ್ ಮಾದರಿಯಲ್ಲಿ ವಲಸೆ ಬಂದ ಐತಿಹ್ಯಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ,

ವ್ಯಕ್ತಿಪ್ರಧಾನ ಐತಿಹ್ಯಗಳು

ಸ್ಥಳ ಪ್ರಧಾನ ಐತಿಹ್ಯಗಳು

ಘಟನಾ ಪ್ರಧಾನ ಐತಿಹ್ಯಗಳು[16]

ವ್ಯಕ್ತಿ ಪ್ತಧಾನ ಐತಿಹ್ಯಗಳಲ್ಲಿ ಅಸಾಮಾನ್ಯ ವ್ಯಕ್ತಿಯೊಬ್ಬನ ಸಾಧನೆಯ ನಿರೂಪಣೆಯನ್ನು ನೋಡಬಹುದು. ಈ ಐತಿಹ್ಯಗಳಲ್ಲಿ ಉಳಿದೆಲ್ಲಾ ವಿವರಗಳು ವಿಶಿಷ್ಟ ವ್ಯಕ್ತಿಯ ಸಾಧನೆಗೆ ಪೋಷಕವಾಗಿ ಬರುತ್ತದೆ. ವ್ಯಕ್ತಿ ಮಹತ್ವದ ಪ್ರಖರತೆಗೆ ಸ್ಥಳದ ಮಹತ್ವ

ಗೌಣವಾಗಿ ಕಂಡುಬರುತ್ತದೆ. ಇಂತಹ ಐತಿಹ್ಯಗಳಲ್ಲಿ ಕಂಡುಬರುವ ವ್ಯಕ್ತಿಗಳೆಂದರೆ, ಪೌರಾಣಿಕ ವ್ಯಕ್ತಿಗಳು ಮತ್ತು ಐತಿಹಾಸಿಕ ವ್ಯಕ್ತಿಗಳು. ಪೌರಾಣಿಕ ವ್ಯಕ್ತಿಗಳು ತಮ್ಮ ಪವಾಡ ಸದೃಶ ಸಾಧನೆಗಳಿಂದ ವಾಸ್ತವದಲ್ಲಿ ಐತಿಹಾಸಿಕ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಭೀಮ, ರಾಮ, ಸೀತೆ, ಹನುಮಂತ, ಕೃಷ್ಣ , ಪರಶುರಾಮ ಮೊದಲಾದವರು ಪೌರಾಣಿಕ ವ್ಯಕ್ತಿಗಳಾದರೆ, ಕುಮಾರವ್ಯಾಸ, ರಾಘವಾಂಕ, ವಿಕ್ರಮಾದಿತ್ಯ, ಕುಮಾರರಾಮ ಮೊದಲಾದವರು ಐತಿಹಾಸಿಕ ವ್ಯಕ್ತಿಗಳಾಗಿ ಕಂಡುಬರುತ್ತಾರೆ.

ಸ್ಥಳ ಪ್ರಧಾನ ಐತಿಹ್ಯಗಳು ಪ್ರಕೃತಿಯ ನಿಮಿತ್ತ ಸೃಷ್ಟಿಯಾದ ಐತಿಹ್ಯಗಳು. ಮುಖ್ಯವಾಗಿ ಈ ಐತಿಹ್ಯಗಳು ಸ್ಥಳದ ವಿಶಿಷ್ಟತೆಯನ್ನು ನಿರೂಪಿಸುತ್ತವೆ. ಹಾಗೆಯೇ ಆ ಸ್ಥಳದ ಹೆಸರಿನ ವ್ಯುತ್ಪತ್ತಿಗೆ ಕಾರಣವನ್ನು ನಿರೂಪಿಸುತ್ತದೆ. ಇವುಗಳಿಗೆ ನದಿಯ ಉಗಮ ಸ್ಥಾನ (ಶರಾವತಿ ನದಿ ಹುಟ್ಟುವ ಐತಿಹ್ಯ), ತೀರ್ಥಹಳ್ಳಿಯ ಹೆಸರಿನ ಐತಿಹ್ಯ ಇತ್ಯಾದಿಗಳನ್ನು ಉಲ್ಲೇಖಿಸಲಾಗಿದೆ.

ಘಟನಾ ಪ್ರಧಾನ ಐತಿಹ್ಯಗಳು ಮುಖ್ಯವಾಗಿ ಒಂದು ನಿರ್ದಿಷ್ಟ ಘಟನೆಗೆ ಪ್ರಧಾನವಾಗಿರುತ್ತವೆ. ವ್ಯಕ್ತಿ ಮತ್ತು ಸ್ಥಳಗಳು ಇಲ್ಲಿ 2ನೇ ಪಂಕ್ತಿಯಲ್ಲಿ ಬರುತ್ತವೆ. ಅನೇಕ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಇರುವುದರ ಬದಲು ಜನರ ಗುಂಪು ಅಥವಾ ಜನಸಮೂಹ ಇರುತ್ತದೆ. ಉದಾರಣೆಗೆ ಶೃಂಗೇರಿ ದೇವಾಲಯುವನ್ನು ಹೊಳೆಯಾಚೆಗೆ ಎಳೆಯಲು ಪ್ರಯತ್ನವನ್ನು ಹೇಳುವ ಐತಿಹ್ಯ ಘಟನಾ ಪ್ರಧಾನ ಐತಿಹ್ಯಕ್ಕೆ ಒಳ್ಳೆಯ ಉದಾಹರಣೆ.

ಹೀಗೆ ಐತಿಹ್ಯಗಳು ಅನೇಕ ರೀತಿಯಲ್ಲಿ ಕಂಡುಬಂದರೂ ಒಂದು ಚರಿತ್ರೆಯ ನಿಗೂಢ ಸತ್ಯವೊಂದನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡು ಜನರನ್ನು ಸಾಂಕೇತಿಕವಾಗಿ ಆಳುತ್ತಿವೆ.

ಟಿಪ್ಪಣಿಗಳು :

1. Editor-Thomsan 'Odhms dictionary' 1982 Page-629
2. Fohwler H.W.(ed.) 'Oxford dictiionary of current English' 1982 P-492
3. Kirkepatrict E.M. (ed.) Chambers 20th century dictionary, 1983, p-721
4. ಇಂಗ್ಲಿಷ್ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 1970 ಪುಟ : 660.
5. Kittel R.F. 'Kannada-English dictionary,1894 P-295.
6. ಸುವರ್ಣ ಜಾನಪದ ಲೇಖನಗಳು , ಸಂ-ಡಾ. ವೀರಣ್ಣ ದಂಡೆ, ಡಾ. ಶ್ರೀಪಾದ ಶೆಟ್ಟಿ. ಲೇ : ಡಾ. ಪುರುಷೋತ್ತಮ ಬಿಳುಮಲೆ 2006, ಪುಟ :45
7. Ghosh A.K. 'Llegends from Indian History,1985 (Intruduction.)
8. ಡಾ. ವಸಂತಕುಮಾರ ತಾಳ್ತಜೆ (ಅಪ್ರಕಟಿತ ಲೇಖನ) -ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು 1985, ಪುಟ :121.
9. 'ಪೂರ್ವೋಕ್ತ ' 2006 - ಪುಟ :47-48
10. 'ಪೂರ್ವೋಕ್ತ ' 2006 - ಪುಟ :49
11. Degh Linda Folk Narrative (In folklore and folklife (ed.) Dorson M.Richard) 1972, p-76
12. Degh Linda Folk Narrative (In folklore and folklife (ed.) Dorson M.Richard) 1972, p-77
13. ಕನ್ನಡ ವಿಶ್ವಕೋಶ, ಸಂಪುಟ -3, ಕನ್ನಡ ಅಧ್ಯಯನ ಸಂಸ್ಥೆ , ಮೈಸೂರು ವಿ.ವಿ., 1971,ಪುಟ : 257
14. ಅದೇ ಪುಟ : 257
15. ಅದೇ ಪುಟ : 257
16. ಪೂರ್ವೋಕ್ತ 1985, ಪುಟ : 124

ಅಧ್ಯಾಯ -2

ಐತಿಹ್ಯಗಳ ಸಾಂಸ್ಕೃತಿಕ-ಪೌರಾಣಿಕ ಅಧ್ಯಯನ

ಒಂದು ಪ್ರದೇಶದ ಭೌಗೋಳಿಕ ಮತ್ತು ಸಾಂಸ್ಕೃತಿಕ ಅಂಶಗಳಿಂದ ಅಲ್ಲಿನ ಸಾಂಸ್ಕೃತಿಕ ಜಗತ್ತು ಅನಾವರಣಗೊಳ್ಳುತ್ತದೆ. ಈ ರೀತಿಯ ಪ್ರಭಾವಗಳಿಂದ ಆ ಪ್ರದೇಶದ ಜನಪದ ವೈಶಿಷ್ಟ್ಯ ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಆದ್ದರಿಂದ ಯಾವುದೇ ಒಂದು ಪ್ರದೇಶದ ಐತಿಹ್ಯಗಳ ಅಧ್ಯಯನದ ಮೊದಲು ಅವುಗಳ ಭೌಗೋಳಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ತಿಳಿಯುವುದು ಅಗತ್ಯವೆನಿಸುತ್ತದೆ. ಮಲೆನಾಡಿನ ಹೃದಯ ಭಾಗವೆನಿಸಿರುವ ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿಗೆ ಸೀಮಿತಗೊಳಿಸಿ ಈ ಅಧ್ಯಯನ ನಡೆಸುತ್ತಿರುವುದರಿಂದ ತೀರ್ಥಹಳ್ಳಿಯ ಭೌಗೋಳಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಮಾತ್ರ ಇಲ್ಲಿ ವಿವರಿಸಿದ್ದೇನೆ.

ಭೌಗೋಳಿಕ ಹಿನ್ನೆಲೆ :

ತೀರ್ಥಹಳ್ಳಿ ತಾಲ್ಲೂಕು ದಟ್ಟ ಅರಣ್ಯ, ಬೆಟ್ಟ ಗುಡ್ಡಗಳಿಂದ ಕೂಡಿದ ಪ್ರಕೃತಿ ಸೌಂದರ್ಯದಿಂದ ಪ್ರದೇಶ. ಈ ಪ್ರದೇಶದ ಪೂರ್ವ, ಆಗ್ನೇಯ ಮತ್ತು ಈಶಾನ್ಯಾಭಿಮುಖವಾಗಿ ಅನೇಕ ಬೆಟ್ಟಗಳ ಸಾಲು ಹಬ್ಬಿಕೊಂಡಿದೆ. ಉಳಿದ ಪ್ರದೇಶಗಳಲ್ಲಿ ದಟ್ಟ ಕಾಡು, ಕಣಿವೆ, ಹೊಳೆ, ರಝುರಿ, ಅಲ್ಲಲ್ಲಿ ಬಯಲು ಪ್ರದೇಶಗಳಿವೆ. ತುಂಗಾ, ಶರಾವತಿ, ಮಾಲತಿ ಇಲ್ಲಿನ ಪ್ರಮುಖ ನದಿಗಳು. ಕೌಲೇದುರ್ಗ, ಕುಂದಾದ್ರಿ ಈ ತಾಲ್ಲೂಕಿನ ಎತ್ತರದ ಶಿಖರಗಳು.

ತೀರ್ಥಹಳ್ಳಿ ತಾಲ್ಲೂಕು ಕೇಂದ್ರ.ದಟ್ಟ ಅರಣ್ಯದಿಂದ ಕೂಡಿದ ಈ ತಾಲ್ಲೂಕು ಪ್ರದೇಶ ಅಧಿಕ ಮಳೆ ಬೀಳುವ ಪ್ರದೇಶಗಳಲ್ಲೊಂದು. ಇಲ್ಲಿಯ ವನ ಸಂಪತ್ತು ಸಮೃದ್ಧ ಮತ್ತು ವೈವಿಧ್ಯಮಯವಾಗಿದೆ. ಮಾವು, ಹೈಗ, ಹಲಸು, ಬೋಗಿ, ಸಂಪಿಗೆ, ನಂದಿ, ಹೊನ್ನೆ ಹೊಳೆಮತ್ತಿ, ಸಾಗುವಾನಿ, ಬೀಟೆ, ನಾಗಸಂಪಿಗೆ, ಗಂಧಗರಿಗೆ, ಶ್ರೀಗಂಧ, ನೇರಳು, ಹೆಬ್ಬಲಸು, ಬಸುರಿ, ಜಂಬೆ ಮೊದಲಾದ ಮರಗಳಿವೆ. ಮುಂಡಗದ್ದೆ ಪ್ರದೇಶದಲ್ಲಿ ಹೇರಳವಾದ ಬಿದಿರು ಇದೆ.

ದಟ್ಟ ಅರಣ್ಯಗಳಲ್ಲಿ ಅನೇಕ ವಿಧದ ಪ್ರಾಣಿ, ಪಕ್ಷಿಗಳು ಇಲ್ಲಿ ಕಾಣಸಿಗುತ್ತವೆ. ಕಾಡುಕೋಣ, ಹಂದಿ, ಕಾಡುಕುರಿ, ಬರ್ಕ, ಚಿರತೆ, ಕಡುವೆ, ಸಾರಂಗ, ಆನೆ, ಕಬ್ಬೆಕ್ಕು, ಪುಣಿಗಿನಬೆಕ್ಕು (ಪುನಗುಬೆಕ್ಕು), ಮುಸಿಯು, ಕೆಂಜಳಿಲು, ಮುಳ್ಳುಹಂದಿ (ಕಣೆ ಹಂದಿ),ಮೊಲ, ಉಡ, ನರಿ, ಕೋತಿ ಮೊದಲಾದ ನೂರಾರು ಪ್ರಾಣಿಗಳಿವೆ. ಕೋಗಿಲೆ, ನವಿಲು, ಗಿಳಿ, ಪಿಕಳಾರ, ತೇನೆಹಕ್ಕಿ, ಟುವ್ವಿಹಕ್ಕಿ, ಹುಳ್ಳಿಹಕ್ಕಿ, ಮಿಂಚುಳ್ಳಿ, ಕಾಜಾಣ ಮೊದಲಾದ ಪಕ್ಷಿಗಳು ಇಲ್ಲಿಯ ಕಾಡನ್ನು ಅಲಂಕರಿಸಿವೆ.

ಇಲ್ಲಿಯ ಹವಾಮಾನ ಕರ್ನಾಟಕದ ಇತರ ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶಗಳಂತೆಯೇ ಇದೆ. ಬೇಸಿಗೆ ಮತ್ತು ಮಳೆಗಾಲ ಹಿತಕರವಾಗಿದ್ದು ಚಳಿಗಾಲದಲ್ಲಿ ಚಳಿ ಜಾಸ್ತಿ ಇರುತ್ತದೆ. ದಕ್ಷಿಣದ ಚಿರಾಪುಂಜಿ ಎಂದೇ ಹೆಸರಾಗಿರುವ ಆಗುಂಬೆಯಲ್ಲಿ ವಾರ್ಷಿಕ ಸುಮಾರು 7600 ಮಿ.ಮೀ.ಗಿಂತ ಅಧಿಕ ಮಳೆಯಾಗುತ್ತದೆ. ಇಲ್ಲಿನ ಭೂಗರ್ಭದಲ್ಲಿ ಖನಿಜ ಸಂಪತ್ತು ವಿಫುಲವಾಗಿದೆ. ಆಗುಂಬೆ ಬಳಿಯ ಸಹ್ಯಾದ್ರಿ ಶ್ರೇಣಿಯಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪವಿದೆ. ತಾಲ್ಲೂಕಿನ ಬೇರೆ ಬೇರೆ ಕಡೆ ಮ್ಯಾಂಗನೀಸ್, ಸುಣ್ಣದ ಗಣಿಗಳಿವೆ.

ಕೃಷಿ ಪ್ರಧಾನ ಪ್ರದೇಶವಾದ ತೀರ್ಥಹಳ್ಳಿ ತಾಲ್ಲೂಕು ಮಳೆಯನ್ನೇ ಆಶ್ರಯಿಸಿ ಹಲವು ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದೆ. ಭತ್ತ ಇಲ್ಲಿನ ಪ್ರಮುಖ ಆಹಾರ ಬೆಳೆ. ಅಡಿಕೆ, ಏಲಕ್ಕಿ ಮತ್ತು ಕಾಳುಮೆಣಸು ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಅವರೆ, ಹುರುಳಿ, ಉದ್ದು, ಎಳ್ಳು, ಟೊಮೆಟೋ ಇತರ ಕೃಷಿ ಬೆಳೆಗಳು. ಕಾಫಿ, ಕಬ್ಬು , ತೆಂಗು, ಮೆಣಸು ಇತರ ಉಪಬೆಳೆಗಳಾಗಿ ಇಲ್ಲಿನ ರೈತರು ಬೆಳೆಯುತ್ತಾರೆ. ತಾಲ್ಲೂಕಿನ ಮಂಡಗದ್ದೆ ಮತ್ತು ಭೀಮನಕಟ್ಟೆ ಪುರಾತತ್ವ ಇತಿಹಾಸ ಮತ್ತು ಪೌರಾಣಿಕ ಮಹತ್ವದ ಸ್ಥಳಗಳಾಗಿವೆ. ಆಗುಂಬೆಯ ಸೂರ್ಯಾಸ್ತ ಮತ್ತು ಮಂಡಗದ್ದೆಯ ಪಕ್ಷಿಧಾಮ ನಿಸರ್ಗ ರಮಣೀಯತೆಯ ಕ್ಷೇತ್ರಗಳಲ್ಲಿ ಪ್ರಮುಖವಾದವು. ತೀರ್ಥಹಳ್ಳಿ ತಾಲ್ಲೂಕು ಆರಂಭದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರಮುಖ ಭಾಗ. ಇಲ್ಲಿಯ ಆರಗ ಪ್ರಾಂತೀಯ ಸ್ಥಳವಾಗಿತ್ತು. ವಿಜಯನಗರದ ಪಥನಾ ನಂತರ ಕೆಳದಿ ಅರಸ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟು 1763ರ ಹೈದರಾಲಿಯ ಧಾಳಿಯ ನಂತರ ಮೈಸೂರು ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿತು. 1799ರ

ನಂತರ ಹಳೇ ಮೈಸೂರು ಪ್ರಾಂತ್ಯಕ್ಕೆ ಸೇರಿತು.

ತೀರ್ಥಹಳ್ಳಿ ತಾಲ್ಲೂಕಿನ ಸಾಂಸ್ಕೃತಿಕ ವಿವರಣೆ :

ಸಹ್ಯಾದ್ರಿ ಶ್ರೇಣಿಯ ತಪ್ಪಲಿನಲ್ಲಿ ಬರುವ ಮಲೆನಾಡು ಹಲವು ವೈವಿಧ್ಯತೆಗಳನ್ನು ತನ್ನೊಡಲೊಳಗೆ ಹುದುಗಿಸಿಟ್ಟುಕೊಂಡಿದೆ. ಇಲ್ಲಿ ಹಲವು ಸಾಮಂತರು, ಪಾಳೇಗಾರರು, ತಮ್ಮದೇ ಆದ ಪರಿಧಿಯಲ್ಲಿ ಆಳ್ವಿಕೆ ನಡೆಸಿ ಕುರುಹುಗಳನ್ನು ಬಿಟ್ಟು ಹೋಗಿದ್ದಾರೆ. ಇಲ್ಲಿನ ಜನಪದರ ಮೌಖಿಕ ಪರಂಪರೆಯಲ್ಲಿ ಅಲ್ಲಲ್ಲಿ ಇಂತಹ ಇತಿಹಾಸ ಪುರುಷರ ಕುರುಹುಗಳ ಬಗ್ಗೆ ಪ್ರಸ್ತಾಪವಾಗುತ್ತಲೇ ಇರುತ್ತದೆ.

ಆಧುನಿಕ ಕಾಲದ ಪರಿಸರದಲ್ಲಿ ಬ್ರಿಟೀಷ್ ವಸಾಹತುಶಾಹಿ, ಭಾರತೀಯ ಜನಪದ ಸಮಾಜದಲ್ಲಿ ಪರೋಕ್ಷವಾಗಿ ತನ್ನ ದಟ್ಟ ಪ್ರಭಾವ ಬೀರಿದೆ. ಅವರ ಸಂಸ್ಕೃತಿಯಲ್ಲಿನ ಎಷ್ಟೋ ಪ್ರಭಾವಗಳಿಂದಾಗಿ ಹೊಸ ಅಂಶಗಳು ಸೇರಿಕೊಂಡು ಹಳೆಯ ರೀತಿ –ನೀತಿಗಳು ಕಳೆದು ಹೋಗಿವೆ. ಅವು ಬದುಕಿನ ನಾಗರೀಕತೆಯನ್ನು ಹೆಚ್ಚಿಸುವಲ್ಲಿ ಫಲಕಾರಿಯಾದವೇ ಹೊರತು, ಬದುಕಿನ ಅನಂತತೆಯನ್ನು ನಿರಂತರವಾದ ನಗುವಿನಲ್ಲಿ ಬಿಟ್ಟು ಹೋಗಲಿಲ್ಲ.

ಇಂತಹದರ ನಡುವೆ, ಸಹ್ಯಾದ್ರಿ ತಪ್ಪಲಿನ ಅದರಲ್ಲೂ ತೀರ್ಥಹಳ್ಳಿ ಸುತ್ತಮುತ್ತಲಿನ ಜನ ಸಮುದಾಯದ ನಡುವೆ ಇದ್ದ ಆಚರಣೆಗಳು, ಸಂಪ್ರದಾಯಗಳು, ನಂಬಿಕೆ , ಗಾದೆಗಳು, ವರ್ತನೆಗಳು, ಉಡುಗೆ –ತೊಡುಗೆಗಳು, ಅಡುಗೆ, ಮಾತು, ಸನ್ನೆ , ಸೊಲ್ಲು , ಪಿಸುಮಾತು ಮುಂತಾದವುಗಳ ಕಡೆಗೆ ಹೊರಳಿ ನೋಡುವುದು ಒಳಿತು.

ಒಕ್ಕಲಿಗರು , ಈಡಿಗರು ಎಂದು ಕರೆಯಿಸಿಕೊಳ್ಳುವ ದೀವರು, ಬ್ರಾಹ್ಮಣರು , ಬಿಲ್ಲವರು, ಭೋವಿ, ಬಂಟರು, ಹರಿಜನ –ಗಿರಿಜನರು ಮುಂತಾಗಿ ಅನೇಕ ಜಾತಿ ವರ್ಗದ ಜನರು ಇಲ್ಲಿದ್ದಾರೆ.

ಇಲ್ಲಿನ ಮಳೆ, ಚಳಿ, ಬಿಸಿಲು ಎಲ್ಲವೂ ಕಾಲದ ಪರಿಕ್ರಮದಲ್ಲಿ ತನ್ನದೇ ಆದ ನಡುವಳಿಕೆಗಳಿಗೆ ಜನಪದರನ್ನು ಬಗ್ಗಿಸಿಕೊಂಡು ಸಂಸ್ಕೃತಿಯನ್ನು ಸೃಷ್ಟಿಸುತ್ತಾ , ಕೆಲವನ್ನು ಮರೆಯುವಂತೆ ಪ್ರೇರೇಪಿಸುತ್ತಾ ಸಾಗುತ್ತದೆ. ಬಹುತೇಕ ರೈತಾಪಿ ಬದುಕು ಅದಕ್ಕೆ ಪೂರಕವಾಗಿ

ವರ್ತಿಸುತ್ತದೆ. ವ್ಯವಸಾಯ ಪ್ರಧಾನವಾದ ಈ ನೆಲದಲ್ಲಿ ತನ್ನದೇ ಆದ ಸಂಸ್ಕೃತಿ ರೂಪುಗೊಳ್ಳುತ್ತದೆ. ಸಸಿ ನೆಟ್ಟಿನಿಂದ ಹಿಡಿದು ಗದ್ದೆ ಕೊಯ್ಲು, ಅಡಿಕೆ ಸುಲಿತ , ಬೇಸಾಯ ಎಲ್ಲವೂ ಸಮ್ಮಿಳಿತಗೊಳ್ಳುತ್ತದೆ.

ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗದ ರೈತಾಪಿ ಜನರಲ್ಲಿ '' ಮೈ ಆಳಿನ '' ವ್ಯವಹಾರವಿದ್ದು, ಅದು ಈ ನೆಲದ ಆರ್ಥಿಕ ನೀತಿ ಹಾಗೂ ಶ್ರಮದ ಹಂಚಿಕೆಯ ಆಧಾರದ ಮೇಲೆ ನಿಂತಿರುತ್ತದೆ. ಒಬ್ಬರ ಮನೆಯ ವ್ಯವಹಾರದ ಬದುಕಿಗೆ ಇನ್ನೊಬ್ಬರು ನೆರವಾಗುವುದು ಅದು ಸಸಿನೆಟ್ಟಿ , ಒಕ್ಕಲು, ಕೊಯ್ಲು, ಮನೆ ಹಚ್ಚುವುದು , ಬೇಸಾಯ ಎಲ್ಲವನ್ನೂ ಒಳಗೊಂಡಿರುತ್ತದೆ.

ಭೂಮಿ ಹುಣ್ಣಿಮೆ, ದೀಪಾವಳಿ, ಪಿತೃಪಕ್ಷಗಳನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಭೂಮಿ ಹೂಣ್ಣಿಮೆ ಹಬ್ಬದಂದು ರಾತ್ರಿಯಿಡೀ ಎಚ್ಚರವಿದ್ದು ಅಡಿಗೆ ಮಾಡಿ ಎಡೆಯಿಟ್ಟು ಉಣ ಬಡಿಸಲಾಗುತ್ತದೆ. ನಿದ್ದೆ ಮಾಡಿದರೆ ಫಸಲು ಚೆಟ್ಟಾಗುತ್ತದೆ (ಕಳಂತೆ) ಎಂಬ ನಂಬಿಕೆ ಇದರ ಹಿಂದಿದೆ. ಬಸುರಿಯಾದ ಭೂಮಿತಾಯಿ ಬಯಕೆ ಬಯಸುತ್ತಾಳೆ ಎಂಬ ನಂಬಿಕೆಯ ಹಿನ್ನಲೆಯಲ್ಲಿ ಈ ಹಬ್ಬ ಆಚರಣೆಗೊಳ್ಳುತ್ತದೆ. ಭೂಮಿ ಫಲವತ್ತತೆಯ ಸಂಕೇತ. ಆ ಕಾರಣಕ್ಕಾಗಿಯೇ ಅದನ್ನು ಹೆಣ್ಣು ಎಂದು ಪರಿಭಾವಿಸಲಾಗುತ್ತದೆ. ಹಾಗಾಗಿ ಅದಕ್ಕೆ ಹೆಣ್ಣಿನ ಎಲ್ಲಾ ಸ್ಥಾನಮಾನಗಳನ್ನು ರೈತಾಪಿ ಬದುಕಿನ ಜನ ನೀಡುತ್ತಾರೆ.

ಸಹ್ಯಾದ್ರಿ ಪರಿಸರದ ಜನರ ಅಡುಗೆ , ಊಟ ಎಲ್ಲವೂ ಭಿನ್ನವಾಗಿದ್ದು , ಸಾಂಪ್ರದಾಯಿಕವಾಗಿ 'ಕಡುಬು' (ಬಹುಜನ ಅಪೇಕ್ಷಿತ ಉಪಹಾರ) ದೇವರ ಹರಕೆ, ಅಂಟಿಕೆ –ಪಂಟಿಕೆ ಔಂತ್ಲಕ್ಕೆಂದು ಪಾತ್ರೆ ಪಗಡಿ ಕೆಲವರ ಮನೆಯಲ್ಲಿ ಇರಿಸಲಾಗುತ್ತಿತ್ತು. ಹಿಟ್ಟು ಕುಟ್ಟುವ ಒನಕೆ, ಮರಗಿ, ಸರಗೊಲ್ಲು ನೂರಾರು ಜನರ ಅಡಿಗೆಗೆ ಸಾಕಾಗುವಂತಿರುತ್ತದೆ. ಕಟ್ಲೆಮನೆಯಲ್ಲಿ ಕಡುಬು ವಿಶೇಷ ಸ್ಥಾನ ಪಡೆಯುತ್ತದೆ. ಶೂದ್ರ ಪರಂಪರೆಯಲ್ಲಿ ಆಹಾರದ ಬಹುತೇಕ ಪಾಲನ್ನು ಮಾಂಸ, ಮೀನು, ಸಂಡಿಗೆಯೇ ಆಕ್ರಮಿಸಿಕೊಳ್ಳುತ್ತದೆ. ಶಿಕಾರಿ ಇಲ್ಲಿನ ರೈತಾಪಿ ಬದುಕಿನ ದೈನಂದಿನ ಅಂಗವಾಗಿಯೇ ಮಾರ್ಪಾಡಾಗಿದ್ದು, ಅವಿಭಕ್ತ ಕುಟುಂಬಗಳ ಕೆಲವು ಮನೆಗಳಲ್ಲಿ ಶಿಕಾರಿ ಮಾಡಲೆಂದೇ ಆಳೊಂದನ್ನು ನಿಯೋಜಿಸಲಾಗುತ್ತಿತ್ತು.

ಈ ಪ್ರದೇಶದ ಬಹುತೇಕ ಕುಟುಂಬಗಳು ಜೈನ ಧರ್ಮಕ್ಕೆ ಸೇರಿದ್ದವು ಎನ್ನುವುದಕ್ಕೆ ಕೆಲವು ಆಚರಣೆಗಳಲ್ಲಿ ಈಗಲೂ ಕುರುಹು ಸಿಗುತ್ತದೆ. ಪಿತೃಗಳನ್ನು ಸ್ಮರಿಸುವ ಸಲುವಾಗಿ ಇಡುವ ಎಡೆಯಲ್ಲಿ ಮಾಂಸ, ಮೀನುಗಳನ್ನು ಉಣಬಡಿಸದೇ ಎಡೆಯ ಸಾಲಿಗೆ ಅಡ್ಡಲಾಗಿ ''ಜೈನೆಡೆ'' ಯನ್ನು ಪ್ರತ್ಯೇಕವಾಗಿ ಇರಿಸಿ ಪೂಜಿಸಲಾಗುತ್ತದೆ.

ಧಾರ್ಮಿಕ ಆಚರಣೆಗಳ ಹಿನ್ನಲೆಯಲ್ಲಿ ತೀರ್ಥಹಳ್ಳಿಯ ಎಳ್ಳಮಾವಾಸ್ಯೆ ಜಾತ್ರೆ ಜಗತ್ಪ್ರಸಿದ್ಧ. ಕವುಲೇದುರ್ಗ, ತೀರ್ಥಹಳ್ಳಿ , ಆರಗ, ಅಲುಕೊಳ್ಳಿ , ಬುಕ್ಲಾಪುರದ ಮಾರಿ ಜಾತ್ರೆಗಳು ಈ ಪ್ರದೇಶದ ಗ್ರಾಮದೈವಗಳ ಆರಾಧನೆಯ ಪ್ರಮುಖ ಆಕರ್ಷಕ ಹಬ್ಬಗಳು. ಉಡುಗೆ -ತೊಡುಗೆಗಳ ವಿಚಾರಕ್ಕೆ ಬಂದರೆ ನಾಮಧಾರಿಗಳಾಗಿ ಬಿಳಿ ಕಚ್ಚೆಪಂಚೆ, ಉದ್ದ ನಿಲುವಂಗಿ , ಕರಿ ಟೋಪಿ, ಉದ್ದ ರುಮಾಲು ಪುರುಷರು ಧರಿಸುವ ಉಡುಪುಗಳು. ಸ್ತ್ರೀಯರ ಉಡುಪಿನ ವಿಚಾರಕ್ಕೆ ಬಂದಾಗ ಗೊಬ್ಬೆ ಸೀರೆ ಮಲೆನಾಡ ಸ್ತ್ರೀಯ ಲಾಂಛನದಂತೆ ಬಿಂಬಿಸುತ್ತಿದೆ. ರೈತರು ಬಳಸುವ ಕೃಷಿಯ ಉಪಕರಣಗಳಲ್ಲಿ ನೇಗಿಲು, ನೊಗ, ಜೊತಗ, ಬಾಯಿಕುಕ್ಕೆ ಪ್ರಮುಖವಾಗಿ ಕಾಣಸಿಗುತ್ತವೆ. ವಿಪರೀತ ಮಳೆ ಬೀಳುವ ಪ್ರದೇಶವಾದ ಇಲ್ಲಿ ಮಳೆಗಾಲದಲ್ಲಿ ಪುರುಷರು ಕರಿಕಂಬಳಿ, ಹಾಳೆಕೊಟ್ಟೆ (ಅಡಿಕೆ ಹಾಳೆಯಿಂದ ತಯಾರಿಸಿದ ಟೋಪಿ), ಸ್ತ್ರೀಯರು ಗೊರಬು, ತಳಲೆ (ಅಡಿಕೆ ಹಾಳೆಯಿಂದ ತಯಾರಿಸಿದ ಟೋಪಿ), ಒಕ್ಕಲುತನದಲ್ಲಿ ಬಳಸುವ ಪ್ರಮುಖ ಮಲೆನಾಡ ಲಾಂಛನದಂತಿದೆ.

ಈ ಒಟ್ಟು ಮಲೆನಾಡ ಭೌಗೋಳಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುನ್ನು ಗಮನಿಸಿದಾಗ ಇದರೊಳಗೆ ಅಸಂಖ್ಯಾತ ಐತಿಹ್ಯಗಳು ಅಡಗಿವೆ. ಇದನ್ನು ಸ್ಥೂಲವಾಗಿ ಗಮನಿಸುವುದು ಅಗತ್ಯವಾಗಿದೆ. ಆದ್ದರಿಂದಲೇ ನನ್ನ ಸಂಪ್ರಬಂಧದಲ್ಲಿ ತೀರ್ಥಹಳ್ಳಿ ತಾಲ್ಲೂಕು ಐತಿಹ್ಯಗಳ ಬಗೆಗೆ ಒಂದು ವಿಹಂಗಮನ ನೋಟ ನೋಡಲು ಪ್ರಯತ್ನಿಸಿದ್ದೇನೆ.

ತೀರ್ಥಹಳ್ಳಿ ಕ್ಷೇತ್ರದ ಸ್ಥಳ ಪುರಾಣದ ಐತಿಹ್ಯ :

ತಾಲ್ಲೂಕಿನ ಕೇಂದ್ರ, ಆಡಳಿತ ಕೇಂದ್ರ ತೀರ್ಥಹಳ್ಳಿ. ತೀರ್ಥಹಳ್ಳಿಗೆ ಮೊದಲು ತೀರ್ಥರಾಜಪುರ ಎಂಬ ಹೆಸರಿತ್ತು. ಪೌರಾಣಿಕ ಹಿನ್ನೆಲೆಯಿಂದ ಇಲ್ಲಿಯ ಹೆಸರಿನ ಹಿಂದಿನ ಐತಿಹ್ಯವೆಂದರೆ, ಪರಶುರಾಮನಿಗೆ ಸಂಬಂಧಿಸಿದ ಮುಖ್ಯವಾದ ಎರಡು ಐತಿಹ್ಯ ಈ ಹೆಸರಿನಲ್ಲೇ ಇದೆ. ಅವುಗಳಲ್ಲಿ ಹಿಂದೆ ಪರಶುರಾಮ ಲೋಕಕಂಠಕರನ್ನು ತನ್ನ ಪರಶುವಿನಿಂದ ಸಂಹರಿಸಿ ತನ್ನ ಪೂರ್ವಜರಿಗೆ ಸದ್ಗತಿ ತರಲೆಂದು ಸ್ನಾನ ಮಾಡಿ ತಿಲತರ್ಪಣವನ್ನು ಇಲ್ಲಿಯ ತುಂಗಾ ನದಿಯಲ್ಲಿ ನೀಡಿದ್ದರಿಂದ ಇದು ಶ್ರೇಷ್ಠ ತೀರ್ಥಾವಳಿಯಾಗಿ ತೀರ್ಥಹಳ್ಳಿ ಎಂದು ಹೆಸರಾಗಿದೆ. ತೀರ್ಥ ತರ್ಪಣ ನೀಡಿದ ದಿನ ಎಳ್ಳಮಾವಾಸ್ಯೆ ಜಾತ್ರೆ ನಡೆಸಲಾಗುತ್ತಿದೆ ಎಂದು ಎಳ್ಳಮಾವಾಸ್ಯೆ ಜಾತ್ರೆ ಮತ್ತು ತೀರ್ಥಹಳ್ಳಿ ಸ್ಥಳದ ಐತಿಹ್ಯವನ್ನು ವಕ್ತೃ ಶ್ರೀ ರಾಜಶೇಖರ ಭಟ್ ಹೇಳುತ್ತಾರೆ.

ರಾಮತೀರ್ಥದ ಪೌರಾಣಿಕ ಐತಿಹ್ಯ :

ಇನ್ನೊಂದು ಪೌರಾಣಿಕ ಐತಿಹ್ಯವೆಂದರೆ ಮಹರ್ಷಿ ಜಮದಗ್ನಿಯ ಆಶ್ರಮದಲ್ಲಿ ಕ್ಷತ್ರಿಯ ರಾಜ ಕಾರ್ತವೀರ್ಯಾರ್ಜುನ ತನ್ನ ಪರಿವಾರ ಸಮೇತ ತಂಗಿದ್ದನು. ಆಶ್ರಮದಲ್ಲಿ ಸಾವಿರಾರು ಜನರನ್ನು ಋಷಿಯ ಆಶ್ರಮದಲ್ಲಿ ಯಥೋಚಿತವಾಗಿ ಸತ್ಕರಿಸಿದಾಗ ರಾಜನಿಗೆ ಆಶ್ಚರ್ಯವಾಗುತ್ತದೆ. ಸಾಮಾನ್ಯ ಋಷಿಯ ಆಶ್ರಮದಲ್ಲಿ ಈ ಬಗೆಯ ಸತ್ಕಾರ ಹೇಗೆ ಸಾಧ್ಯವಾಯಿತು ? ಎಂದು ಸಂದೇಹಪಟ್ಟಾಗ ಮಹರ್ಷಿ ಜಮದಗ್ನಿಯ ಪತ್ನಿ ರೇಣುಕಾದೇವಿ ಇದಕ್ಕೆಲ್ಲಾ ಕಾರಣ ತಮ್ಮ ಆಶ್ರಮದಲ್ಲಿರುವ ಕಾಮಧೇನು (ಕಾಂಜೇನಿ) ಎಂದು ತಿಳಿದಳು. ರಾಜನಾದ ಕಾರ್ತವೀರ್ಯಾರ್ಜುನನಿಗೆ ಆ ಕಾಮಧೇನುವನ್ನು ತನ್ನದಾಗಿಸಿಕೊಳ್ಳುವ ದುರಾಸೆ ಹುಟ್ಟಿ ತನಗೆ ನೀಡುವಂತೆ ಋಷಿಪತ್ನಿ ರೇಣುಕೆಯನ್ನು ಕೇಳಿಕೊಳ್ಳುತ್ತಾನೆ. ಅತಿಯಾಸೆ ಸಲ್ಲದೆಂದು ರೇಣುಕೆ ಬುದ್ಧಿ ಹೇಳಿದರೂ ಮಣಿಯದಿದ್ದಾಗ ಒತ್ತಾಯಕ್ಕೆ ಮಣಿದು ರೇಣುಕೆ ಕಾಮಧೇನುವನ್ನು ನಿನ್ನ ಜೊತೆ ಬಂದರೆ ಕರೆದುಕೊಂಡು ಹೋಗು ಎಂದು ಹೇಳುತ್ತಾಳೆ. ಆದರೆ, ಕಾಮಧೇನು ಬರಲು ನಿರಾಕರಿಸಿ ಜಮದಗ್ನಿ ಹೊರತು ಯಾರೊಂದಿಗೂ ಹೋಗಲು ಕಾಮಧೇನು ಒಪ್ಪುವುದಿಲ್ಲ. ಕೊನೆಗೆ ದುಷ್ಟ ರಾಜು ಜಮದಗ್ನಿಯ ತಲೆ ಕಡಿದು ಕಾಂಜೇನಿಯ ತಲೆಗೆ ಕಟ್ಟಿದರೆ ಬರಬಹುದೆಂದೆನಿಸಿ ಜಮದಗ್ನಿಯ ತಲೆಯನ್ನು ಕಡಿದು ಕಾಮಧೇನುವಿನ ತಲೆಗೆ ಕಟ್ಟುತ್ತಾನೆ. ಆದರೆ, ಜಮದಗ್ನಿಯ ತಲೆ ಕೈಲಾಸಕ್ಕೆ ಹಾರಿ ಹೋಗುತ್ತದೆ. ಕಾಮಧೇನು ಸ್ವರ್ಗಕ್ಕೆ ತೆರಳುತ್ತದೆ. ಕೈಲಾಸದಲ್ಲಿ ತಪೋನಿರತನಾಗಿದ್ದ ಪರಶುರಾಮ ತನ್ನ ತಪಶ್ಶಕ್ತಿಯಿಂದ ಜಮದಗ್ನಿಯ ತಲೆ

ಕೈಲಾಸಕ್ಕೆ ಬಂದುದರ ಹಿನ್ನೆಲೆ ತಿಳಿದು ಕೂಡಲೇ ಆಶ್ರಮಕ್ಕೆ ಬಂದು ತಾಯಿಯಿಂದ ವಿವರ ತಿಳಿದು ತನ್ನ ತಪಶ್ಯಕ್ತಿಯಿಂದ ತಂದೆಯುನ್ನು ಬದುಕಿಸಿದ. ದ್ರೋಹಿಯಾದ ಕಾರ್ತವೀರ್ಯಾರ್ಜುನ ಮತ್ತು ಶತ್ರುಗಳನ್ನು ಸಂಹರಿಸಿದ. ಪುನಃ ಬದುಕಿದ ಮಹಾಕೋಪಿಷ್ಠ ಜಮದಗ್ನಿ ಕಾಂಜೇನಿಯ ರಹಸ್ಯ ತಿಳಿಸಿದ ರೇಣುಕೆಯ ತಲೆ ಕಡಿಯುವಂತೆ ತನ್ನ ಮಕ್ಕಳಿಗೆ ಆಜ್ಞಾಪಿಸಿದನು. ಆದರೆ ಯಾವೊಬ್ಬ ಮಕ್ಕಳೂ ಮಾತೃ ಹತ್ಯೆಗೆ ಮುಂದಾಗದಿದ್ದಾಗ ಪರಶುರಾಮ ತನ್ನ ತಂದೆಯ ಮಾತನ್ನು ನಡೆಸಿ ತನ್ನ ಪರಶುವಿನಿಂದ ರೇಣುಕಾದೇವಿಯ ತಲೆ ಕಡಿದು ಪುನಃ ತಂದೆಯಿಂದ ವರದ ರೂಪದಲ್ಲಿ ರೇಣುಕಾ ದೇವಿಯನ್ನು ಬದುಕಿಸುತ್ತಾನೆ. ಆದರೂ, ಮಾತೃ ಹತ್ಯಾ ದೋಶದಿಂದ ವಿಮುಕ್ತಿ ಪಡೆಯಲು ತೀರ್ಥಯಾತ್ರೆ ಕೈಗೊಂಡು ತಾನು ಸಂದರ್ಶಿಸಿದ ಎಲ್ಲಾ ತೀರ್ಥಕ್ಷೇತ್ರಗಳ ನದಿಯಲ್ಲಿ ತಾಯಿಯನ್ನು ಕಡಿದ ಪರಶು(ಕೊಡಲಿ)ವನ್ನು ತೊಳೆಯುತ್ತಾ ಸಾಗಿದರೂ ಅದರಲ್ಲಿ ಹಿಡಿದಿದ್ದ ಎಳ್ಳು ಕಾಳಿನಷ್ಟು ಗಾತ್ರದ ರಕ್ತದ ಕಲೆ ಹಾಗೆಯೇ ಉಳಿದಿತ್ತು. ಕೊನೆಗೆ ತುಂಗಾ ನದಿಯ ಈ ಪ್ರದೇಶದಲ್ಲಿ ಕೊಡಲಿಯನ್ನು ತೊಳೆದಾಗ ಎಳ್ಳು ಕಾಳಿನಷ್ಟು ಅಂಟಿದ್ದ ರಕ್ತದ ಕಲೆ ತೊಳೆಯಲ್ಪಡುತ್ತದೆ. ಆಗ ಪರಶುರಾಮುನಿಗೆ ಮಾತೃ ಹತ್ಯಾದೋಶ ಪರಿಹಾರವಾಗುತ್ತದೆ ಮತ್ತು ಪಾಪವನ್ನು ಕಳೆದ ಈ ಪ್ರದೇಶದ ತುಂಗಾ ನದಿ ಪವಿತ್ರ ತೀರ್ಥವಾಗುತ್ತದೆ. ಕೊಡಲಿಯನ್ನು ತೊಳೆದ ಸ್ಥಳ ರಾಮತೀರ್ಥವೆಂತಲೂ, ಅನೇಕ ತೀರ್ಥಗಳಿಗಿರದ ಮಹಾಶಕ್ತಿ ಈ ತೀರ್ಥದಲ್ಲಿದೆ ಎಂದು ಭಾವಿಸಿದ ಫರಸುರಾಮ ಈ ತೀರ್ಥಕ್ಕೆ ತೀರ್ಥಗಳ ರಾಜ ಎಂದು ಕರೆದು ಈ ಪ್ರದೇಶಕ್ಕೆ **ತೀರ್ಥರಾಜಪುರ** ಎಂದು ನಾಮಕರಣ ಮಾಡಿದನು ಎನ್ನುವ ಈ ಸ್ಥಳದ ಐತಿಹ್ಯ ಇಂದಿಗೂ ಪ್ರಚಲಿತವಾಗಿದೆ. ಈ ಐತಿಹ್ಯ ಪರಶುರಾಮುನಿಗೆ ಸಂಬಂಧಿಸಿದ ಕತೆಯೊಡನೆ ರಾಮತೀರ್ಥದ ಕೊಂಡದ ಮಹಿಮೆಯನ್ನೂ ಹೇಳುವ ಉದ್ದೇಶ ಹೊಂದಿದೆ.

ತೀರ್ಥರಾಜಪುರದ ಜಾನಪದ ಐತಿಹ್ಯ :

ಪೌರಾಣಿಕ ಹಿನ್ನೆಲೆಯಲ್ಲಿ ರಾಮತೀರ್ಥದ ಬಗೆಗಿರುವ ಐತಿಹ್ಯದಂತೆಯೇ ಜಾನಪದ ಕಥೆಯ ರೂಪದಲ್ಲಿ ಇನ್ನೊಂದು ಐತಿಹ್ಯವಿದೆ. ಸಾಮಾನ್ಯ ಜನಪದರ ಬಾಯಿಮಾತಿನಲ್ಲೇ ಪೌರಾಣಿಕ ಅಂಶಗಳ ಸ್ಪರ್ಶ ಕೊಟ್ಟಾಗ ಹೇಗೆ ಹೊಸರೂಪ ತಳೆಯುವುದು ಎಂಬುದಕ್ಕೆ ರಾಮಕೊಂಡದ ಜನಪದ ಐತಿಹ್ಯವನ್ನು ಉದಾಹರಿಸಬಹುದು.

ಜನಪದ ರಾಮಾಯಣ ಹೇಳುವ ಜನಪದರು ರಾಮಕೊಂಡದ ಬಗ್ಗೆ ತಮ್ಮ



ರಾಮಮಂಟಪ, ತೀರ್ಥಹಳ್ಳಿ



ಶ್ರೀರಾಮೇಶ್ವರ, ತೀರ್ಥಹಳ್ಳಿ

ಕಥೆಯನ್ನು ಹೀಗೆ ನಿರೂಪಿಸುತ್ತಾರೆ. 'ಮೈನೆರೆಯದ ಸೀತೆಯನ್ನು ಬಿಟ್ಟು ರಾಮ ತರಿಕೆರೆ ಸಂತೆಗೆ ಮುತ್ತಿನ ವ್ಯಾಪಾರಕ್ಕೆ ಹೋಗುತ್ತಾನೆ. ಹೋಗುವಾಗ ತಾಯಿಗೆ ಸೀತೆಯನ್ನು ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ಹೇಳಲು ಮರೆಯುವುದಿಲ್ಲ -

ಹರಿಯೋ ಜಲಕೆ ಕಳಿಸಬೇಡ ತಾಯಿ

ಸೀಗೆ ತಿಳಿಕೊಡ ಬೇಡ ತಾಯಿ

ಇಲ್ಲಿ ಮುಂದೆ ಏನೋ ಅನಾಹುತ ಸಂಭವಿಸಬಹುದೆಂದ ಸೂಚನೆಯಿಂದ ರಾಮ ತಾಯಿಗೆ ತಿಳುವಳಿಕೆ ಹೇಳಿ ಹೋದನು. ರಾಮ ತರಿಕೆರೆ ಸಂತೆಗೆ ಹೋದ ಏಳು ದಿನಕ್ಕೆ ಸೀತೆ ಮೈನೆರೆಯುತ್ತಾಳೆ. ರಾಮನಿಲ್ಲದ ಆ ಅವಧಿಯಲ್ಲಿ ಅತ್ತೆಯು ಸೀತೆಗೆ ಕೊಡಬಾರದ ಕಷ್ಟಗಳನ್ನು , ಹಿಂಸೆಯನ್ನು ಕೊಡುತ್ತಾಳೆ. ಅವಳ ಪರಿಸ್ಥಿತಿಯನ್ನು ಗರುಡಗಳಿಂದ ತಿಳಿದ ರಾಮ ಗರುಡಗಳ ನೆರವಿನಿಂದಲೇ ರಾತ್ರಿ ವೇಳೆಯಲ್ಲಿ ಬಂದು ಸೀತೆಯನ್ನು ಸಮಾಧಾನಪಡಿಸಿ ರಸಹ್ಯವಾಗಿ ಅವಳನ್ನು ಕೂಡಿ ಗುರುತಿಗೆ ಮುದ್ರೆಯುಂಗುರ ಕೊಟ್ಟು ವ್ಯಾಪಾರಕ್ಕೆ ಅದೇ ರಾತ್ರಿಯೇ ಮರಳುತ್ತಾನೆ (ಜನಪದ ಕಥೆ 'ಸತಿವಂತ ನೀಲಾಮಣಿ' ಕಥನ ಗೀತೆಯ ಸಂದರ್ಭವನ್ನು ಹೋಲುತ್ತದೆ). ಕೆಲದಿನಗಳ ನಂತರ ಸೀತೆ ಗರ್ಭಿಣಿ ಎಂದು ತನ್ನ ಮಗಳಿಂದ ತಿಳಿದ ಅತ್ತೆ ಸೀತೆಯ ಮೇಲೆ ಸಲ್ಲದ ವ್ಯಭಿಚಾರದ ಆರೋಪ ಹೊರಿಸಿ ಸೀತೆಯನ್ನು ಕಾಡಿಗೆ ಅಟ್ಟುತ್ತಾಳೆ. ಮೈದುನ ಲಕ್ಷ್ಮಣನ ಸಹಾಯದಿಂದ ಬದುಕುಳಿದ ಸೀತೆ ಕಾಡಿನಲ್ಲಿ ಲವ-ಕುಶರಿಗೆ ಜನ್ಮ ನೀಡುತ್ತಾಳೆ (ಈ ಸ್ನನ್ನಿವೇಶ ಮೂಲ ಉತ್ತರ ರಾಮಾಯಣದ ಸಂದರ್ಭವನ್ನು ನೆನಪಿಸುತ್ತದೆ). ಕಾಡಿನಲ್ಲಿ ಸೀತೆಯ ಆಶ್ರಯದಲ್ಲಿ ಬೆಳೆದು ದೊಡ್ಡವರಾದ ಲವ-ಕುಶರನ್ನು ಸೀತೆ ತೀರ್ಥರಾಜಪುರದ ದ್ವಾರಪಾಲಕರನ್ನಾಗಿ ನೇಮಿಸುತ್ತಾಳೆ. ಕಾಲಾನಂತರ ರಾಮ ಮುತ್ತಿನ ವ್ಯಾಪಾರ ಮುಗಿಸಿಕೊಂಡು ತರಿಕೆರೆಯಿಂದ ಹಿಂದಿರುಗುವಾಗ ತೀರ್ಥಹಳ್ಳಿಯ ದ್ವಾರದಲ್ಲಿ ಸುಂಕ ವಸೂಲು ಮಾಡುತ್ತಿದ್ದ ಲವ-ಕುಶರು ರಾಮನನ್ನು ತಡೆಯುತ್ತಾರೆ. ಪರಸ್ಪರ ವಾದ -ವಿವಾದವಾದ ನಂತರ ರಾಮನಿಗೆ ಲವ-ಕುಶರ ವೃತ್ತಾಂತ ಅವರ ಬಾಯಿಂದಲೇ ತಿಳಿದು ಸೀತೆ ವ್ಯಭಿಚಾರಿಯಲ್ಲ , ಪತಿವ್ರತೆ, ಸೊಸೆಯ ಮೇಲಿನ ದ್ವೇಷದಿಂದಲೇ ತನ್ನ ತಾಯಿ ನಿರಪರಾಧಿಯಾದ ಸೀತೆಯನ್ನು ಕಾಡಿಗೆ ಅಟ್ಟಿ ಅವಳು ಪಡಬಾರದ ಕಷ್ಟವನ್ನು ಪಡುವಂತೆ ಮಾಡಿದಳು ಎನ್ನುವ ಸತ್ಯಾಂಶವನ್ನು ತಿಳಿಯುತ್ತಾನೆ. ಆ ಕೂಡಲೇ ತನ್ನ ತಾಯಿಯ ಮೇಲೆ ಕೋಪ ತಾಳಿ ರಾಮ ಮನೆಗೆ ತೆರಳಿ ಹರಿತವಾದ ಕತ್ತಿಯಿಂದ ಅವಳ ತಲೆಯನ್ನು ಕಡಿಯುತ್ತಾನೆ. ರಕ್ತಸಿಕ್ತವಾದ ಕತ್ತಿಯನ್ನು ತುಂಗಾ ನದಿಯಲ್ಲಿ ತೊಳೆಯುತ್ತಾನೆ ' ಎಂದು ವಕ್ತೃ ಶ್ರೀ ಮುಕುಂದ ನಾಯಕ್ ಬುಕ್ಲಾಪುರ ಹೇಳುತ್ತಾರೆ.

ಪೌರಾಣಿಕ ರಾಮನ ಅವತಾರದ ಪರಶುರಾಮನ ಕಥೆಯನ್ನು ಜನಪದರು ಈ ರೀತಿಯಲ್ಲಿ ರಾಮತೀರ್ಥದ ಐತಿಹ್ಯವನ್ನು ಹೇಳುತ್ತಾರೆ. ಪರಶುರಾಮ ತಾಯಿಯನ್ನು ಕಡಿದ ಕತ್ತಿಯನ್ನು ಎಲ್ಲಿ ತೊಳೆದರೂ ರಕ್ತ ಹೋಗಲಿಲ್ಲವೆಂದು ತೀರ್ಥಹಳ್ಳಿಯ ತುಂಗಾ ನದಿಯಲ್ಲಿ ಆ ರಕ್ತಸಿಕ್ತ ಕತ್ತಿ ಪರಿಶುದ್ಧವಾಯಿತೆಂದೂ, ಅದೇ ರಾಮತೀರ್ಥವಾಯಿತು. ಆತನ ಪಾಪವೂ ಪರಿಹಾರವಾಯಿತೆಂದು ಈಗಲೂ ಪ್ರಚಲಿತ ಐತಿಹ್ಯವಾಗಿದೆ.

ಅಲ್ಲದೆ ತೀರ್ಥಹಳ್ಳಿಗೆ ತೀರ್ಥರಾಜಪುರ ಎಂದು ಹೆಸರು ಬರಲು ಕಾರಣವೇನೆಂಬುದನ್ನು ವಿವರಿಸಲು ಪ್ರಯತ್ನಿಸಿದೆ. ''ಈ ದೃಷ್ಟಿಯಿಂದ ಇದೊಂದು ವಿವರಣಾತ್ಮಕ ಕಥೆಯೂ (Aetiological) ಆಗಿದೆ''[1] ಎಂದು ಜಾನಪದ ತಜ್ಞ ಅಂಬಳಿಕೆ ಹಿರಿಯಣ್ಣ ಅಭಿಪ್ರಾಯಪಡುತ್ತಾರೆ.

'ತೀರ್ಥಹಳ್ಳಿ ' ಹೆಸರಿಗಿರುವ ನಿಷ್ಪತ್ತಿಯ ಐತಿಹ್ಯ :

ತೀರ್ಥಹಳ್ಳಿ ತೀರ್ಥರಾಜಪುರ, ತೀರ್ಥವಳಿ ಹೆಸರಿನ ಹಿಂದಿರುವ ಐತಿಹ್ಯ ಹೀಗಿದೆ. ಪರಶುರಾಮು ಕೊಡಲಿ ತೊಳೆದ ಕೊಂಡ 'ಪರಶುರಾಮನ ಕೊಂಡ ' ಪರಶುರಾಮು ತೀರ್ಥವೆಂದು ಹೆಸರು ಪಡೆಯುತ್ತದೆ. ಈ ತೀರ್ಥದ ಪಕ್ಕದಲ್ಲೇ ಇರುವ 'ಶಂಖತೀರ್ಥ', 'ಗಧಾತೀರ್ಥ', 'ಪದ್ಮತೀರ್ಥ' ಮತ್ತು 'ಚಕ್ರತೀರ್ಥ'ಗಳೂ ಸೇರಿ ಪಂಚತೀರ್ಥಗಳೂ ಇಲ್ಲಿವೆ. ಅಂದರೆ ಒಂದು ತೀರ್ಥವೇ ಸಕಲ ಪಾಪ ನಿವಾರಣಾ ತೀರ್ಥವೆನಿಸಿದಾಗ ಐದು ತೀರ್ಥಗಳೂ ಒಂದೆಡೆ ಸೇರಿರುವ ಈ ಪ್ರದೇಶ ತೀರ್ಥಗಳ ರಾಜ, ತೀರ್ಥರಾಜಪುರವೆಂದು ತೀರ್ಥಾವಳಿ ಎಂದೂ ಅಂದರೆ ತೀರ್ಥ + ಅವಳಿ ತೀರ್ಥಾವಳಿ ಕ್ರಮೇಣ ತೀರ್ಥಹಳ್ಳಿ ಎಂದು ಪ್ರಸಿದ್ಧವಾಗಿದೆ ಎಂದು ವಕ್ತೃ ಶ್ರೀ ಲಕ್ಷ್ಮೀಶ ವಿ.ತಂತ್ರಿ ತೀರ್ಥಹಳ್ಳಿ ಅಭಿಪ್ರಾಯಪಡುತ್ತಾರೆ.

'ಗಂಗಾದೇವಿಕಟ್ಟೆ 'ಯ ಐತಿಹ್ಯ :

ತೀರ್ಥಹಳ್ಳಿ ಹೆಸರಿನ ಮತ್ತು ಈ ತೀರ್ಥದ ಮಹತ್ವ ಸಾರುವ ಇನ್ನೊಂದು ಐತಿಹ್ಯ ಹೀಗಿದೆ. ''ತುಂಗಾ ಪಾನ ಗಂಗಾ ಸ್ನಾನ '' ಎಂಬ ನಾಣ್ಣುಡಿ ಪ್ರಚಲಿತದಲ್ಲಿದೆ. ಉತ್ತರ ಭಾರತದ ಪವಿತ್ರ ನದಿ ಗಂಗೆ ಭಗೀರಥನ ಪೂರ್ವಜರ ಸದ್ಗತಿಗೆ ಸ್ವರ್ಗದಿಂದ ಧರೆಗಿಳಿದವಳು ಎಂಬುದು ಪುರಾಣ ಕಥೆ. ಭಗೀರಥನ ಪ್ರಯತ್ನದ ಫಲ ಅವನ ಪೂರ್ವಜರಿಗೆ ಸದ್ಗತಿ ದೊರಕಿಸಿದ ಪವಿತ್ರ ಗಂಗೆಯೇ ಒಮ್ಮೆ ಮಲಿನಗೊಂಡಳಂತೆ. ಆಗ


ಅವಳು ಶಿವನಲ್ಲಿ ಮೊರೆಯಿಟ್ಟಾಗ ಗಂಗೆಯನ್ನು ಶಿರದಲ್ಲಿ ಧರಿಸಿದ ಗಂಗಾಧರ ತುಂಗೆಯಲ್ಲಿ ಮಿಂದರೆ ನಿನ್ನ ಪಾವಿತ್ರ್ಯ ಮರಳಿ ಪಡೆಯುವೆ ಎಂದಾಗ ಗಂಗೆ ತೀರ್ಥಹಳ್ಳಿಯಲ್ಲಿ ಹರಿಯುವ ತುಂಗಾ ನದಿಯಲ್ಲಿ ಮಿಂದಳಂತೆ. ಆಗ ಅವಳ ಮಾಲಿನ್ಯ ಕಳೆದು ಮೈಮನ ಹಗುರಾಗಿ ಆಹ್ಲಾದಗೊಂಡಳು. ಆಕೆ ಮಿಂದ ಜಾಗವನ್ನು ಈಗಲೂ 'ಗಂಗಾದೇವಿಕಟ್ಟೆ ' ಎಂದು ಜನರು ತೋರಿಸುತ್ತಾರೆ. ಆದ್ದರಿಂದ ತೀರ್ಥಹಳ್ಳಿ ತೀರ್ಥಗಳ ಸಮೂಹವೂ, ಗಂಗೆಯ ಪಾಪ ನಿವಾರಣೆಯಾದ ಸ್ಥಳ, ಪರಶುರಾಮನ ಮಾತೃಹತ್ಯಾದೋಷ ಕಳೆದ ಸ್ಥಳ ಇರುವ ಊರು **ತೀರ್ಥಾವಳಿ** ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ತೀರ್ಥಹಳ್ಳಿಯ ಶ್ರೀರಾಮೇಶ್ವರ ದೇವಸ್ಥಾನದ ಸ್ಥಾಪನೆ ಮತ್ತು ಪರಶುರಾಮತೀರ್ಥ (ಕೊಂಡ) ಪಕ್ಕದಲ್ಲಿರುವ ರಾಮ ಮಂಟಪ ರಾಮಾಯಣದ ಶ್ರೀರಾಮಚಂದ್ರನ ವನವಾಸದ ವಿವರಣೆಯನ್ನು ನಿರೂಪಿಸುವ ಐತಿಹ್ಯ ಹೊಂದಿದೆ. ಪಿತೃ ವಾಕ್ಯ ಪರಿಪಾಲನೆಗಾಗಿ ಹದಿನಾಲ್ಕು ವರ್ಷ ವನವಾಸ ಕೈಗೊಂಡ ರಾಮ ತನ್ನ ವನವಾಸದ ಕಾಲದಲ್ಲಿ ತೀರ್ಥರಾಜಪುರದ ತುಂಗಾ ನದಿಯ ತೀರದಲ್ಲಿ ಕೆಲಕಾಲ ಕಳೆದಿದ್ದನು. ಶಿವಪೂಜೆಗೆಂದು ಶಿವಲಿಂಗ ಸ್ಥಾಪಿಸಿ ಮಂಟಪ ನಿರ್ಮಿಸಿ ಪೂಜೆಗೈದಿದ್ದನು ಎಂದು ಸ್ಥಳೀಯ ಐತಿಹ್ಯವನ್ನು ತಿಳಿಸುತ್ತಾರೆ ವಕ್ತೃ ಶ್ರೀ ಲಕ್ಷ್ಮೀಶ ತಂತ್ರಿ. ಪರಶುರಾಮ ಕೊಂಡದ ಉತ್ತರದ ಬಂಡೆಯಲ್ಲಿ ನಿರ್ಮಾಣಗೊಂಡಿರುವ ಶ್ರೀರಾಮ ಮಂಟಪ ಮಳೆಗಾಲದಲ್ಲಿ ಸಂಪೂರ್ಣ ಮುಳುಗಿದರೆ ಪ್ರವಾಹ ಬಂದಿದೆ ಎಂದು ಜನ ಜಾಗೃತವಾಗುವುದೆಂದೂ ಅದು ಸೂಚಿಸುತ್ತದೆ.

ಪುಣ್ಯ ತೀರ್ಥಾವಳಿ ಇರುವ ತೀರ್ಥಹಳ್ಳಿಯಲ್ಲಿ ಪ್ರತಿ ವರ್ಷ ಡಿಸೆಂಬರ್ ಕೊನೆಯ ವಾರ ಅಥವಾ ಜನವರಿ ಮೊದಲ ವಾರ ಎಳ್ಳಮಾವಾಸ್ಯೆ ಜಾತ್ರೆ ನಡೆಯುತ್ತದೆ. ಅಮಾವಾಸ್ಯೆಯ ದಿನ ತುಂಗಾ ನದಿಯ ಶ್ರೀರಾಮಮಂಟಪದ ಪಕ್ಕದ ಪರಶುರಾಮತೀರ್ಥ ತೀರ್ಥೋದ್ಭವವಾಗುತ್ತದೆ. ಪರಶುರಾಮತೀರ್ಥದಲ್ಲಿ ತಮ್ಮ ಪಾಪ ಕಳೆದುಕೊಳ್ಳಲು ಸ್ನಾನ ಮಾಡುತ್ತಾರೆ. ಕಾಗೆ ತಲೆಮೇಲೆ ಕುಳಿತರೆ ತಲೆಯಲ್ಲಿ ಹೊತ್ತ ತೆನೆಹೊರೆ (ಕೇವಿ) ಒಡೆದರೆ ಅಪಶಕುನವೆಂಬ ನಂಬಿಕೆಯಿದೆ. ಅದರ ಅನಿಷ್ಟ ನಿವಾರಣೆಗೆ ಪರಶುರಾಮ ಕೊಂಡದಲ್ಲಿ ಸ್ನಾನಮಾಡಿ ಪಾವನರಾಗುತ್ತಾರೆ. ಪರಶುರಾಮನ ಮಾತೃ ಹತ್ಯಾ ದೋಷನಿವಾರಣೆಯಾದ ಈ ತೀರ್ಥ ಜನಸಾಮಾನ್ಯರ ಸಕಲ ಪಾಪ ತೊಳೆಯುವ ಪಾವನತೀರ್ಥವೆಂಬ ನಂಬಿಕೆ ಈ ಕಂಪ್ಯೂಟರ್ ಯುಗದಲ್ಲೂ ಜನಜನಿತವಾಗಿದೆ. ಜನರಿಗೆ ಅನಾರೋಗ್ಯ, ಆಪತ್ತು ಸಂಭವಿಸಿದರೆ ಎಳ್ಳಮಾವಾಸ್ಯೆ ಸ್ನಾನ ಮಾಡಿಸುವುದಾಗಿ ಹರಕೆ ಹೊತ್ತು ತಮ್ಮ ಭಕ್ತಿ ಸಮರ್ಪಣೆ ಮಾಡುತ್ತಾರೆ.



ಶಂಖತೀರ್ಥ, ಗಧಾತೀರ್ಥ, ಪದ್ಮತೀರ್ಥ, ಚಕ್ರತೀರ್ಥಗಳು



ತುಂಗಾ ನದಿಯ ಗಂಗಾದೇವಿಕಟ್ಟೆ, ತೀರ್ಥಹಳ್ಳಿ

ಐತಿಹಾಸಿಕವಾಗಿ ಶೈವ ಮತ್ತು ವೈಷ್ಣವ ಧರ್ಮಗಳೆರಡರ ಸಾಂಸ್ಕೃತಿಕ ಸಂಕರಗಳನ್ನು ಇಲ್ಲಿ ಕಾಣಬಹುದು. ಕೆಳದಿ ಅರಸರ ಕಾಲದ ಶೈವ ಧರ್ಮದ ಪರಂಪರೆಗೆ ಕುರುಹಾಗಿ ಇಲ್ಲಿ ಶ್ರೀರಾಮೇಶ್ವರ, ಈಶ್ವರ, ಶನೀಶ್ವರ ದೇವಾಲಯಗಳನ್ನು ನೋಡಬಹುದು. ಹಾಗೆಯೇ ವೈಷ್ಣವ ಧರ್ಮದ ಪರಂಪರೆಯ ಕುರುಹುಗಳಾಗಿ ಶ್ರೀ ಆಂಜನೇಯ ದೇವಾಲಯ, ಶ್ರೀ ವೆಂಕಟರಮಣ ದೇವಾಲಯ, ಲಕ್ಷ್ಮೀನರಸಿಂಹ ದೇವಾಲಯಗಳು ಈ ಬಗೆಗೆ ಸಾಕ್ಷ್ಯವನ್ನು ಒದಗಿಸುತ್ತವೆ. ತೀರ್ಥಹಳ್ಳಿ ಪ್ರದೇಶದಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಐತಿಹ್ಯಗಳನ್ನು ಕಾಣಬಹುದು. ಜೊತೆಗೆ ಮೃಗವಧೆ, ಅಂಬುತೀರ್ಥ, ಬಿಲ್ಲೇಶ್ವರ, ಅರುಣಗಿರಿಯ ಐತಿಹ್ಯಗಳಿಗೆ ಸಂಬಂಧಿಸಿದಂತೆ ಇಲ್ಲಿಯ ಐತಿಹ್ಯಗಳು ಪೂರಕವಾದ ಸಾಕ್ಷ್ಯಾಧಾರವನ್ನು ಒದಗಿಸುವುದರೊಂದಿಗೆ ತ್ರೇತಾಯುಗದ ರಾಮಾಯಣದ ಸಂದರ್ಭಗಳ ಕಡೆಗೆ ಈ ಐತಿಹ್ಯಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ. ಪ್ರಾಕೃತಿಕ , ಐತಿಹಾಸಿಕ , ಪೌರಾಣಿಕ ಸೌಂದರ್ಯವನ್ನು ಮತ್ತು ಪರಂಪರೆಯನ್ನು ಹೊಂದಿರುವ ತೀರ್ಥಹಳ್ಳಿ ತನ್ನ ಗರ್ಭದಲ್ಲಿ ಈ ರೀತಿಯ ಅನೇಕ ರೋಚಕ ಐತಿಹ್ಯಗಳನ್ನು ಒಳಗಿರಿಸಿಕೊಂಡಿದೆ.

ಸಿದ್ದೇಶ್ವರ ಬೆಟ್ಟದ ಧಾರ್ಮಿಕ ನಂಬಿಕೆಗಳು :

ತೀರ್ಥಹಳ್ಳಿ ಪಟ್ಟಣಕ್ಕೆ ಹೊಂದಿಕೊಂಡು ವಾಯುವ್ಯ ದಿಕ್ಕಿನಲ್ಲಿ ಬಾಳೇಬೈಲು ಸಮೀಪ ಸಿದ್ದೇಶ್ವರ ಬೆಟ್ಟವಿದೆ. ತೀರ್ಥಹಳ್ಳಿ ಪಟ್ಟಣದ ಅತಿ ಎತ್ತರದ ಕಪ್ಪು ಕಲ್ಲಿನ ಬೆಟ್ಟ. ಕೆಳದಿ ಅರಸರ ಕಾಲದಲ್ಲಿ ಇಲ್ಲಿನ ಸಿದ್ದೇಶ್ವರ ದೇವಸ್ಥಾನ ಜೀರ್ಣೋದ್ಧಾರಗೊಂಡ ಬಗ್ಗೆ ದಾಖಲೆಗಳಿವೆ. ಈ ಬೆಟ್ಟಕ್ಕೆ ಸಂಬಂಧಿಸಿದ ಐತಿಹ್ಯ ಸ್ವಾರಸ್ಯಕರವಾದುದು. ಪರಶಿವ ಒಮ್ಮೆ ಇಲ್ಲಿ ತಪೋನಿರತನಾಗಿದ್ದನು, ತನ್ನ ತಪೋಮಹಿಮೆ ನಿರೂಪಿಸಲು ಈ ಗುಡ್ಡದ ನೆತ್ತಿಯಲ್ಲಿ ಒಂದು ಕೊಳವನ್ನು ನಿರ್ಮಿಸಿ ಅದರಲ್ಲಿ ಸದಾ ಕಾಲ ನೀರು ನಿಲ್ಲುವಂತೆ ಮಾಡಿದನು. 'ಸಂತಾನವಿಲ್ಲದವರು ವ್ರತ ಕೈಗೊಂಡು ಆ ಕೊಳದಲ್ಲಿ ಒಂದು ಲಿಂಬೆ ಹಣ್ಣು ಹಾಕಿದಾಗ ಅದು ಸಮೀಪದ ಭೀಮಸೇತು ಭೀಮನಕಟ್ಟೆಯ ತುಂಗಾ ನದಿಯಲ್ಲಿ ಎದ್ದರೆ ಅವರಿಗೆ ಮಕ್ಕಳಾಗುತ್ತವೆ' ಎಂಬ ಐತಿಹ್ಯ ಪ್ರಚಲಿತದಲ್ಲಿದೆ. ಪ್ರಸ್ತುತ ಪ್ರಾಕೃತಿಕ ಕಾರಣಗಳಿಂದಾಗಿ ಆ ಕೊಳದಲ್ಲಿ ಬೇಸಿಗೆಯಲ್ಲಿ ನೀರಿರುವುದಿಲ್ಲ.

ತೀರ್ಥಹಳ್ಳಿಯಲ್ಲಿ ಕಲ್ಲು ಗುಡ್ಡದಲ್ಲಿ ಕಲ್ಲು ತೆಗೆಯುವ ಕೆಲಸ ಸಮೀಪದ ಕುರುವಳ್ಳಿ, ಮೇಲಿನಕುರುವಳ್ಳಿ, ಸೀಬಿನಕೆರೆ, ಇಂದಿರಾನಗರ ಬಂಡೆಗಳಲ್ಲಿ ನಡೆಯುತ್ತಿದೆ. ಇದರಿಂದ ಹಣ ಗಳಿಕೆಯ ವಹಿವಾಟು ನೂರಾರು ವರ್ಷಗಳಿಂದ ನಡೆದುಬಂದಿದೆ. ಆದರೆ, ಸಿದ್ದೇಶ್ವರ

ಗುಡ್ಡದಲ್ಲಿ ಈ ಕಲ್ಲು ತೆಗೆಯುವ ಕೆಲಸ ನಡೆಸಲಾಗಿಲ್ಲ. ಇದಕ್ಕೊಂದು ಐತಿಹ್ಯ ಈಗಲೂ ವಾಡಿಕೆಯಲ್ಲಿದೆ. ಅದೇನೆಂದರೆ, ಸಿದ್ದೇಶ್ವರ ಗುಡ್ಡದಲ್ಲಿ ಒಂದೇ ಒಂದು ಕಲ್ಲು ತೆಗೆದರೂ ಸಿದ್ದೇಶ್ವರ ಸ್ವಾಮಿ ಹುಲಿರೂಪದಲ್ಲಿ ಬಂದು ಊರವರನ್ನು ಬಲಿ ತೆಗೆದುಕೊಳ್ಳುತಾನೆ. ಇದರಿಂದ ಊರಿಗೆ ಗಂಡಾಂತರ ತಪ್ಪಿದ್ದಲ್ಲ, ಆದ್ದರಿಂದ ಯಾವ ಕಾರಣಕ್ಕೂ ಅಲ್ಲಿ ಕಲ್ಲು ತೆಗೆಯುವಂತಿಲ್ಲ ಎಂಬ ಅನಧಿಕೃತ ನಿಯಮವನ್ನು ಜನರು ಪಾಲಿಸಿಕೊಂಡು ಬಂದಿದ್ದಾರೆ.

ಆಧುನಿಕತೆಯ ನೆವದಿಂದ ಇಂದು ನಗರೀಕರಣದ ಪರಿಣಾಮ ಪರಿಸರದ ಮೇಲೂ ಆಗಿದೆ. ಇಂತಹ ಸನ್ನಿವೇಶದಲ್ಲಿ ಗಣಿಗಾರಿಕೆ ಮೂಲಕ ಜಲಮಾಲಿನ್ಯ, ವಾಯು ಮಾಲಿನ್ಯ ಮತ್ತು ಶಬ್ಧ ಮಾಲಿನ್ಯಗಳು ಅವ್ಯಾಹತವಾಗಿ ಈ ಪ್ರಕೃತಿಯ ಮೇಲೆ ನಡೆಯುತ್ತಲೇ ಬಂದಿದೆ. ತೀರ್ಥಹಳ್ಳಿಯ ಹೃದಯ ಭಾಗದಲ್ಲಿರುವ ಸಿದ್ದೇಶ್ವರ ಗುಡ್ಡ ಊರಿಗೊಂದು ಪ್ರಾಕೃತಿಕ ಸೌಂದರ್ಯವನ್ನು ತಂದುಕೊಟ್ಟಿದೆ. ಈ ಪ್ರದೇಶ ಎತ್ತರದ ಬೆಟ್ಟ ಇದಾಗಿದ್ದು ಮುಂಜಾನೆ ಮತ್ತು ಸಂಜೆ ತಂಪಾದ ವಾಯುವಿಹಾರಕ್ಕೆ ಯೋಗ್ಯ ಸ್ಥಳ. ಒಟ್ಟಿನಲ್ಲಿ ಒಂದು ಮಾನಸಿಕ ಮತ್ತು ದೈಹಿಕ ಹಿತಾನುಭವ ನೀಡುವ ಈ ಪ್ರದೇಶವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಇದಕ್ಕೆ ಧಾರ್ಮಿಕ ಐತಿಹ್ಯವನ್ನು ಲೇಪಿಸಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ವಾಣಿಜ್ಯಿಕ ದೃಷ್ಟಿಯಿಂದ ತೀರ್ಥಹಳ್ಳಿಯ ಬಹುತೇಕ ಎತ್ತರದ 'ಕಲ್ಲುಕ್ವಾರೆ' (ಬಂಡೆ)ಗಳಲ್ಲಿ ಕಲ್ಲು ತೆಗೆಯುತ್ತಾ ನಾಶವಾಗುತ್ತಿದೆ. ಹೀಗಿರುವಾಗ ಸಿದ್ದೇಶ್ವರ ಗುಡ್ಡದಲ್ಲಿ ಒಂದೇ ಒಂದು ಕಲ್ಲನ್ನು ತೆಗೆಯದೆ ಹಾಗೆಯೇ ಇರುವುದು ಸಿದ್ದೇಶ್ವರ ದೇವರ ಬಗೆಗಿನ ಭಯ ಮತ್ತು ಭಕ್ತಿ ಕಾರಣವಾಗಿರುವುದು ಒಂದು ಒಳ್ಳೆಯ **ಪರಿಸರ ಕಾಳಜಿ ಪರ ಚಿಂತನೆ ಇಲ್ಲಿ ಕೆಲಸ ಮಾಡಿರುವುದು ಸಹಜವಾಗಿ ಕಂಡುಬರುತ್ತದೆ** ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಭೀಮಸೇತು ಮುನಿವೃಂದಾಶ್ರಮ -ಭೀಮನಕಟ್ಟೆಯ ಪೌರಾಣಿಕ ಐತಿಹ್ಯ :

ಭೀಮನಕಟ್ಟೆ ಕ್ಷೇತ್ರ ತೀರ್ಥಹಳ್ಳಿಯಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ದೂರ್ವಾಸಪುರ ತುಂಗಾ ನದಿ ಮತ್ತು ಮಾಲತಿ ನದಿ ಸಂಗಮ ಸ್ಥಾನ ತೀರದಲ್ಲಿದೆ. ಪುರಾಣ ಪ್ರಸಿದ್ಧ ಕ್ಷೇತ್ರ ಇದಾಗಿದೆ. ಮಹಾನ್ ಕೋಪಿಷ್ಠ ಬ್ರಹ್ಮರ್ಷಿ ದೂರ್ವಾಸಮುನಿ ಈ ತುಂಗಾ ನದಿಯ ತೀರದಲ್ಲಿ ತಪಸ್ಸು ಮಾಡಿದ್ದರಿಂದ ಇದಕ್ಕೆ 'ದೂರ್ವಾಸಪುರ' ಎಂಬ ಹೆಸರಾಗಿದೆ ಎಂದು ವಕ್ತೃ ಶ್ರೀ ಗುರುರಾಜ ಆಚಾರ್ಯ ಮುಳುವಾಗಿಲು ಇವರು ಈ ಊರಿನ ಹೆಸರಿನ ಐತಿಹ್ಯವನ್ನು ಹೇಳುತ್ತಾರೆ. ಭೀಮಸೇತು ಮುನಿವೃಂದರ ಆಶ್ರಮ ಮತ್ತು ಭೀಮೇಶ್ವರ ಸ್ವಾಮಿಯ ದೇವಸ್ಥಾನ ಮಹಾಭಾರತದ ಮಹಾಪಾತ್ರ ಭೀಮನಿಗೆ ಸಂಬಂಧಿಸಿದ ಐತಿಹ್ಯ ಹೇಳುತ್ತದೆ.

ಪಾಂಡವರು ವನವಾಸ ಕಾಲದಲ್ಲಿ ಈ ಪ್ರದೇಶದಲ್ಲಿ ಕೆಲಕಾಲ ನೆಲೆಸಿದ್ದರು. ಆ ಕಾಲದಲ್ಲಿ ಪಾಂಡವರ ನಿತ್ಯ ಬಳಕೆಗೆ ತುಂಗಾ ನದಿಯಲ್ಲಿ ನೀರು ಕಡಿಮೆಯಾದಾಗ ಅದ್ಭುತ ಶಕ್ತಿ ಸಾಮರ್ಥ್ಯವುಳ್ಳ ಭೀಮ ಇಲ್ಲಿ ನದಿಗೆ ಅಡ್ಡಲಾಗಿ ಒಂದು ಕಟ್ಟೆಯನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿದ ಎಂದು ಈ ಸ್ಥಳ ಮತ್ತು ಕಟ್ಟೆಗೆ ಭೀಮನ ಶಕ್ತಿಯೇ ಕಾರಣ ಎಂದು ಈ ಸ್ಥಳದ ಐತಿಹ್ಯ ಹೇಳುತ್ತದೆ. ಆದ್ದರಿಂದ ತುಂಗಾ ನದಿಗೆ ಅಡ್ಡವಾಗಿ ಕಟ್ಟಿದ ಕಟ್ಟೆ ಇರುವ ಈ ಸ್ಥಳಕ್ಕೆ 'ಭೀಮನಕಟ್ಟೆ' ಎಂಬ ಹೆಸರು ಈಗಲೂ ಅಸ್ತಿತ್ವದಲ್ಲಿದೆ. ಭೀಮ ಶಿವಪೂಜೆಗೆಂದು ಈಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನು. ಭೀಮೇಶ್ವರ ಹೆಸರಿನ ಈ ದೇವಾಲಯ ಈಗಲೂ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದೆ.

ಭೀಮನಕಟ್ಟೆ ನಿರ್ಮಾಣವಾದ ಬಗೆಗಿರುವ ಇನ್ನೊಂದು ಐತಿಹ್ಯ ಹೀಗಿದೆ. ವಕ್ತೃ ಶ್ರೀ ಸುರೇಶ್, ಭೀಮನಕಟ್ಟೆ ಹೀಗೆ ಹೇಳುತ್ತಾರೆ. 'ಪಾಂಡವರು ವನವಾಸ ಕಾಲದಲ್ಲಿ ಈ ಪ್ರದೇಶಗಳಲ್ಲಿಯೇ ವಾಸವಾಗಿದ್ದರು. ಆ ಸಮಯದಲ್ಲಿ ಒಮ್ಮೆ ಭೀಮನಿಗೂ, ಶ್ರೀಕೃಷ್ಣನಿಗೂ ವಾಗ್ವಾದ ನಡೆಯುತ್ತಿರುವಾಗ ಭೀಮನಿಗೆ ತನ್ನ ಶಕ್ತಿಯನ್ನು ಪ್ರದರ್ಶಿಸಲು ಶ್ರೀಕೃಷ್ಣ ಪಂಥಾಹ್ವಾನವನ್ನು ನೀಡಿದನು. ಏನೆಂದರೆ, ರಾತ್ರಿ ಬೆಳಗಾಗುವುದರೊಳಗೆ ತುಂಗಾ ನದಿಗೆ ಭೀಮ ಸ್ವಸಾಮರ್ಥ್ಯದಿಂದಲೇ ಕಟ್ಟೆಯನ್ನು ನಿರ್ಮಿಸಿ ಈ ಸ್ಥಳದಿಂದ ಮೇಲ್ಮುಖವಿರುವ ಗ್ರಾಮಗಳಾದ ಸೌಳಿ, ಆಲ್ಗೇರಿ, ಹುಕ್ಕಳಬೈಲು, ಗೊರಕೋಡುಗಳನ್ನು

ಮುಳುಗಿಸಬೇಕು ಎಂದು ಹೇಳಿದನು. ಮಹಾನ್ ಅತಿಮಾನುಷ ಶಕ್ತಿಯನ್ನು ಹೊಂದಿದ್ದ ಭೀಮ ಪಥಾಹ್ವಾನವನ್ನು ಸವಾಲಾಗಿ ಸ್ವೀಕರಿಸಿ ಕೂಡಲೇ ತುಂಗಾ ನದಿಗೆ ಕಟ್ಟೆಯನ್ನು ಕಟ್ಟಲು ಮುಂದಾದನು. ಕವಲೇದುರ್ಗದ ಬೆಟ್ಟದಿಂದ ಮಣ್ಣನ್ನು ಎಸೆದು ಕಟ್ಟೆಯನ್ನು ನಿರ್ಮಿಸಿದ. ಕಟ್ಟೆ ನಿರ್ಮಾಣವಾಗುವ ಹಂತದಲ್ಲಿಯೇ ಊರು ಮುಳುಗುವ ಹಂತಕ್ಕೆ ಬಂದಿತು. ಆಗ ಅಪಾಯವನ್ನರಿತ ಶ್ರೀಕೃಷ್ಣ ಕಲ್ಲಿನ ಕೋಳಿಯಾಗಿ ಕೂಗಿ ಭೀಮನ ಕೆಲಸವನ್ನು ನಿಲ್ಲಿಸಿ ತನ್ನ ಕೈಬೆರಳುಗಳಿಂದ ಕಟ್ಟೆಯನ್ನು ಒಡೆದನು. ಮುಳುಗಡೆಯಾಗಲಿದ್ದ ಊರುಗಳು ಅಪಾಯದಿಂದ ಪಾರಾದವು. ಕೈಬೆರಳಿನಿಂದ ಶ್ರೀಕೃಷ್ಣ ಕಟ್ಟೆಯನ್ನು ಒಡೆದ ಗುರುತು ಈಗಲೂ ಕಾಣುತ್ತವೆ. ತುಂಗಾ ನದಿ ಹರಿಯುವ ಪಾತ್ರದಲ್ಲಿ ಈ ಕಟ್ಟೆಯಿಂದ ಕೆಳಕ್ಕೆ ನಾಲ್ಕು ಸೀಳುಗಳಾಗಿ ಧುಮುಕುತ್ತಿದೆ ' ಎಂದು ವಕ್ತೃ ಭೀಮನಕಟ್ಟೆ ನಿರ್ಮಾಣವಾದ ಬಗೆಗೆ ಇನ್ನೊಂದು ಬಗೆಯ ಐತಿಹ್ಯವನ್ನು ಹೀಗೆ ಹೇಳುತ್ತಾರೆ.

ಭೀಮನಕಟ್ಟೆ ನಿರ್ಮಾಣವಾಗಿದ್ದು ಹೇಗೆಂದು ಇನ್ನೊಂದು ಐತಿಹ್ಯವೂ ಈ ಭಾಗದಲ್ಲಿ ಪ್ರಚಲಿತದಲ್ಲಿದೆ. ಅದೇನೆಂದರೆ, ಅಗಾಧ ದೈಹಿಕಾಕೃತಿ ಮತ್ತು ಶಕ್ತಿಯನ್ನು ಹೊಂದಿದ್ದ ಭೀಮ ಭೋಜನಕ್ಕೆ ಹೆಸರಾದವನು. ಅವನು ಊಟ ಮಾಡುವಾಗ ಅನ್ನದಲ್ಲಿ ದೊರೆತ ಕಲ್ಲುಗಳನ್ನು ಎಸೆದಾಗ ಆ ಕಲ್ಲುಗಳೆಲ್ಲಾ ಬಂದು ತುಂಗಾ ನದಿಯಲ್ಲಿ ಬಿದ್ದಿದ್ದರಿಂದ ಈ ಕಟ್ಟೆ ನಿರ್ಮಾಣವಾಯಿತು ಎಂದು ವಕ್ತೃ ಶ್ರೀನಿವಾಸ ಹಳ್ಳಿಬೈಲು ಹೇಳುತ್ತಾ , ಭೀಮ ಊಟ ಮಾಡಿದ ಕಲ್ಲುಹಾಸು ಇದೆಂದು ಇಲ್ಲಿರುವ ಬೃಹದಾಕಾರದ ಹಾಸು ಬಂಡೆಯನ್ನು ತೋರಿಸುತ್ತಾರೆ.

ಒಟ್ಟಿನಲ್ಲಿ ಭೀಮನ ಹೆಸರಿನೊಂದಿಗೆ ಇರುವ ಈ ಭೀಮನಕಟ್ಟೆ ಭೀಮನ ಶಕ್ತಿ ಸಾಮರ್ಥ್ಯವನ್ನು ಸಾಕ್ಷೀಕರಿಸಲು ಮತ್ತು ಈ ಸ್ಥಳಕ್ಕೊಂದು ಅತಿಮಾನುಷ ಶಕ್ತಿಯ ಪ್ರಭಾವವಿದೆ ಎಂಬುದನ್ನು ಸಾಬೀತುಪಡಿಸಲು ಈ ರೀತಿಯ ಐತಿಹ್ಯಗಳು ಹುಟ್ಟಿಕೊಂಡಿವೆ. ಏಕೆಂದರೆ ವಾಸ್ತವದಲ್ಲಿ ಒಂದು ನದಿಗೆ ರಾತ್ರಿ ಬೆಳಗಾಗುವುದರೊಳಗೆ ಒಬ್ಬನೇ ಕಟ್ಟೆಯನ್ನು ನಿರ್ಮಿಸುತ್ತಾನೆ ಎಂಬುದು ಕೇವಲ ಕಲ್ಪನೆಯಷ್ಟೇ ಎಂಬುದು ನನ್ನ ಅಭಿಪ್ರಾಯ.

ಆರೋಗ್ಯ ಸಂಬಂಧಿ ಐತಿಹ್ಯ :

ಭೀಮ ನಿರ್ಮಿಸಿದ ಈ ಭೀಮನಕಟ್ಟೆಗೆ ಸಂಬಂಧಿಸಿದ ಇನ್ನೊಂದು ಐತಿಹ್ಯ ಕುತೂಹಲಕಾರಿಯಾದುದು. ಭೀಮನಕಟ್ಟೆಯ ಈ ಸ್ಥಳದಲ್ಲಿ ಸ್ನಾನ ಮಾಡುವುದರಿಂದ ಸ್ತ್ರೀಯರು **ರಜಸ್ವಲೆ (ಋತುಸ್ನಾನ)** ಯಾಗುವ ದಿನಗಳನ್ನು ಮುಂದೂಡಬಹುದು ಎಂಬ ನಂಬಿಕೆಯಿದೆ. ವಾಸ್ತವದಲ್ಲಿ ಸ್ತ್ರೀಯರಿಗೆ ಪ್ರಕೃತಿದತ್ತವಾದ ಒಂದು ಪ್ರಕ್ರಿಯೆ ಪ್ರತೀ 28 ದಿನಗಳಿಗೊವ್ಮೆ ರಜಸ್ವಲೆಯಾಗುವುದು. ಆ ಸಮಯದಲ್ಲಿ ಅವರು ಧಾರ್ಮಿಕ ಸಮಾರಂಭಗಳಿಗೆ, ದೇವಸ್ಥಾನಗಳಿಗೆ, ಯಜ್ಞಯಾಗಾದಿಗಳಿಗೆ, ಮದುವೆ -ನಾಮಕರಣ ಮುಂತಾದ ಮಂಗಳ ಕಾರ್ಯಗಳಲ್ಲಿ ಭಾಗವಹಿಸುವುದು ನಿಷಿದ್ಧ ಎಂದು ಹಿಂದೂ ಧರ್ಮದ ಧಾರ್ಮಿಕವಾದ ಕಟ್ಟುಪಾಡು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಆದರೆ ಇಂತಹ ಕಾರ್ಯಕ್ರಮಗಳಲ್ಲಿ ಅನಿವಾರ್ಯವಾಗಿ ಸ್ತ್ರೀ ಭಾಗವಹಿಸಬೇಕಾದಾಗ ಋತುಸ್ನಾನದ ದಿನವನ್ನು ಮುಂದೂಡುವುದು ಅನಿವಾರ್ಯವಾಗುವುದು. ಅಂತಹ ಸಂದರ್ಭದಲ್ಲಿ ಭೀಮನಕಟ್ಟೆಯ ಭೀಮೇಶ್ವರ ದೇವರಲ್ಲಿ ವ್ರತ ಕೈಗೊಂಡು ನಿರಂತರವಾಗಿ ಇಪ್ಪತ್ತು ದಿನ ಸೂರ್ಯೋದಯದಲ್ಲಿ ಭೀಮನಕಟ್ಟೆಯಲ್ಲಿ ಸ್ನಾನ ಮಾಡಿದರೆ ಋತುಸ್ನಾನದ ದಿನವನ್ನು ಮುಂದೂಡಬಹುದು ಎಂಬ ನಂಬಿಕೆಯಿಂದ ಈಗಲೂ ಕೂಡ ಈ ವ್ರತ ಕೈಗೊಳ್ಳುವವರನ್ನು ಸ್ವತಃ ನಾನೇ ಸಂದರ್ಶಿಸಿದ್ದೇನೆ.

ಆದರೆ ಭೀಮನಕಟ್ಟೆಯ ತುಂಗಾ ನದಿಯ ಸ್ನಾನಕ್ಕೂ, ಋತುಸ್ರಾವದ ದಿನವನ್ನು ಮುಂದೂಡುವುದಕ್ಕೂ ಸಂಬಂಧವಿರುವುದು ನನಗೆ ಖಚಿತವಾಗಿಲ್ಲ. ವೈಜ್ಞಾನಿಕವಾಗಿ ಋತುಸ್ರಾವ ಸ್ತ್ರೀಯರಿಗೆ ಪ್ರಕೃತಿದತ್ತವಾದುದು. ಅದನ್ನು ಮುಂದೂಡುವುದಾಗಲೀ ಅಥವಾ ಮುಂಚಿತವಾಗಿಯೇ ಆಗುವಂತೆ ಮಾಡುವುದು ಧಾರ್ಮಿಕ ವ್ರತಾಚರಣೆಯಿಂದ ಸಾಧ್ಯವಿಲ್ಲ. ವೈದ್ಯಕೀಯ ಚಿಕಿತ್ಸೆಯಿಂದ ಸಾಧ್ಯವಾದರೂ ಅದು ಆರೋಗ್ಯಕ್ಕೆ ಹಾನಿಕರ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆದ್ದರಿಂದ ಭೀಮನಕಟ್ಟೆಯ ತುಂಗಾ ನದಿಯ ಸ್ನಾನದ ಬಗೆಗೆ ಇರುವ ಐತಿಹ್ಯ ನಿರಾಧಾರವಾದುದು ಎಂಬುದೇ ನನ್ನ ಭಾವನೆ.



ಭೀಮನಕಟ್ಟೆ



ಭೀಮೇಶ್ವರ ಲಿಂಗ

ಕವಲೇದುರ್ಗದ ಸಾಂಸ್ಕೃತಿಕ - ಪೌರಾಣಿಕ ಮತ್ತು ಚಾರಿತ್ರಿಕ ಐತಿಹ್ಯಗಳು

ತಾಲ್ಲೂಕು ಕೇಂದ್ರ ತೀರ್ಥಹಳ್ಳಿಯಿಂದ ಸುಮಾರು ಹನ್ನೆರಡು ಕಿ.ಮೀ. ದೂರದಲ್ಲಿನ ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಸಾಲಿನ ಎತ್ತರದ ಪ್ರದೇಶದಲ್ಲಿ ಕವಲೇದುರ್ಗ (ಭುವನಗಿರಿ) ಪ್ರದೇಶವಿದೆ. ಐತಿಹಾಸಿಕವಾಗಿ ಈ ಸ್ಥಳವನ್ನು ಕೆಳದಿ ಅರಸರ ವಂಶಸ್ಥ ವೆಂಕಟಪ್ಪ ನಾಯ್ಕ ಕವಲೇದುರ್ಗ ಕೋಟೆ(ಕಾವಲುದುರ್ಗ)ಯನ್ನು ನಿರ್ಮಾಣ ಮಾಡಿದನೆಂದು ದಾಖಲೆಗಳು ಹೇಳುತ್ತವೆ. ಈ ಪ್ರದೇಶಕ್ಕೆ ಸಂಬಂಧಿಸಿದ ಐತಿಹ್ಯಗಳು ಕುತೂಹಲಕಾರಿಯಾದುದು. ಮಹಾಭಾರತ ಕಾಲದ ಅನೇಕ ಐತಿಹ್ಯಗಳು ಈ ಕೋಟೆಯ ಪ್ರದೇಶದಲ್ಲಿದೆ.

ಪಾಂಡವರು ತಮ್ಮ ವನವಾಸ ಕಾಲವನ್ನು ಕಳೆದ ಪ್ರದೇಶಗಳಲ್ಲೊಂದಾದ **ಕಾಮ್ಯಕವನ** ಪ್ರದೇಶ ಈ ಕವಲೇದುರ್ಗವೆ ಎಂದು ಸ್ಥಳ ಪುರಾಣದ ಐತಿಹ್ಯವನ್ನು ಸಾಕ್ಷೀಕರಿಸುವ ಕುರುಹುಗಳಿವೆ. ಪಾಂಡವರು ತಮ್ಮ ವನವಾಸ ಕಾಲದಲ್ಲಿ ಈ ಪ್ರದೇಶಗಳಲ್ಲಿ ತಂಗಿದ್ದು, ಶಾಶ್ವತ ನೀರಿನ ವ್ಯವಸ್ಥೆಗಾಗಿ ಶಿಖರೇಶ್ವರ ದೇವಸ್ಥಾನದ ಬಳಿ ಭೀಮ ಗದೆಯಿಂದ ಬಂಡೆಯನ್ನು ಒಡೆದು ಕೊಳವನ್ನು ನಿರ್ಮಿಸಿದನು. ಈ ಕೊಳ **ಗಧಾತೀರ್ಥ**ವೆಂದು ಈಗಲೂ ಪಾಂಡವರ ಐತಿಹ್ಯವನ್ನು ತಿಳಿಸುವ ಸಾಕ್ಷಿಯಾಗಿದೆ. ಈ ಗದಾತೀರ್ಥದ ವೈಶಿಷ್ಟ್ಯವೆಂದರೆ, ವರ್ಷದ ಎಲ್ಲಾ ಕಾಲದಲ್ಲೂ ಇದರಲ್ಲಿ ನೀರಿರುತ್ತದೆ. ತೆಗೆದಷ್ಟೂ ನೀರು ಬರುತ್ತಿರುತ್ತದೆ. ಕೃಷ್ಣನ ಅಭಯ ಹಸ್ತವನ್ನು ಪಡೆದಿದ್ದ ಪಾಂಡವರು ವನವಾಸವನ್ನು ಸುಖದಿಂದ ಕಳೆದರು. ಕೃಷ್ಣನ ಮಹಿಮೆಯೇ ಈ ಗಧಾತೀರ್ಥದ ವೈಶಿಷ್ಟ್ಯಕ್ಕೆ ಕಾರಣವೆಂದು ವಕ್ತ ಶ್ರೀ ಶೇಷಪ್ಪ ಗೌಡ ಕವಲೇದುರ್ಗ ಇವರು ಹೇಳುತ್ತಾರೆ.

ಅಲ್ಲದೆ ಶ್ರೀ ಶಿಖರೇಶ್ವರ ದೇವಸ್ಥಾನದ ಬಳಿ ಇರುವ ದೊಡ್ಡ ದೊಡ್ಡ ನೀರಿನ ತೊಟ್ಟಿಯಂತಿರುವ ಎರಡು ಬೃಹತ್ ತೊಟ್ಟಿಗಳು 'ಎಣ್ಣೆಬಾವಿ' ಮತ್ತು 'ತುಪ್ಪದ ಬಾವಿ'ಗಳೆಂದು ಶ್ರೀಕೃಷ್ಣನ ಸಹಾಯದಿಂದ ಪಾಂಡವರಿಗೆ ಎಣ್ಣೆ, ತುಪ್ಪ ಸಂಗ್ರಹಿಸಿಡಲು ಈ ಕೊಳಗಳನ್ನು ಶ್ರೀಕೃಷ್ಣನೇ ನಿರ್ಮಿಸಿಕೊಟ್ಟಿದ್ದನು ಎನ್ನುವುದು ಇನ್ನೊಂದು ಐತಿಹ್ಯ.

ವಾಸ್ತವವಾಗಿ ಈ ತೊಟ್ಟಿಗಳು ಕೆಳದಿ ಅರಸರು ಧಾನ್ಯಗಳನ್ನು , ಎಣ್ಣೆಗಳನ್ನು ಸಂಗ್ರಹಿಸುವುದಕ್ಕಾಗಿ ನಿರ್ಮಾಣ ಮಾಡಿದ್ದಾಗಿಯೂ, ಪಾಂಡವರ ಕಾಲದವಾಗಿದ್ದವು

ಎಂದು ಐತಿಹ್ಯವಾಗಿ ಹೇಳುವುದು ವಾಸ್ತವಕ್ಕೆ ದೂರವಾದ ಸಂಗತಿ ಎಂದು ನನಗನ್ನಿಸುತ್ತದೆ.

'ಕವಲೇದುರ್ಗ'ದ ನಿಷ್ಪತ್ತಿ ವಿವರಗಳು :


ಸ್ಥಳ ಪುರಾಣದ ಬಗ್ಗೆ ಗಮನಿಸಿದರೆ ಕವಲೇದುರ್ಗ(ಕಾವಲುದುರ್ಗ) ಅಥವಾ ಭುವನಗಿರಿ ಎಂದು ಕರೆಯಲ್ಪಡುವ ಈ ಸ್ಥಳಕ್ಕೆ ಈ ಹೆಸರಿನ ಹಿಂದೆ ಇರುವ ಇನ್ನೊಂದು ಐತಿಹ್ಯ ಕುತೂಹಲಕಾರಿಯಾದದ್ದು. ಶೈವ ಧರ್ಮದ ಪಂಚಪೀಠಾಧೀಶ್ವರರಲ್ಲಿ ಒಬ್ಬರಾದ ಶ್ರೀಮದ್ ಉಜ್ಜಯನಿ ಸದ್ಧರ್ಮ ಸಿಂಹಾಸನಾಧೀಶ್ವರರಾದ ಜಗದ್ಗುರು ಮರಳುಸಿದ್ದೇಶ್ವರರು ಈ ಭಾಗದ 'ಕಾಮ್ಯಕವನ ' ಅಂದರೆ ಇಂದಿನ ಕವಲೇದುರ್ಗದಲ್ಲಿ ಕೆಲಕಾಲ ತಪಸ್ಸು ಮಾಡಿದ್ದರು. ಈ ಯೋಗಭೂಮಿಯಲ್ಲಿ ಕಾಡು ಕವಿಲೆ (ಜಾನುವಾರು)ಗಳನ್ನು ಸಾಧು ಪ್ರಾಣಿಗಳನ್ನಾಗಿಸಿದರು. ಕವಿಲೆಗಳು ವಾಸಿಸುತ್ತಿದ್ದ ಈ ದುರ್ಗವು ಕವಿಲೇದುರ್ಗ ವೆಂದು, ಮುಂದೆ ಕಾವಲುದುರ್ಗ, ಕವಲೇದುರ್ಗವೆಂದು ಹೆಸರು ಪಡೆಯಿತು. ಮುಂದೆ ಇವರ ಶಿಷ್ಯವೃಂದದವರು ಮರುಳಸಿದ್ದೇಶ್ವರರೆಂದು ಪ್ರಸಿದ್ಧಿ ಪಡೆದು ಮಹಾಮಹತ್ತಿನ ಮಠ ಸ್ಥಾಪಿಸಿದವರೆಂದು ಪ್ರಖ್ಯಾತರಾದರು. ಶಿವಾಗಮ ತತ್ತ್ವ ಬೋಧನೆಗಳನ್ನು ಜನಸಾಮಾನ್ಯರಿಗೆ ನೀಡಿದ ಶ್ರೀಮರಳುಸಿದ್ಧ ಯತಿಗಳ ಗದ್ದುಗೆಗಳು ಇಂದಿಗೂ ಕವಲೇದುರ್ಗದಲ್ಲಿ ಕಾಣಬಹುದು. ಪುರಾಣದ ಬ್ರಹ್ಮರ್ಷಿ ದೌಮ್ಯ ಋಷಿಗಳು ತಪಗೈದ ಸ್ಥಳವೂ ಇದೆಂದು ಸ್ಥಳದ ಐತಿಹ್ಯ ಹೇಳುವುದರಿಂದ ಮಹಾಭಾರತದ ಉಲ್ಲೇಖದನ್ವಯ ಪಾಂಡವರು ವನವಾಸ ಕಾಲದಲ್ಲಿ ದೌಮ್ಯ ಮಹರ್ಷಿಗಳ ಆಶ್ರಮದಲ್ಲಿ ಕೆಲಕಾಲ ತಂಗಿದ್ದರು ಎಂಬ ಅಂಶದಿಂದ ಕವಲೇದುರ್ಗ ಪ್ರದೇಶದಲ್ಲಿ ಪಾಂಡವರು ವನವಾಸದ ಸಮಯ ಕಳೆದಿದ್ದರು. ಆ ಕಾರಣದಿಂದಲೇ ಭೀಮನಿಂದ ಗಧಾತೀರ್ಥ ನಿರ್ಮಾಣವಾಯಿ ತೆಂದು ಹೇಳುವ ಐತಿಹ್ಯಕ್ಕೆ ಪುಷ್ಟಿ ದೊರೆಯುತ್ತದೆ.

ಕವಲೇದುರ್ಗದ ಇತಿಹಾಸವನ್ನು ದಾಖಲಿಸಿದ ಶ್ರೀ ಕೆ. ಜಗನ್ನಾಥ ಶಾಸ್ತ್ರಿಯವರು ಕವಲೇದುರ್ಗ ಹೆಸರಿನ ಹಿಂದಿರುವ ಐತಿಹ್ಯವನ್ನು ಉಲ್ಲೇಖಿಸುತ್ತಾ

> '' ಈ ಪ್ರದೇಶದಲ್ಲಿ ಋಷಿಗಳ ಆಶ್ರಮಗಳು ಹೆಚ್ಚಾಗಿದ್ದವು. ಕಪಿಲ ವರ್ಣದ ಹಸುವಿನ ಹಾಲು, ಮೊಸರು ಮತ್ತು ತುಪ್ಪ ಇವು ಹೋಮ, ಮತ್ತು ಪೂಜಾ ಕಾರ್ಯಗಳಿಗೆ ಶ್ರೇಷ್ಠತೆಯನ್ನು ಪಡೆದಿದ್ದರಿಂದ ಅವುಗಳನ್ನೇ ಹೆಚ್ಚಾಗಿ ಸಾಕುತ್ತಿದ್ದರು. ಅವು ಈ ಬೆಟ್ಟ

ಪ್ರದೇಶಕ್ಕೆ ಮೇಯುವುದಕ್ಕೆ ಬರುತ್ತಿದ್ದವು. ಕಪಿಲ ವರ್ಣದ ಹಸುಗಳಿಗೆ ಪ್ರಿಯವಾದ ಬೆಟ್ಟವಾದ್ದರಿಂದ ಕಪಿಲದುರ್ಗ ಎಂದು ಕರೆಯುತ್ತಿದ್ದರು. ಕಾಲಾಂತರದಲ್ಲಿ ಕಪಿಲದುರ್ಗ, ಕವಲೆದುರ್ಗ ಆಯಿತು. ಧಾರವಾಡ ಜಿಲ್ಲೆಯ ಹಾನಗಲ್ಲು ದ್ವಾಪರ ಯುಗದ ವಿರಾಠ ನಗರವಾಗಿತ್ತು ಎಂಬ ಊಹೆಯಿದೆ. ವಿರಾಠ ರಾಜನ ಹಸುಗಳು (ಕಪಿಲೆಗಳು) ಇಲ್ಲಿಗೆ ಮೇಯಲು ಬರುತ್ತಿದ್ದವು. ಆದ್ದರಿಂದ ಕಪಿಲೆದುರ್ಗ ಎಂದು ಹೆಸರಾಯಿತು. ಅನಂತರ ಕವಲೇದುರ್ಗ ಎಂದಾಯಿತು. ಈ ಬೆಟ್ಟದ ಬುಡದಲ್ಲೇ ಕೌಲೇ ಎಂಬ ಹಳ್ಳಿಯಿತ್ತು. ಈ ಹಳ್ಳಿಯಲ್ಲಿ ತೊಲೆತಮ್ಮ ಮತ್ತು ಮುಂಡಿಗೆತಮ್ಮ ಎಂಬ ಅಣ್ಣ -ತಮ್ಮಂದಿರು ಗ್ರಾಮಾಧಿ ಕಾರಿಗಳಾಗಿ ದ್ದರು. ಅವರು ಬೆಟ್ಟದ ಮೇಲೆ ಒಂದು ಕೋಟೆಯನ್ನು ಕಟ್ಟಿದ್ದರು. ಆದ್ದರಿಂದ ಕವಲೇದುರ್ಗ ಎಂದು ಹೆಸರಾಯಿತು "[2] ಎಂದು ಉಲ್ಲೇಖಿಸುತ್ತಾರೆ.

ಕವಲೇದುರ್ಗವು ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಹಲವಾರು ರಂಜನೀಯ ಐತಿಹ್ಯಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ ಎಂದು ನನಗನ್ನಿಸುತ್ತದೆ. ಅಂತೆಯೇ ಪೌರಾಣಿಕವಾಗಿ ಈ ಸ್ಥಳದ ಬಗೆಗೆ ಇರುವ ಐತಿಹ್ಯದ ಬಗ್ಗೆ ನನ್ನ ಸಂಶೋಧನೆಯಲ್ಲಿ ತಿಳಿದ ಒಂದು ಸಂಗತಿ, ಪಾಂಡವರ ವನವಾಸ ಸಂದರ್ಭದಲ್ಲಿ ಅವರು ವಾಸವಾಗಿದ್ದ ಕಾಮ್ಯಕವನ ಪ್ರದೇಶ ಇದು ಹೌದೇ ? ಎಂದು ವಿಮರ್ಶಿಸಿದಾಗ ವ್ಯಾಸ ಭಾರತದ ಉಲ್ಲೇಖದನ್ವಯ ಇಂದ್ರಪ್ರಸ್ಥ - ಹಸ್ತಿನಾಪುರ ಉತ್ತರ ಭಾರತದ ಈಗಿನ ದೆಹಲಿ ಮತ್ತು ಉತ್ತರ ಪ್ರದೇಶದ ಭಾಗಗಳಲ್ಲಿ ಬರುವ ಪೌರಾಣಿಕ ನಗರಗಳು. ಇವು ಪಾಂಡವರು ಮತ್ತು ಕೌರವರು ವಾಸವಿದ್ದು ಆಳಿದ ಪ್ರದೇಶವೆಂದು ಉಲ್ಲೇಖಗಳಿವೆ. ಪುರಾಣದ ಹಿನ್ನೆಲೆಯಲ್ಲಿ ವ್ಯಾಸ ಭಾರತದನ್ವಯ ವನವಾಸಕ್ಕೆ ಹೊರಟ ಪಾಂಡವರು ಹಸ್ತಿನಾಪುರವನ್ನು ಬಿಟ್ಟು ಗಂಗಾನದಿ ತೀರದಲ್ಲಿ ಒಂದು ದಿನ ತಂಗಿದ್ದು ನಂತರ ಸರಸ್ವತಿನದಿ ತೀರದ ಕಾಮ್ಯಕವನಕ್ಕೆ ತೆರಳಿದರು ಎಂದಿದೆ. ಆದರೆ, ಉತ್ತರ ಭಾರತದಲ್ಲಿ ಹರಿಯುವ ಗಂಗಾಸರಸ್ವತಿ ನದಿ ತೀರದ ಕಾಮ್ಯಕವನ ಅದೇ ಪಾಂಡವರು ವನವಾಸ ಕಳೆದ ಪ್ರದೇಶವೆಂದು ನಿರೂಪಿತವಾಗಿರುವಾಗ, ದಕ್ಷಿಣ ಭಾರತದ ಕರ್ನಾಟಕದ ತುಂಗಾ ತೀರ ಪ್ರದೇಶ ಕವಲೇದುರ್ಗ ಕಾಮ್ಯಕವನವೆಂದು ಹೇಳುವ ಸ್ಥಳೀಯ ಐತಿಹ್ಯ ಎಷ್ಟು ಸರಿ ಎಂದು ಪ್ರಶ್ನೆ ಮಾಡುವುದು ಇಲ್ಲಿ ಅನಿವಾರ್ಯ.




ಶ್ರೀ ಮಾರಿಕಾಂಬಾ ದೇವಾಲಯ, ಕೌಲೇದುರ್ಗ.



ಶ್ರೀ ಮಾರಿಕಾಂಬಾ, ಕೌಲೇದುರ್ಗ.



ಗಧಾತೀರ್ಥ, ಪಾಂಡವರ ಕುರುಹು ಹೇಳುವ ಐತಿಹ್ಯ.



ಎಣ್ಣೆಬಾವಿ, ತುಪ್ಪದಬಾವಿ ಕೋಟೆ ಆವರಣ, ಕೌಲೇದುರ್ಗ.

ಮೃಗವಧೆ ಕ್ಷೇತ್ರದ ಪೌರಾಣಿಕ ಐತಿಹ್ಯಗಳು

ಮೃಗವಧೆ ಕ್ಷೇತ್ರದ ಐತಿಹ್ಯದ ಬಗೆಗೆ ರಾಮಾಯಣ ಮತ್ತು ಸ್ಕಂದಪುರಾಣಕ್ಕೆ ಸಂಬಂಧಿಸಿದ ದೀರ್ಘವಾದ ಉಲ್ಲೇಖಗಳಿರುವ ಐತಿಹ್ಯಗಳು ಸಂಶೋಧಕನ ಗಮನ ಸೆಳೆಯುತ್ತವೆ. ಸ್ಥಳೀಯ ವಕ್ತೃ ಶ್ರೀ ಸೂರ್ಯನಾರಾಯಣ ಜೋಯಿಸ್ ಮೃಗವಧೆ ಇವರ ಮಾತಿನಲ್ಲಿ ಕೇಳಿದ ಐತಿಹ್ಯದ ವಿವರಗಳು ಹೀಗಿವೆ -ಸಹ್ಯಾದ್ರಿ ಖಂಡದ ಉತ್ತರಾರ್ಧದಲ್ಲಿ (95-96-97-98 ನೇ ಅಧ್ಯಾಯಗಳಲ್ಲಿ) ತುಂಗಾಭದ್ರಾ ತೀರದಲ್ಲಿರುವ ತೀರ್ಥಕ್ಷೇತ್ರಗಳ ವರ್ಣನೆಯಿದ್ದು, ಅದರಲ್ಲಿ ಬರುವ ಕೆಲವು ಶ್ಲೋಕಗಳಲ್ಲಿ ಮೃಗವಧೆ ಕ್ಷೇತ್ರದ ವರ್ಣನೆಯಿದೆ. ಶ್ರೀ ಶತನೀಕನು ಶೌನಕಾದಿಗಳಿಗೆ ವಿವರಿಸಿದ ಶ್ಲೋಕವೆಂದರೆ -

'ಶ್ರೀ ಶತಾನೀಕಃ ॥

ವಿಪ್ರಾತಿವೈಚಿತ್ರ್ಯತಮಂ ತ್ವಯೋದಿತಮಿದಂಶುಭಂ । ॥1॥

ಯತ್ಕುರಂಗವಧಾಸ್ಪಷ್ಟಂ ರಾಘವೇಂದ್ರ ಪ್ರಚೋದಿತಂ ।
ತದೇವಮಾನಸಂ ಮೇದ್ಯ ಪ್ರಲಾತ್ತಯತಿವಲ್ಲಭ ॥2॥

ಪರಿಹಾರಯತಿಚ್ಛಂತಾಂ ಹೃತ್ಯಂಕು ವಿವಸಂಸ್ಥಿತಾಂ ।
ಬಹುಶ್ರುತೋರಹಸ್ಯಾನಿ ಗುರೋರ್ವಕ್ತ್ವ ಸರೋರುಹಾತ್ ॥3॥

ಅನಾದಿ ಪುರುಷೋ ರಾಮಃ ಪ್ರಾಕೃತೀಂತನುಮಾಶ್ರಿತಃ
ಅಪಾಲಯಕೌಶಿಕಸ್ಯಮಹಾಸತ್ವಂ ಮಹಾದ್ಯುತಿಃ ॥4॥

ಅಥ್ವಾಂಕ್ಷೀಚ್ಛಾಂಕರಂಚಾಪಂ ಲಬ್ಧ ಸೀತಾಸ್ವಯಂವರ ॥
ಪಿತುರ್ನಿರ್ದೇಶಾದ್ವಿಪಿನಂ ಸೀತಯಾಲ ಕ್ಷ್ಮಣೇನಚ ॥5॥

ಚಿತಾಚೀರೇಖ ಮಾಶ್ರಿತ್ಯ ದಂಡಕಾನ್‌ಪ್ರವಿತೀತಿಶಃ ॥
ತತಃ ಸತ್ರಾಹವೇರಾಮಸ್ತಿಷ್ಠನ್ನೇವಾವವೀಕ್ಷಿಲ ॥6॥

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮ ಕರ್ಮಣಾಂ ॥
ಖರಂಚ ದೂಷಣಂಚೈವ ತಥತ್ರಿಶಿರ ಸಂರಣೇ ॥7॥

ಕೃದ್ಧೇನತೇಷಾಂ ಪತಿನಾ ರಾವಣೇನ ಪ್ರಚೋದಿತಂ ॥
ತತೋಮಾಯಾ ವಿನಂದೃಷ್ಟ್ವಾ ಮಾರೀಚನ್ನಾಮರಾಕ್ಷಸಂ ॥8॥

ಜಾಯಯಾಪ್ರೇರಿತೋ ರಾಮೋ ಧನುರಾದಾಯ ವೀರ್ಯವಾನ್ ॥
ವಿಧಾಯತಸ್ಯದೈತ್ಯಸ್ಯ ಬಹುರೂಪಮಗಾದಿತಿ ॥9॥

ನಾನಾಕ್ಷೇತ್ರಾಣಿ ತೀರ್ಥಾನಿ ಋಷೀಣಾಮಾಶ್ರಮಾಣಿಚ ॥
ವಿಹಾಯತುಂಗಭದ್ರಾಯಾಃ ದಕ್ಷಿಣೇರೋದಸಿಸ್ವರಃ ॥10॥

ಆಮಾರೀತ್ಕಥಮಾಖ್ಯಾಹಿ ಋಷೀಣಾಮಗ್ರಸಂಚರಂ॥
ಸಾಯಕಾಗ್ರಸ್ಯರಾಮಸ್ಯ ತೈಕ್ಷ್ಣತ್ವಂ ನಾತ್ರಿವಾಕಿಮು ॥11॥

ದೋರ್ದಂಡ ಲಕ್ಷ್ಮೀಸ್ಸೈವ ತ್ರಪಾಸಿಂಧೌ ನಿಮಚ್ಚಿತಾ ॥
ತಥಾಮಹಾನುಭಾವಸ್ಯ ಪ್ರಜ್ಞಾಶಕ್ತಿರ್ಭವೇನ್ನರಂ ॥12॥

ಚಿತ್ರಕೂಟಸಿತಾರಾಮಃ ಕುಶಾಗ್ರೇವಿಷ್ಟರಸ್ಯಚ ॥
ಪೈತಾಮಹಾಸ್ತ್ರಂಧಾಯ ಜಯಂ ತಾಮನಿಯೋಜಯತ್ ॥13॥

ಸೀತಾಪರಾಧೀ ಪಾಪಾತ್ಮಾಕಾಕರೂಪಧರಃಪುರಾ ॥
ಭಿಭಾಯತೇನೈವಾಸ್ತ್ರೇಣಬಭ್ರಾಮ ಭುವನತ್ರಯಂ ॥14॥

ಬ್ರಹ್ಮೇಂದ್ರಾದಿಭಿಃಸರ್ವೈರ್ನಾರಕ್ಷಿಧ್ವಾಂಕ್ಷ ರೂಪಧತ್ ॥
ಅಥ್ಯೆಂದ್ರೋಪಿ ರಾಮಸ್ಯವವಂದೇ ಚರಣಾಂಬುಜಮ್"[13] ॥15॥

ಈ ಶ್ಲೋಕಗಳ ಹಿನ್ನೆಲೆಯಲ್ಲಿ ಮೃಗವಧೆ ಕ್ಷೇತ್ರದ ಪೌರಾಣಿಕ ಐತಿಹ್ಯಗಳನ್ನು ಗಮನಿಸಿದಾಗ ಇದರ ಸಾಂಸ್ಕೃತಿಕ ರಂಜನೀಯವಾಗಿದೆ. ಶ್ರೀ ಮಾರೀಚ ಮೃಗವಧಾ ಕ್ಷೇತ್ರವು ತೀರ್ಥಹಳ್ಳಿ ತಾಲ್ಲೂಕಿನಲ್ಲಿದ್ದು, ಅಲ್ಲಿಂದ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ತೀರ್ಥಹಳ್ಳಿಯಿಂದ ಬಸ್ ಸೌಕರ್ಯವಿದೆ. ಶಿವಮೊಗ್ಗ - ಆಗುಂಬೆ ಹೆದ್ದಾರಿಯಿಂದ ತೂದೂರು ಎಂಬಲ್ಲಿ ಬಸ್ಸಿಳಿದು ತುಂಗೆಯನ್ನು ದಾಟಿ ಬಂದರೆ ಎಂಟು ಕಿ.ಮೀ. ನಡೆದು ಬರಬೇಕು. ಅದೇ ಹೆದ್ದಾರಿಯಲ್ಲಿಳಿದು ಮುಡುಬ ಸೇತುವೆ ದಾಟಿ ಮಲ್ಲಂದೂರಿನ ಮೂಲಕ ನಡೆದು ಬಂದರೆ ಎಂಟು ಕಿ.ಮೀ. ಆಗುತ್ತದೆ. ಮಲ್ಲಂದೂರಿನಿಂದ ಮೃಗವಧೆಗೆ ಒಂದು ಸಂಪರ್ಕ ರಸ್ತೆಯಾದಲ್ಲಿ ಶಿವಮೊಗ್ಗದಿಂದ ಮೃಗವಧೆಗೆ ಕೇವಲ ನಲವತ್ತೈದು ಕಿ.ಮೀ. ಆಗುತ್ತದೆ. ಕೊಪ್ಪದಿಂದ ಸಿದ್ಧರಮಠದ ಮೂಲಕ ಶೇಡ್ಗಾರ್ - ಮೃಗವಧೆಗೆ ಹನ್ನೆರಡು ಕಿ.ಮೀ. ಆಗುತ್ತಿದ್ದು, ಇಲ್ಲಿಯೂ ಕೂಡುರಸ್ತೆ ಶೇಡ್ಗಾರಿನಿಂದ ಸಿದ್ಧರಮಠಕ್ಕೆ ನಾಲ್ಕು ಕಿ.ಮೀ. ಆಗಬೇಕಾಗಿದೆ.

ಹಿಂದಿನ ಕಾಲದಲ್ಲಿ ಮೃಗವಧೆಯೆಂಬ ಹೆಸರು ಕರೆಯಲು ಬರದೆ, ಮೃಗವಸೆ, ಮೃಗಸೆ, ಮರುವಾಸೆ, ಮೊರಶೆ ಇತ್ಯಾದಿ ಅಡ್ಡ ಹೆಸರುಗಳು ಬಂದಿವೆ. ಯಾರಿಗೂ ಮೃಗವಧೆಯೆಂಬ ಊರು ಇದೆ ಎಂಬುದೇ ತಿಳಿದಿರಲಿಲ್ಲ. ಸ್ವಾತಂತ್ರ್ಯ ನಂತರದ ಕಾಲದಲ್ಲಿ ಸಂಚಾರೀ ವ್ಯವಸ್ಥೆಯು ಉತ್ತಮಗೊಂಡ ನಂತರ ಕ್ಷೇತ್ರದ ಅಭಿವೃದ್ಧಿಗೆ ಕಾರಣವಾಗಿದೆ. ಬಸ್ಸುಗಳ ಸಂಚಾರದಿಂದಾಗಿ ಭಕ್ತಾದಿಗಳೂ ಹೆಚ್ಚಾಗಿ ಬರುತ್ತಿದ್ದಾರೆ.

ಈ ಕ್ಷೇತ್ರದ ಮೂಲವು ಪೌರಾಣಿಕವಾಗಿದೆ. ಇಲ್ಲಿ ಮೊದಲು ನರಸಿಂಹ ದೇವಸ್ಥಾನವಿದ್ದು, ಉಗ್ರನರಸಿಂಹ ವಿಗ್ರಹವಿತ್ತೆಂದೂ, ನಂತರ ಊರಿಗೆ ತೊಂದರೆಯಾಗಿದ್ದರಿಂದ ಆ ವಿಗ್ರಹವನ್ನು ತೆಗೆದು, ದೇವಸ್ಥಾನದ ಎದುರಿಗೆ ಹೂಳಿ ಅದರ ಮೇಲೆ ಒಂದು ಕಂಬ ನೆಟ್ಟಿದ್ದು ಅದು ಬೆಳೆಯುತ್ತಾ ಇದೆಯೆಂದು ಪ್ರತೀತಿ. ಕಂಬವು ಎತ್ತರವಾಗಿ ಬೆಳೆಯುತ್ತಿರುವುದು ನಮಗೂ ಕಂಡುಬಂದಿದೆ. ಆ ನಂತರ ಒಂದು ವ್ಯಾಘ್ರ ನರಸಿಂಹ ವಿಗ್ರಹವನ್ನು ಸ್ಥಾಪಿಸಿದ್ದರು.

ನರಸಿಂಹ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಶ್ರೀ ಆಂಜನೇಯ

ದೇವಾಲಯವಿದೆ. ಸುಂದರವಾದ ಆಂಜನೇಯ ವಿಗ್ರಹವಿದ್ದು, ಕ್ರಿ.ಶ. 1954 ರಲ್ಲಿ ಜೀರ್ಣೋದ್ಧಾರ, ಅಷ್ಟಬಂಧ, ಪ್ರತಿಷ್ಠಾವಿಧಿಗಳು ನಡೆದಿವೆ.

ಆಂಜನೇಯ ದೇವಸ್ಥಾನದಿಂದ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಒಂದು ಅಶ್ವತ್ಥ ಕಟ್ಟೆಯಿದೆ. ಇಲ್ಲಿ ಪುರಾತನ ಅಶ್ವತ್ಥ ಮರವಿತ್ತು. ಅದು ಬಿದ್ದು ಹೋದನಂತರ ಹೊಸಮರವನ್ನು ಬೆಳೆಸಲಾಗಿದೆ. ಈ ಅಶ್ವತ್ಥಕಟ್ಟೆಯಲ್ಲಿ ಬಹಳ ಹಿಂದಿನ ಒಂದು ಶನೈಶ್ವರ ವಿಗ್ರಹವಿತ್ತು. 1985 ರಲ್ಲಿ ಈ ಕಟ್ಟೆಯನ್ನು ಹೊಸದಾಗಿ ಕಟ್ಟಿರುವುದಲ್ಲದೆ, ಹೊಸದಾಗಿ ಶನೈಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಜೊತೆಗೆ ನವಗ್ರಹ ವಿಗ್ರಹಗಳನ್ನೂ ಹೊಸದಾಗಿ ಪ್ರತಿಷ್ಠಾಪಿಸಲಾಗಿದೆ. ಪೌರಾಣಿಕ ಕಥೆಯ ಪ್ರಕಾರ ಈಶ್ವರನಿಗೆ ಶನಿಯು ಬಿಟ್ಟ ಸ್ಥಳವಾದ್ದರಿಮದ, ಗೋಚಾರ ರೀತ್ಯಾ ಜನರಿಗೆ ಬರುವ ಶನಿ ಉಪದ್ರವಕ್ಕೆ, ಭಕ್ತಾದಿಗಳು ಈ ಸ್ಥಳದಲ್ಲಿ , ಶನೈಶ್ವರನ ಸೇವೆಯನ್ನು ಮಾಡಿ ಶನಿಕಾಟದಿಂದ ಬಿಡುಗಡೆ ಹೊಂದುತ್ತಾರೆ. ಅವರವರ ನಂಬಿಕೆಗೆ ತಕ್ಕಂತೆ ಇದು ನಿಜವಾಗಿ ಕಂಡುಬರುತ್ತಿದೆ.

ಈ ಅಶ್ವತ್ಥವೃಕ್ಷ ಹಾಗೂ ಶ್ರೀ ಶನೈಶ್ವರ ದೇವಾಲಯದ ಎದುರಿಗೇ ಪುರಾಣ ಪ್ರಸಿದ್ಧವಾದ, ಈ ಪ್ರಾಂತಕ್ಕೆ ಹೆಸರುವಾಸಿಯಾದ ಶ್ರೀ ಶಂಕರೀಶ್ವರ ದೇವಾಲಯವಿದೆ. ಹಿಂದೆ ಕಾಡಿನ ಮಧ್ಯದಲ್ಲಿದ್ದುದರಿಂದ **ಕಾನುಮಲ್ಲಪ್ಪ** ದೇವಸ್ಥಾನ ಎಂದು ಕರೆಯುತ್ತಿದ್ದರು. ಕಾಡಿನೊಳಗಿದ್ದ ಈ ಲಿಂಗವನ್ನು ಊರಿಗೆ ತರುವ ಉದ್ದೇಶದಿಂದ ಆನೆಕಟ್ಟಿ ಲಿಂಗವನ್ನು ಎಳೆಸಿದರೆಂದೂ, ಲಿಂಗವು ತುಂಡಾಗಿ ಈಗ ಇರುವ ಸ್ಥಳದಲ್ಲಿ ಉಳಿಯಿತೆಂದೂ ಪ್ರತೀತಿ. ಇಲ್ಲಿ ಒಂದು ಸಣ್ಣಗುಡಿಯು ಮೂಲದಲ್ಲಿದ್ದು ನಂತರ ಚಿಕ್ಕ ದೇವಾಲಯ ಕಟ್ಟಲಾಯಿತು. ನಂತರ 1954 ರಲ್ಲಿ ಸರಿಯಾದ ದೇವಸ್ಥಾನ ಕಟ್ಟಲಾಯಿತು. ನಂತರ 1985 ರಲ್ಲಿ ಈಗ ಇರುವ ಶಿಲಾಮಯ ದೇವಸ್ಥಾನವು ಕಟ್ಟಲ್ಪಟ್ಟು ಹೊಸಲಿಂಗವನ್ನು ಅಷ್ಟಬಂಧ, ಪ್ರತಿಷ್ಠೆಗಳಿಂದ ಉತ್ತಮವಾಗಿ ನಿರ್ಮಿಸಲಾಗಿದೆ.

ಮೃಗವಧೆಯ ಸ್ಥಳ ಪುರಾಣದ ಐತಿಹ್ಯ :

ಕೃತಯುಗದಲ್ಲೊಮ್ಮೆ ಈಶ್ವರನ ಸನ್ನಿಧಿಯಲ್ಲಿ ದೇವಾಧಿದೇವತೆಗಲೂ, ಪಾರ್ವತಿ, ಲಕ್ಷ್ಮೀ ಸರಸ್ವತಿಯರೂ, ಋಷಿಮುನಿಗಳೂ ನೆರೆದಿದ್ದರು. ಸ್ತ್ರೀ ಹಾಗೂ ಪುರುಷ

ದೇವತೆಗಳಲ್ಲಿ ಯಾರು ಶ್ರೇಷ್ಠರು ಎಂಬ ವಾದವಾಯಿತು. ಆಗ ಪಾರ್ವತಿಯು, ವಾಣಿಗೆ ನಿನ್ನ ಗಂಡನಿಗೂ ಐದು ತಲೆ, ನನ್ನ ಗಂಡನಿಗೂ ಐದು ತಲೆಯಿರುವಾಗ, ಬೂದಿ ಬಡುಕನಾದ ನಿನ್ನ ಗಂಡನ ಶ್ರೇಷ್ಠತೆಯೇನು ಎಂದು ಹಂಗಿಸುತ್ತಾಳಾದ್ದರಿಂದ ಅವಳಿಗೆ ಸರಿಯಾದ ಬುದ್ಧಿ ಕಲಿಸಬೇಕು ಎಂದು ಈಶ್ವರನಲ್ಲಿ ಕೇಳಿಕೊಳ್ಳುತ್ತಾಳೆ. ಆಗ ಈಶ್ವರನು ದೇವತೆಗಳಲ್ಲಿ ಯಾರೂ ಶ್ರೇಷ್ಠರೂ ಅಲ್ಲ , ಕನಿಷ್ಠರೂ ಅಲ್ಲ, ಎಲ್ಲರೂ ಅವರವರ ಕರ್ತವ್ಯಕ್ಕೆ ತಕ್ಕಂತೆ ಇರುತ್ತಾರೆ ಎಂದು ಹೇಳಿದರೂ ಪಾರ್ವತಿಗೆ ಸಮಾಧಾನವಾಗಲಿಲ್ಲ. ಪ್ರಪಂಚದಲ್ಲಿ ನುಡಿಯಲ್ಲದೆ ಬದುಕುವುದು ಕಷ್ಟ, ಆ ನುಡಿಯಿಂದಲೇ ವೇದ, ವೇದಾಂತಗಳು, ತಾಳವಾದ, ಸಂಗೀತ ಇತ್ಯಾದಿ ಸಮಸ್ತವಿದ್ಯೆಯೂ ಅಡಗಿವೆಯಾದ್ದರಿಂದ ವಾಣಿಗೆ ಸ್ವಲ್ಪ ಮಟ್ಟಿನ ಮೇಲ್ಮೆಯಿರಬಹುದು ಎನ್ನುತ್ತಾನೆ. ಆಗ ಪಾರ್ವತಿಯು ಸಿಟ್ಟುಗೊಂಡು 'ಚಂಪಕಾವನ'ಕ್ಕೆ ಹೋಗುತ್ತಾಳೆ. ಆಗ ಅವಳ ಸಖಿಯರು ಅವಳನ್ನು ಉಪಚರಿಸಿ ಅಲಂಕೃತ ಮಂಟಪದಲ್ಲಿ ಕುಳ್ಳಿರಿಸಿ ಉಪಚರಿಸುತ್ತಾರೆ. ಈ ಸನ್ನಿವೇಶವನ್ನು 'ಡೋಲಾಗೌರಿ ' ಎಂದು ಜನರು ಇಂದಿಗೂ ಪೂಜಿಸುತ್ತಾರೆ. ಈ ಸಮಯದಲ್ಲಿ ನಾರದನು ಇಂಪಾಗಿ ವೀಣೆಯನ್ನು ನುಡಿಸುತ್ತಾ, ಭಗವಧ್ಯಾನ ಮಾಡುತ್ತಾ, ಅಲ್ಲಿಗೆ ಬರುತ್ತಾನೆ. ಅವನು ದೇವಿಗೆ ನಮಸ್ಕಾರ ಮಾಡುತ್ತಾ, 'ಹೀಗೇಕೆ ದುಃಖಿತಳಾಗಿರುವೆ ' ಎಂದು ಕೇಳಿದನು. ಆಗ ದೇವಿಯು ಎಲ್ಲಾ ವಿಷಯಗಳನ್ನೂ ಸವಿಸ್ತಾರವಾಗಿ ತಿಳಿಸುತ್ತಾ, ವಾಣಿಯ ಗರ್ವವನ್ನು ಮುರಿಯಲು ಈಶ್ವರನು ನಿರಾಕರಿಸಿದನು. ಈಗ ಈಶ್ವರನಿಗೆ ಬುದ್ಧಿ ಕಲಿಸುವಂತಾಗಬೇಕು ಇದಕ್ಕೊಂದು ಉಪಾಯವನ್ನು ಹೇಳೆನಲು, ನಾರದನು 'ಶನೈಶ್ವರನನ್ನು ಬರಮಾಡಿಕೋ ' ಅವನು ನಿನ್ನ ಅಭಿಲಾಷೆಯನ್ನು ನೆರವೇರಿಸುತ್ತಾನೆ. ಮುಂದೆ ಶುಭವಾಗುವುದು ಎಂದು ಹೇಳಿ ನಿರ್ಗಮಿಸುತ್ತಾನೆ. ನಂತರ ದೇವಿಯು ಶುದ್ಧಮನಸ್ಕಳಾಗಿ ಶನೈಶ್ವರನನ್ನು ಸ್ತುತಿಸುತ್ತಾಳೆ.

'ಜನ್ಮಸ್ಥಿತೋ ಯಶ್ಚ ಶತಕೃತೋಃ ಪುರಾ । ಚಕಾರಭಿನ್ನಾಮತಿ ಮಂಗವೈಕ್ಲವೀಂ ॥
ಯಸ್ಸೇವಯಾ ಸರ್ವಂ ಸುಖಂತನೋತಿ । ಶನೈಶ್ವರಂ ತಂ ಶರಣಂ ಪ್ರಪದ್ಯೆ ॥1॥

ಯಸ್ಯೈಂಹಿಕೇ ಯಸ್ಯಚ ಪಂಚಮಸ್ಥೋ । ವ್ಯಾಲೂಲುಟಂ ಮ್ಮಸ್ತಕಮಾಪಭೂಯಃ ॥
ಪೂಜಾ ಪ್ರಭಾವೇನ ಗ್ರಹಾಷ್ಟಮತ್ವಂ । ಶನೈಶ್ವರಂ ತಂ ಶರಣಂ ಪ್ರಪದ್ಯೆ ॥2॥

ದದಾಹಿ ದೌವಾರಿಕಯೋರ್ಹರೇಃ ಪುರಾ । ಯೋದ್ವಾದಶಸ್ಥಃ ಕಿಲರಾ ಕ್ಷಸತ್ವಂ ॥
ತತೋಮಹತ್ಸೇವನಯಾ ನಿಜತ್ವಂ। ಶನೈಶ್ವರಂ ತಂ ಶರಣಂ ಪ್ರಪದ್ಯೆ ॥3॥

ಯಶ್ಚಾಷ್ಟಮಸ್ಥಃ ಕಿಲಪುಂಗಕಾಯೋ । ಹಿರಣ್ಯಪೂರ್ವಂ ಕಶಿಪುಂ ವ್ಯಘಾತಯತ್ ॥
ಯೋಸೌ ಸುರಾದ್ಯೈರಪಿ ವಂದನೀಯಂ । ಶನೈಶ್ವರಂ ತಂ ಶರಣಂ ಪ್ರಪದ್ಯೆ ॥4॥

ಯೋವೈಪುರಾದೈತ್ಯಗುರ್ರೋವಿಲೋಚನಂ । ವ್ಯಪೀಟದತ್ಪೂರ್ವಕಟಾಕ್ಷವೀಕ್ಷಣಂ ॥
ದದಾಹಿ ತಸ್ಮೈಖಲುವಾಕ್ಪತಿತ್ವಂ । ಶನೈಶ್ವರಂ ತಂ ಶರಣಂ ಪ್ರಪದ್ಯೆ ॥5॥

ಪಂಗು ಕಾಯಸ್ಯದಶಕ ಮಶ್ವತ್ಥ ದ್ರುಮ ಸನ್ನಿಧೌ । ಸಕೃದ್ದಾಯ ಪಠೇದ್ಭಕ್ತ್ಯಾ
ಶನಿಬಾಧಾನ್ನವಿದ್ಯತೇ ॥ ಪ್ರಾತಃಕಾಲೇ ಪಠೇನ್ನಿತ್ಯಂ। ಸ್ನಾನಕಾಲೇ ವಿಶೇಷತಃ ॥

ಪ್ರದೋಷ ಕಾಲೇಯೋ ಭಕ್ತ್ಯಾ । ಜಪೇನ್ನಾಸ್ತಿ ಕಲೇರ್ಭಯಂ ॥ ಕಲಿರೇವಶನಿಸ್ಸಾಕ್ಷಾತ್
ಶನಿರೇವ ಕಲಿಸ್ವಯಂ । ಸೈವಮೃತ್ಯುನೃಪಶ್ರೇಷ್ಠ ಸತ್ಯಂ ಸತ್ಯಮಯೋದಿತಂ ॥'[3]

ಹೀಗೆ ದೇವಿಯು ಶನೈಶ್ವರನನ್ನು ಕೈಮುಗಿದು ಪ್ರಾರ್ಥಿಸಿದಳು. ಆಗ ಶನೈಶ್ವರನು ಪ್ರತ್ಯಕ್ಷನಾಗಿ 'ಎಲೌ ದೇವಿಯೇ ' ಎದ್ದೇಳು ! ಎಂದು ವಿನಯವಾಗಿ ಪ್ರಾರ್ಥಿಸುತ್ತಾ, ಜಗದಂಬೆಯನ್ನು ಪ್ರಾರ್ಥಿಸಿದನು.

'ಜಯದೇವಿ ನಮಸ್ತುಭ್ಯಂ । ಜಯಭಕ್ತ ವರಪ್ರದೇ ॥
ಜಯಶಂಕರ ವಾಮಾಂಗೇ । ಮಂಗಲೇ ಸರ್ವಮಂಗಲೇ ॥1॥

ಜಯಕಲ್ಯಾಣನಿಶಿವೆ । ಜಯಕಲ್ಪಾಂತಸಂಸ್ಥಿತೆ ॥
ಜಯವಿಶ್ವಂಭರೇನಿತ್ಯ । ಮಂಗಲೇ ಸರ್ವಮಂಗಲೆ ॥2॥

ಜಯಮಾಹಿಷ ದೋರ್ದಂಡೆ । ಖಂಡಿನ್ಬ್ರಾಂಡಲಾರ್ಚಿತೆ ॥
ಜಯಮಾತಂಗತನಯೇ । ಮಂಗಲೇ ಸರ್ವಮಂಗಲೆ '[4] ॥3॥

ಶನಿಯು ಹೀಗೆ ದೇವಿಯನ್ನು ಪ್ರಾರ್ಥಿಸಿ, ನನ್ನಿಂದ ಏನಾಗಬೇಕು. ಯಾವ ಕಾರ್ಯವನ್ನಾದರೂ ಮಾಡುತ್ತೇನೆ ಎನ್ನುತ್ತಾನೆ. ಆಗ ದೇವಿಯು, ಎಲೈ ಶನಿಯೇ ಈಶ್ವರನಿಂದ ನನಗೆ ಹೀಗೆ ಅಪಮಾನವಾಗಿದೆಯಾದ್ದರಿಂದ, ಅವನಿಗೆ ಸರಿಯಾದ ಬುದ್ಧಿ ಕಲಿಸು ಎನ್ನುತ್ತಾಳೆ. ಆಗ ಶನಿಯು ಈಶ್ವರನು ಮುಕ್ಕಣ್ಣನ್ನು ತೆರೆದರೆ ಪ್ರಪಂಚವೇ ಲಯವಾಗುವುದು. ಇನ್ನು ನಾನೆಲ್ಲಿ ಉಳಿಯುತ್ತೇನೆನಲು, ದೇವಿಯು ಇದು ನನ್ನ ಆಜ್ಞೆ. ತ್ರಿಲೋಕಶಕ್ತಿನಿಯಾದ ನನ್ನ ಶಕ್ತಿಯನ್ನಾದರೂ ನೋಡು ಎನ್ನುವಳು. ಆಜ್ಞೆಯನ್ನು ಶಿರಸಾ ವಹಿಸಿದ ಶನಿಯು ಈಶ್ವರನ ಸನ್ನಿಧಿಗೆ ಬಂದು ಬೆನ್ನುಹಾಕಿ ಕೂರುತ್ತಾನೆ. ಆಗ ಈಶ್ವರನು ಸಭಾ ಮರ್ಯಾದೆಯಂತೆ ವರ್ತಿಸು. ಎದುರಾಗಿ ಕುಳಿತಿರು ಎನ್ನುತ್ತಾನೆ. ಆಗ ಶನಿಯು ನನಗೆ ಸಭೆಗಾಗಲೀ ನಿನಗಾಗಲೀ ಅಪಮಾನಿಸುವ ಉದ್ದೇಶವಿಲ್ಲ. ನನ್ನ ದೃಷ್ಟಿಯು ಕೆಟ್ಟದ್ದಾದ್ದರಿಂದ ತಿರುಗಿ ಕೂರಬೇಕಾಯಿತು ಎನ್ನುವನು. ಆಗ ಈಶ್ವರನು ಕೋಪಗೊಂಡವನಾಗಿ, ಎಲೈ ಶನಿಯೇ ನಿನ್ನ ಮೂರ್ಖತನವನ್ನು ನಿಲ್ಲಿಸು. ಮುಕ್ಕಣ್ಣನಾದ ನನಗೆ ನಿನ್ನ ದೃಷ್ಟಿಯಿಂದೇನಾದೀತು. ಸಭಾಮರ್ಯಾದೆಯಂತೆ ವರ್ತಿಸು ಎಂದನು. ಆಗ ಶನಿಯು ಸಭಾ ಮುಖನಾಗುತ್ತಿದ್ದ ಹಾಗೇ ತನ್ನ ದೃಷ್ಟಿಯನ್ನು ಪೂರ್ತಿಯಾಗಿ ಈಶ್ವರನಲ್ಲಿ ನೆಲೆಗೊಳಿಸುತ್ತಾನೆ. ಇದರಿಂದ ಈಶ್ವರನಿಗೆ ದಿಗ್ಭ್ರಾಂತಿಯುಂಟಾಗುವುದು. ತಾನೆಲ್ಲಿದ್ದೇನೆ ! ಏನು ! ಎತ್ತ ! ಒಂದೂ ತಿಳಿಯದವನಾಗಿ ತಿರುಗುತ್ತಾ ತಿರುಗುತ್ತಾ, ಸತ್ಯಲೋಕಕ್ಕೆ ಹೋಗಿ ಬ್ರಹ್ಮನನ್ನು ಕಂಡವನೇ ಕೋಪಗೊಂಡು, ಅವನ ಒಂದು ತಲೆಯನ್ನು ತರಿದು, ಭಿಕ್ಷಾಪಾತ್ರೆಯಾಗಿ ಮಾಡಿಕೊಂಡು ದೇಶಾಂತರ್ಗತನಾಗುತ್ತಾನೆ.

ಹೀಗೆ ಬಹಳ ಕಾಲವಾದರೂ ಈಶ್ವರನ ಭೇಟಿಯಾಗದಿದ್ದಾಗ ಪಾರ್ವತಿಗೆ ಭ್ರಮ ನಿರಸನವಾಗುತ್ತದೆ. ಅತೀವ ದುಃಖಿತಳಾಗುತ್ತಾಳೆ. ಜನರು ಗಂಡಬಿಟ್ಟವಳೆಂದೂ, ಗಂಡನನ್ನೇ ಓಡಿಸಿದವಳೆಂದೂ ಆಡಿಕೊಳ್ಳುತ್ತಾರೆ. ಪಾರ್ವತಿಯು ದುಃಖ ಅಪಮಾನಗಳಿಂದ ಜರ್ಝರಿತಳಾಗುತ್ತಾಳೆ. ನಂದಿಯೊಡಗೂಡಿದ ಪಾರ್ವತಿಯು ಈಶ್ವರನನ್ನು ಅರಸುತ್ತಾ ದೇಶದೇಶಗಳನ್ನು ತಿರುಗುತ್ತಾ ಹುಡುಕುತ್ತಾ ಬರುತ್ತಾಳೆ. ಹೀಗೆ ತಿರುಗುತ್ತಾ ಬಂದ ಪಾರ್ವತಿಯು, ಅನೇಕ ನದಿಗಳನ್ನೂ ಋಷ್ಯಾಶ್ರಮಗಳನ್ನೂ, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ ವ್ಯಾಘ್ರಪಾದಮುನಿಗಳ ಆಶ್ರಮಕ್ಕೆ ಬರುತ್ತಾಳೆ. ಅಲ್ಲಿ ಪಾವನೆಯಾದ ಬ್ರಾಹ್ಮೀ ನದಿಯನ್ನು ಕಂಡು ಸಂತೋಷಗೊಳ್ಳುತ್ತಾಳೆ.

ಆಗ ದೇವಿಯು ನಂದಿಯೊಡನೆ ಈ ಬ್ರಾಹ್ಮೀ ನದಿ ತೀರಕ್ಕೆ ಬಂದಳು. ಹಿಂದೆ ಬ್ರಹ್ಮನು ವಿಷ್ಣುವಿನ ಪಾದಕಮಲಗಳನ್ನು ತನ್ನ ಕಮಂಡಲುವಿನಲ್ಲಿನ ನೀರಿನಿಂದ ತೊಳೆದನು. ಆ ದೇವಗಂಗೆಯು ಗುಪ್ತವಾಗಿ ಹರಿಯುತ್ತಾ, ಬ್ರಾಹ್ಮೀ ನದಿಯೆಂದು ಹೆಸರಾಗಿದೆ. ಈ ಸ್ಥಳವೂ ಕೂಡ ರಮ್ಯವಾಗಿದೆ. ಸುತ್ತಲೂ ಕದಂಬವನವಿದೆ. ಈ ಸ್ಥಳದಲ್ಲಿ ನನ್ನ ಎಡಗಣ್ಣು ಅದುರುತ್ತಿದ್ದು, ಮಂಗಳ ಸೂಚಕವಾಗಿದೆ. ಆದ್ದರಿಂದ ನಾನು ಬ್ರಾಹ್ಮೀಯಲ್ಲಿ ಮಿಂದು ಈಶ್ವರನನ್ನು ಪೂಜಿಸುವೆನು. ಕೋಳಿಕೂಗುವುದರೊಳಗಾಗಿ ಈಶ್ವರನು ಪ್ರತ್ಯಕ್ಷನಾಗದಿದ್ದಲ್ಲಿ ಅಗ್ನಿಯನ್ನು ಪ್ರವೇಶಿಸುವೆನು. ಒಳ್ಳೆಯ ಸ್ಥಳವನ್ನು ಹುಡುಕಿ ಶುಚಿಗೊಳಿಸಿ, ಪೂಜೆಗೆ ಅಣಿ ಮಾಡು ಎಂದು ನಂದಿಗೆ ಹೇಳಿದಳು. ಆಗ ನಂದಿಯು ಅಲ್ಲಿಂದ ಒಂದು ಕೂಗಳತೆಯ ದೂರದಲ್ಲಿ ಪ್ರಶಸ್ತವಾದ ಸ್ಥಳವನ್ನು ಆಯ್ಕೆ ಮಾಡಿ, ಹೂವು ಗಂಧ, ತಿಲಾಕ್ಷತೆ ಮುಂತಾದ ಪೂಜಾ ಸಾಮಗ್ರಿಗಳನ್ನು ಅಣಿಗೊಳಿಸಿಟ್ಟನು.

ಆಗ ಶುಭ್ರಸ್ನಾತಳಾದ ಶ್ರೀದೇವಿಯು, ಆ ಸ್ಥಳದಲ್ಲಿಯೇ ಒಂದು ಕುಂಡವನ್ನು ರಚಿಸಿ, ಒಂದು ತೆಂಗಿನ ಕಾಯಷ್ಟು ಗಾತ್ರದ ಅರಿಶಿನದ ಲಿಂಗವನ್ನು ಮಾಡಿ ಮಧ್ಯದಲ್ಲಿ ಸ್ಥಾಪಿಸಿದಳು. ಹೀಗೆ ಪಂಚಕೋನದ ಮಧ್ಯದಲ್ಲಿ ಲಿಂಗವನ್ನು ಸ್ಥಾಪಿಸಿ, ಅದರಲ್ಲಿ 'ಸೊದ್ಯೇಜಾತಂ' ಎಂಬ ಮಂತ್ರದಿಂದ ಶಿವನನ್ನು ಧ್ಯಾನಿಸಿದಳು. ಅದರ ಪೂರ್ವದಲ್ಲಿ 'ವಾಮದೇವಾಯ ' ಎಂಬ ಮಂತ್ರದಿಂದ ವಾಮದೇವನನ್ನು ಧ್ಯಾನಿಸಿದಳು. ಊರ್ಧ್ವ ದಿಕ್ಕಿನಲ್ಲಿ 'ಈಶಾನಸ್ಸರ್ವವಿದ್ಯಾನಾಂ ' ಎಂಬ ಮಂತ್ರದಿಂದ ಈಶಾನನನ್ನು ಧ್ಯಾನಿಸಿದಳು. ಲಿಂಗದ ದಕ್ಷಿಣ ಭಾಗದಲ್ಲಿ 'ಅಘೋರೇಭ್ಯೆಃ' ಮಂತ್ರದಿಂದ ಅಘೋರನನ್ನೂ ಧ್ಯಾನಿಸಿದಳು. ಲಿಂಗದ ಪಶ್ಚಿಮ ಭಾಗದಲ್ಲಿ 'ತತ್ಪುರುಷಾಯ ' ಎಂಬ ಮಂತ್ರದಿಂದ ತತ್ಪುರುಷನನ್ನೂ ಧ್ಯಾನಿಸಿದಳು. ಈಶಾನ್ಯದಲ್ಲಿ ಶ್ರೀಚಕ್ರವನ್ನು ಬರೆದು, ನೀರು ತುಂಬಿದ ಕಲಶವನ್ನು ಸ್ಥಾಪಿಸಿ, ಅದರಲ್ಲಿ ದೇವತೆಗಳನ್ನು ಆಹ್ವಾನಿಸಿ ಪೂಜಿಸಿದಳು. ಷೋಡಶೋಪಚಾರಗಳಿಂದ ಮಹಾಪೂಜೆಯನ್ನೂ ಮಾಡಿ, ಪ್ರದಕ್ಷಿಣೆ ನಮಸ್ಕಾರಗಳನ್ನೂ, ಸ್ತೋತ್ರ ನಮಸ್ಕಾರಗಳನ್ನೂ, ಗೀತ ನರ್ತನಗಳನ್ನೂ ಮಾಡಿ ಶಿವನಲ್ಲೇ ಮನಸ್ಸಿಟ್ಟು ಪ್ರಾರ್ಥಿಸಿದಳು. ಅಷ್ಟಾವಧಾನ ಸೇವೆಗಳಿಂದಲೂ ಶಿವನನ್ನು ಧ್ಯಾನಿಸಿದಳು. ಸೂರ್ಯಾಸ್ತವಾಯಿತು. ಶಿವೆಯು ಶಿವನನ್ನೇ ಧ್ಯಾನಿಸುತ್ತಾ ರಾತ್ರಿ ಪೂಜೆಯಲ್ಲಿ ನಿರತಳಾದಳು.

ಆಗ ಶ್ರೀಮಹಾವಿಷ್ಣುವು ದೇವಿಯ ಭಕ್ತಿಯನ್ನು ಪರೀಕ್ಷಿಸಲು ಅಲ್ಲಿಗೆ ಬಂದನು. ಉತ್ತರ ದಿಕ್ಕಿನಲ್ಲಿ ನಿಂತು ಗೋವುಗಳನ್ನು ಕರೆದನು. ಮೊದಲನೆ ಯಾಮದಲ್ಲಿ ಹುಲಿಯ ಘರ್ಜನೆಯನ್ನೂ, ಎರಡನೆ ಯಾಮದಲ್ಲಿ ಸಿಂಹದ ಘರ್ಜನೆಯನ್ನೂ, ಮೂರನೆಯ ಯಾಮದಲ್ಲಿ ಕೋಳಿಯಂತೆಯೂ ಕೂಗಿದನು. ಆಗ ಶಿವೆಯು ಕೋಳಿ ಕೂಗುವುದರೊಳಗಾಗಿ ಶಿವನನ್ನು ಪಡೆಯುವುದಾಗಿ ಮಾಡಿದ ಪ್ರತಿಜ್ಞೆಯನ್ನು ನೆನಪಿಗೆ ತಂದುಕೊಂಡವಳಾಗಿ, ಪ್ರಾಣವನ್ನು ತ್ಯಜಿಸಿಯಾದರೂ ಮಾನವನ್ನು ಕಾಪಾಡಿಕೊಳ್ಳಬೇಕು. ಬ್ರಹ್ಮ, ವಿಷ್ಣು ಮಹೇಶ್ವರರೊಬ್ಬರೇ ಕಾಳಿ, ಸರಸ್ವತೀ, ಲಕ್ಷ್ಮಿಯರೊಬ್ಬರೇ ಎಂಬ ಪತಿಯ ಮಾತನ್ನು ಧಿಕ್ಕರಿಸಿದ್ದರಿಂದ ನನಗೀಗತಿಯುಂಟಾಯಿತು. ಆದ್ದರಿಂದ ಎಲೈ ನಂದಿಯೇ ! ಇದೇ ಕುಂಡದಲ್ಲಿ ಚಿತೆಯನ್ನು ನಿರ್ಮಿಸು ಎಂದು ಹೇಳಿದಳು. ಪಾರ್ವತಿಯು ಅಗ್ನಿಗೆ ನಮಸ್ಕರಿಸಿ, ಇಂದ್ರಾದಿ ಲೋಕಪಾಲಕರನ್ನೂ, ನವಗ್ರಹರನ್ನೂ, ಸಪ್ತರ್ಷಿಗಳನ್ನೂ, ನದಿಗಳನ್ನೂ, ಸಮುದ್ರಗಳನ್ನೂ, ಪಂಚಮಹಾಪತಿವ್ರತೆಯರನ್ನೂ ಧ್ಯಾನಿಸುತ್ತಾ ಅಗ್ನಿ ಪ್ರವೇಶವನ್ನು ಮಾಡಿದಳು. ಆಗ ವೃಷಭ ಧ್ವಜನಾದ ಶಿವನು ತನ್ನ ಪಾದ ಕಮಲಗಳಲ್ಲಿಯೇ ಮನಸ್ಸಿಟ್ಟು , ತನ್ನ ಸಂಗವನ್ನು ಬಯಸುತ್ತಾ ಅಗ್ನಿಯನ್ನು ಪ್ರವೇಶಿಸುತ್ತಿರುವ ಪಾರ್ವತಿಯ ಕೈಹಿಡಿದು ಪ್ರತ್ಯಕ್ಷನಾದನು. ಆಗ ಬ್ರಹ್ಮ, ವಿಷ್ಣು ಇಂದ್ರ, ಅಗ್ನಿ, ಮೊದಲಾದ ಸಮಸ್ತ ದೇವತೆಗಲೂ ಜಾಬಾಲಿ, ಮೈತ್ರೇಯಿ, ಪರಾಶರರೇ ಮೊದಲಾದ ಮಹರ್ಷಿಗಳು ಈ ಕೌತುಕವನ್ನು ನೋಡಲು ಅಲ್ಲಿಗೆ ಬಂದರು. ದ್ವಾದಶಾದಿತ್ಯರೂ, ಏಕಾದಶರುದ್ರರೂ, ವಿಶ್ವೇದೇವತೆಗಳೂ, ಅಷ್ಟವಸುಗಳೂ, ಸಪ್ತರ್ಷಿಗಳೂ, ಶೌನಕಾದಿಗಳೂ, ಪಾರ್ವತಿಯನ್ನು ಸ್ತುತಿಸುತ್ತಾ ಬಂದರು. ಶನೈಶ್ವರನೂ ಕೂಡ ಕೈಜೋಡಿಸಿ ಜಯಕಾರ ಮಾಡುತ್ತಾ ಪಾರ್ವತಿಯ ಮುಂದೆ ನಿಂತನು. ಅಪ್ಸರ ಸ್ತ್ರೀಯರು ನರ್ತಿಸಿದರು. ದೇವದುಂದುಭಿಗಳು ಮೊಳಗಿದವು. ಪುಷ್ಪವೃಷ್ಟಿಯಾಯಿತು. ಪಕ್ಕವಾದ್ಯದೊಂದಿಗೆ ಸಂಗೀತವು ದಿಗಂತವನ್ನೂ ವ್ಯಾಪಿಸಿತು. ಮಲಯ ಮಾರುತವು ಹಿತವಾಗಿ ಬೀಸಿತು. ನಂದೀಭೃಂಗೀ ಮೊದಲಾದವರು ಶನಿಯೋಗದಿಂದ ಬಿಡುಗಡೆ ಹೊಂದಿದರು. ಗಂಗೆಯಮುನೆಯರು ಚಾಮರವನ್ನು ಬೀಸಿದರು. ನಿರುತಿಯು ಛತ್ರವನ್ನೂ, ವರುಣನು ದರ್ಪಣವನ್ನೂ ಹಿಡಿದರು. ವರ್ಣಿಸಲಸದಳವಾದ ಸನ್ನಿವೇಶದಲ್ಲಿ ಹರ್ಷಪುಳಕಿತಳಾದ ದೇವಿಯು ಆನಂದಸಾಗರದಲ್ಲಿ ಮುಳುಗಿದವಳಾಗಿ, ಪಂಚಾಮೃತದಂತೆ ಹಿತವಾದ, ಪಂಚ ಚಾಮರ ವೃತ್ತವೆಂಬ ಐದು ಪದ್ಯಗಳಿಂದ, ಪಂಚಭೂತಾತ್ಮಕಸ್ತೋತ್ರವನ್ನು ಹೇಳಿದಳು.

'ಲಗುರ್ಗುರುರ್ನಿರಂತರಂ । ವಿರಾಜಮಾನ ಪಾದಕಂ ॥
ನಾರದಾದಿಯೋಗಿಮುಖ್ಯಮಾನಸಾಂಬುಜಾರುಹಂ ॥
ಗಿರೀಂದ್ರಂ ಮಂದಿರಂ ಸದಾಸಿವಂ ಮುದೇಹಮಾಶ್ರಯೇ ॥1॥

ಗಜೇಂದ್ರಪೀತವಸ್ತ್ರಸತ್ಕ । ತೋತ್ತರೀಯಕಂಫಣೇ ।
ಈಶಪದ್ಮ ಪುಷ್ಪಧಾಮ । ಭಾಸಮಾನಕಂದರಂ ॥ ಲಸಶ್ಚತುಷ್ಟಯಾಬ್ಜಹಸ್ತ
ದಿವ್ಯಶಸ್ತ್ರಮಂಡಿತಂ । ಗಿರೀಂದ್ರ ಮಂದಿರಂ ಸದಾಶಿವಂ ಮುದೇಹಮಾಶ್ರಯೇ'[5] ॥2॥

ಹೀಗೆ ಸ್ತುತಿಸುತ್ತಾ ಪಾರ್ವತಿಯು ಶಿವನನ್ನು ಕಂಡು ಆನಂದತುಂದಿಲಳಾಗಿ ಶಿವನ ಅರ್ಧಶರೀರವನ್ನು ಪಡೆದಳು. ಪಾರ್ವತಿಯ ಮಂಗಳಕರವಾದ ಸ್ತುತಿಯನ್ನು ಕೇಳಿ ಶಿವನು ಹರ್ಷಗೊಂಡವನಾಗಿ ಇಂತೆಂದನು - ಕಲ್ಯಾಣಿಯೇ ನಿನಗೆ ಮಂಗಳವಾಗಲಿ, ನೀನು ಮಾಡಿದ ಮಹಾಪೂಜೆಯಿಂದ ಸಂತುಷ್ಟನಾಗಿದ್ದೇನೆ. ಸಂತುಷ್ಟನಾದ ನಾನು ನಿನಗೆ ವರವೀಯುತ್ತೇನೆ. ನಿನಗಿಷ್ಟವಾದುದನ್ನು ಕೇಳು ಎಂದನು. ದೇವೇಶನೇ ಶಂಕರನೇ ನೀನು ಸಂತುಷ್ಟನಾಗಿದ್ದಲ್ಲಿ ನನ್ನ ಅಪರಾಧಗಳನ್ನು ಕ್ಷಮಿಸು. ನನ್ನಲ್ಲಿ ಯಾವಾಗಲೂ ಬೇಸರಗೊಳ್ಳದೇ ನಿನ್ನ ಸಾನಿಧ್ಯವನ್ನು ನೀಡು, ನಿನ್ನ ಭದ್ರಪೀಠದಲ್ಲಿ ನೆಲೆಗೊಳಿಸು ಇದೇ ಮೊದಲನೆಯ ವರವು. ಎರಡನೆಯ ವರವಾಗಿ ಈ ಕ್ಷೇತ್ರವು ಬ್ರಹ್ಮ , ಶಿವಾತ್ಮಕವಾಗಿರಲಿ. ನಿನ್ನ ಕೃಪೆಯಿಂದ ಇದು ಕಲ್ಯಾಣ ಕ್ಷೇತ್ರವಾಗಲಿ. ವಿಶಾಲವಾದ ಈ ಪೃಥ್ವಿಯಲಿ, ಈ ಕ್ಷೇತ್ರವು ನಿನ್ನ ಅನುಗ್ರಹದಿಂದ ಕಂಗೊಳಿಸಲಿ. ಈ ಗೌರ್ಯಾಶ್ರಮದಲ್ಲಿ ಕಲ್ಯಾಣ ಪರಂಪರೆಯುಂಟಾಗಲಿ, ತ್ರಿಗುಣಾತ್ಮಕ ಕ್ಷೇತ್ರವಾಗಿ ವಿಜೃಂಭಿಸಲಿ ಎಂದು ಕೇಳಿದಳು. ಆಗ ಶಂಕರನು ದೇವಿಯ ಮೇಲೆ ಪ್ರಸನ್ನನಾಗಿ ಪ್ರೀತಿಯಿಂದ ನಗುತ್ತಾ ಇಂತೆಂದನು ನೀನು ಕೇಳಿದ ಎರಡೂ ವರಗಳನ್ನೂ ಕೊಡುವೆನು.

ಎಲೈ ಬ್ರಹ್ಮನೇ ನಿನಗೆ ಮಂಗಳವಾಗಲಿ, ನೀನು ಚತುರ್ಮುಖ ಬ್ರಹ್ಮನೆಂದು ಲೋಕದಲ್ಲಿ ಖ್ಯಾತಿ ಹೊಂದುವೆ. ನಾನು ಪಂಚಮುಖನೆಂದು ಹೆಸರು ಪಡೆಯುವೆ. ನಮ್ಮಲ್ಲಿ ಭೇದವಿಲ್ಲ, ಋಗ್, ಯಜುರ್, ಸಾಮ, ಅಥರ್ವಣಗಳೆಂಬ ನಾಲ್ಕು ವೇದಗಳೂ, ನಿನ್ನ ನಾಲ್ಕು ಮುಖಗಳಿಂದ ಲೋಕದಲ್ಲಿ ಪ್ರಸಿದ್ಧವಾಗಲಿ ಎಂದು ಶಾರದೆಯ ಮುಖವನ್ನು

ನೋಡುತ್ತಾ ಇಂತೆಂದನು .ಸೃಷ್ಟಿ , ಸ್ಥಿತಿ, ಲಯಗಳ ಕಾರಣಭೇದದಿಂದ, ನಿನ್ನನ್ನೇ ಜನರು ವಾಣಿಯೆಂದೂ, ಲಕ್ಷ್ಮಿಯೆಂದೂ, ಕಾಳಿಯೆಂದೂ ಬೇರೆ ಬೇರೆಯಾಗಿ ಭಾವಿಸುವರು. ಎಲ್ಲವೂ ನೀನೇ ಆಗಿರುವೆ ಎಂದನು. ವಿಷ್ಣುವನ್ನು ಕುರಿತು ಹರಿಯೇ ನೀನು ದೇವಿಯನ್ನು ಪರೀಕ್ಷಿಸಲು, ಹುಲಿ, ಸಿಂಹ, ಕೋಳಿಗಳಂತೆ ಕೂಗಿ ಅದ್ಭುತ ಸಾಹಸವನ್ನು ತೋರಿಸಿದೆ. ನಿನ್ನ ಮಾಯೆಯನ್ನು ತಿಳಿಯದೆ ಇವಳು ಅಗ್ನಿ ಪ್ರವೇಶ ಮಾಡಿದಳು. ನೀನು ನನಗಿಷ್ಟವಾದ ಕಾರ್ಯವನ್ನೇ ಮಾಡಿದೆ. ನೀನು ಬಹುಕಾಲ ಶಾರ್ದೂಲ ನರಸಿಂಹನೆಂದೇ ಪ್ರಸಿದ್ಧನಾಗಿರು. ಏಳನೆಯ ರಾಮಾವತಾರದಲ್ಲಿ ಜಿಂಕೆಯು ರೂಪದ ಮಾರೀಚನನ್ನು ಕೊಂದು ಈ ಬ್ರಾಹ್ಮೀನದೀ ತೀರದಲ್ಲಿ, ಅದ್ವೈತ ಲಿಂಗವನ್ನು ಮಹೀಪೀಠದಲ್ಲಿ ಪ್ರತಿಷ್ಠೆ ಮಾಡಿ, ಮಹಾಪೂಜೆಯನ್ನು ಮಾಡುವೆ. ಆ ನಂತರದಲ್ಲಿ ಈ ಕ್ಷೇತ್ರವು ''ಮೃಗವಧೆ '' ಎಂದು ಪ್ರಸಿದ್ಧವಾಗುವುದು ಎಂದು ಹೇಳಿದನು. ಶಿವನು ಪಾರ್ವತಿಯನ್ನು ನೋಡುತ್ತಾ ಶನೈಶ್ವರನನ್ನು ಕುರಿತು, ಎಲೈ ಶನಿಯೇ ಸೂರ್ಯಪುತ್ರನೇ ಪ್ರತೀಕಾರವನ್ನು ಯೋಚಿಸದೇ ಮಹದನರ್ಥವನ್ನುಂಟು ಮಾಡಿದೆ. ಆದರೂ ಶಿವೆಯ ಆಜ್ಞೆಯಿಂದ ಈ ಕೆಲಸ ಮಾಡಿದುದರಿಂದ ಸಂತುಷ್ಟನಾಗಿ ವರವನ್ನೀಯುವೆನು. ನಿನಗೆ ಮಂಗಳವಾಗಲಿ. ಲೋಕಜೇತಾರನಾಗಿರು. ಎಲ್ಲರೂ ನಿನ್ನನ್ನು ಪೂಜಿಸಲಿ. ನಿನ್ನ ಕೀರ್ತಿಯು ಹರಡಲಿ. ಜ್ಯೋತಿಶ್ಯಾಸ್ತ್ರವಿಶಾರದರು ನಿನ್ನನ್ನು ಪ್ರಾರ್ಥಿಸಲಿ. ನಿನ್ನ ರೂಪವು ದೃಗ್ಗೋಚರವಾಗಲಿ. ಸಮಸ್ತಗ್ರಹಗಳೂ, ನದಿ, ಸಮುದ್ರಗಳೂ, ದೇವತೆಗಳೂ ನಿನಗೆ ಮಂಗಳವನ್ನುಂಟು ಮಾಡಲಿ. ಅಷ್ಟದಿಕ್ಪಾಲಕರೂ ನಿನಗೆ ಮಂಗಳವನ್ನುಂಟು ಮಾಡಲಿ. ಭೂಮಿಯಲ್ಲಿ ಈ ಪವಿತ್ರ ಕಥೆ ಕೇಳಿದವರಿಗೆ ನಿನ್ನ ಭಯವಿಲ್ಲದಿರಲಿ. ಈ ಕ್ಷೇತ್ರಕ್ಕೆ ಬಂದವರಿಗೆ ಸಕಲ ಸಿದ್ಧಿಗಳೂ, ಇಷ್ಟಾರ್ಥವೂ ಸಿದ್ಧಿಸಲಿ ಎಂದು ಹರಸಿ ಪಾರ್ವತಿಯೊಡನೆ ಲಿಂಗದಲ್ಲಿ ಐಕ್ಯನಾದನು. ಈ ಲಿಂಗಕ್ಕೆ '**ಶಂಕರೀಶ್ವರ ಲಿಂಗ** ' ವೆಂದು ಕರೆಯುವರು. ದೇವತೆಗಳೆಲ್ಲರೂ ತೀರ್ಥಗಳಲ್ಲಿ ಮಿಂದು ಶಿವನನ್ನು ಪೂಜಿಸಿ ತಮ್ಮ ಸ್ಥಳಗಳಿಗೆ ತೆರಳಿದರು. ಈ ಕ್ಷೇತ್ರದಲ್ಲಿ ಎಂಟು ಸಿದ್ಧಿಪ್ರದವಾದ ತೀರ್ಥಗಳಿವೆ. ಶಿವಲಿಂಗದ ಪೂರ್ವಕ್ಕೆ 'ಗೌರೀತೀರ್ಥ ', ಆಗ್ನೇಯಕ್ಕೆ 'ಬ್ರಾಹ್ಮೀತೀರ್ಥ' ದಕ್ಷಿಣಕ್ಕೆ 'ವಾರಾಹತೀರ್ಥ', ನೈರುತ್ಯಕ್ಕೆ 'ಅಗಸ್ತ್ಯತೀರ್ಥ ' ಪಶ್ಚಿಮಕ್ಕೆ 'ಲಕ್ಷ್ಮೀ ತೀರ್ಥ ', ವಾಯುವ್ಯಕ್ಕೆ 'ಹೇರಂಭತೀರ್ಥ', ಈಶಾನ್ಯಕ್ಕೆ 'ಕೌಮಾರತೀರ್ಥ ' ಉತ್ತರಕ್ಕೆ 'ವ್ಯಾಸತೀರ್ಥ'ವಿದೆ.

ಈ ಅಷ್ಟತೀರ್ಥಗಳಲ್ಲಿ ಮಿಂದು ಶಿವಲಿಂಗವನ್ನು ಪೂಜಿಸುವವರು ಸಕಲೇಷ್ಟಾರ್ಥವನ್ನು ಪಡೆಯುವರು. ಗೌರಿಯು ತಪಸ್ಸು ಮಾಡಿದ ಈ ಸ್ಥಳವು ಮೂರು ಲೋಕಗಳಲ್ಲಿಯೂ, ದುರ್ಲಭವೆನಿಸಿ 'ಗೌರ್ಯಾಶ್ರಮ'ವೆಂದು ಗೌಪ್ಯವಾಗಿರುವುದು. ರಾಮಾವತಾರದಲ್ಲಿ ಮಾರೀಚನ ಹೃದಯಲ್ಲಿದ್ದ ಈ ಲಿಂಗವನ್ನು ಶ್ರೀರಾಮನು ಪೂಜಿಸಿದನು. ಮೃಗವನ್ನು ಸಂಹರಿಸಿ ಅದರ ಹೃದಯ ಲಿಂಗವನ್ನು ಸ್ಥಾಪಿಸಿದ್ದರಿಂದ 'ಮೃಗವಧಪುರ 'ವೆಂದು ಪ್ರಸಿದ್ಧವಾಗಿದೆ. ಈ ಶಿವಲಿಂಗವನ್ನು 'ಉಮಾ ಸಹಿತ ಮಲಹಾನಿಕರೇಶ್ವರ ' ಎಂದು ಕರೆಯುವರು.


ಇದು ಕ್ಷೇತ್ರಗಳಲೆಲ್ಲಾ ಅತಿಶ್ರೇಷ್ಠವಾದ್ದರಿಂದ, ಇಲ್ಲಿಗೆ ಪ್ರತಿದಿನವೂ, ಬ್ರಹ್ಮ, ಇಂದ್ರ, ಚಂದ್ರ, ವಾಯು, ರಾಕ್ಷಸರೂ, ಯಕ್ಷರು, ದೇವರ್ಷಿಗಳೂ, ಸೂರ್ಯ, ವಾಸುಕಿ, ವಿಶ್ವಕಮರರೂ ಆಗಮಿಸಿ ಶಿವಲಿಂಗವನ್ನು ಪೂಜಿಸುವರು ಎಂಬ ಪ್ರತೀತಿಯಿದೆ.

'ಮೃಗವಧೆ ' ನಿಷ್ಪತ್ತಿಯ ಐತಿಹ್ಯ :


ತ್ರೇತಾಯುಗದಲ್ಲಿ ದಶರಥಪುತ್ರನಾದ ಶ್ರೀರಾಮನು ತಂದೆಯ ಆಜ್ಞೆಯಂತೆ ಸೀತಾಲಕ್ಷ್ಮಣರೊಡಗೂಡಿ ವನವಾಸಕ್ಕೆ ತೆರಳುತ್ತಾನೆ. ದಕ್ಷಿಣ ದಿಕ್ಕಿಗೆ ಬಂದ ಶ್ರೀರಾಮನು ತುಂಗಾಭದ್ರಾ ತೀರದಲ್ಲಿ ಪರ್ಣಕುಟಿಯನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾನೆ. ಆ ಪ್ರದೇಶದಲ್ಲಿ ವಾಸಿಸುವ ಅನೇಕ ಋಷಿಗಳಿಗೆ ತೊಂದರೆ ಕೊಡುತ್ತಿದ್ದ ರಾಕ್ಷಸರನ್ನು ಸಂಹರಿಸುತ್ತಾನೆ. ಲಂಕಾಧಿಪತಿಯಾದ ರಾವಣನ ಅನೇಕ ಅನುಯಾಯಿ ರಾಕ್ಷಸರೂ ಶ್ರೀರಾಮನಿಂದ ವಧಿಸಲ್ಪಡುತ್ತಾರೆ. ಹೇಗಾದರೂ ಶ್ರೀರಾಮನನ್ನು ಎದುರಿಸಬೇಕೆಂದು ಸಂಕಲ್ಪಿಸಿದ ರಾವಣನಿಗೆ, ಅವನ ದೂತರಿಂದ ಸೀತೆಯ ಸೌಂದರ್ಯಾತಿಶಯವು ತಿಳಿದು ಬರುತ್ತದೆ. ಅವಳನ್ನು ಹೇಗಾದರೂ ಪಡೆಯಬೇಕೆಂಬ ದುರಾಸೆಯಿಂದ ರಾವಣನು ಉಪಾಯವನ್ನು ಹುಡುಕುತ್ತಾನೆ. ಆಗ ಅತ್ಯಂತ ಶಿವಕ್ತನಾದ ತನ್ನ ಸೋದರಮಾವನಾದ ಮಾರೀಚನು ಕಣ್ಣಿಗೆ ಬೀಳುತ್ತಾನೆ. ರಾವಣನು ಮಾರೀಚನಿಗೆ ಸೀತೆಯಿಂದ ರಾಮನನ್ನು ದೂರವಾಗಿಸುವಂತೆ ಮಾಡಲು ಆಜ್ಞಾಪಿಸುತ್ತಾನೆ. ರಾಜಾಜ್ಞೆಯನ್ನು ಮೀರಲಾಗದ ಮಾರೀಚನು ತನ್ನ ಕರಸ್ಥಲದಲ್ಲಿದ್ದ ಶಿವಲಿಂಗವನ್ನು ಹೃದಯದಲ್ಲಿಟ್ಟುಕೊಂಡು ಮಾಯಾಜಿಂಕೆಯ ರೂಪವನ್ನು ತಾಳಿ ರಾಮಾಶ್ರಮದ ಮುಂದೆ ಮೋಹಕವಾಗಿ ಸುಳಿದಾಡುತ್ತಾನೆ. ಆಗ ಸೀತೆಯು ಈ ಮಾಯಾಜಾಲವನ್ನರಿಯದೆ, ಆ ಮೃಗದ

ಅಂದಚಂದಗಳನ್ನು ನೋಡಿ ಮೋಹಗೊಳ್ಳುತ್ತಾಳೆ. ಆಗ ಅವಳು ಶ್ರೀರಾಮನೊಡನೆ ಆ ಮುದ್ದು ಜಿಂಕೆಯನ್ನು ನೋಡು ಪ್ರಿಯಾ. ಅದರ ಬಣ್ಣವನ್ನು ನೋಡು. ಅದರ ಕಣ್ಣುಗಳನ್ನು ನೋಡು. ಅದರ ಸುಳಿಗೊರಳನ್ನು ನೋಡು. ಆಹಾ ? ಎಷ್ಟು ಮುದ್ದಾಗಿದೆ. ನನಗೆ ಅದನ್ನು ಹಿಡಿದುಕೊಡು ಎನ್ನುತ್ತಾಳೆ.

ಆಗ ಶ್ರೀರಾಮನಿಗೆ ಮಾಯಾವಿಗಳಾದ ರಾಕ್ಷಸರ ನೆನಪಾಗಿ ಇದೂ ಅವರದೇ ಮಾಯೆಯಿರಬೇಕು ಎನ್ನಿಸಿ, ಸೀತೆಗೆ ಪರಿಪರಿಯಾಗಿ ಅದು ಬೇಡವೆಂಬುದಾಗಿ ತಿಳಿಸುತ್ತಾನೆ. ಆಗ ಸೀತೆಯು ಕೋಪಿಸಿಕೊಳ್ಳುತ್ತಾಳೆ. ರಾಮನಿಗಾದರೋ ಇಂಥ ಮುದ್ದು ಪತ್ನಿಯನ್ನು ಕಾಡಿಗೆ ಕರೆತಂದೆನಲ್ಲಾ ಎಂದು ಮನದಲ್ಲಿ ವ್ಯಥಿಸಿ, ಇಚ್ಛೆಯಿಲ್ಲದಿದ್ದರೂ, ಲಕ್ಷ್ಮಣನನ್ನು ಕಾವಲಿಗೆ ನಿಯಮಿಸಿ ತನ್ನ ಬಿಲ್ಲು ಬಾಣಗಳೊಡನೆ ಹೊರಡುತ್ತಾನೆ. ಮಾಯಾಜಿಂಕೆಯಾದ ರಾಮನನ್ನು ಆಟವಾಡಿಸುತ್ತಾ ಬಹುಯೋಜನಗಳವರೆಗೆ ಕೊಂಡೊಯ್ಯುತ್ತದೆ. ಹಾಗೆ ಮಾಯಾಜಿಂಕೆಯನ್ನು ಬೆನ್ನಟ್ಟಿದ ರಾಮನು ತನ್ನ ಬಿಲ್ಲಿನಿಂದ ಅದನ್ನು ಸಂಹರಿಸುತ್ತಾನೆ. ಹಾಗೆ ಪ್ರಾಣಬಿಡುವಾಗ ಜಿಂಕೆಯು ಹಾ ಸೀತಾ ಓ ಲಕ್ಷ್ಮಣಾ ಎಂದು ಕೂಗುತ್ತದೆ. ಅದನ್ನು ಸಂಹರಿಸಿದ ರಾಮನು, ಜಿಂಕೆಯ ಹೃದಯದಿಂದ ಹೊರಬಿದ್ದ ಶಿವಲಿಂಗವನ್ನು ತೆಗೆದುಕೊಳ್ಳುತ್ತಾನೆ. ಹಾಗೆ ನೋಡ್ತಿದಾಗ ಸುತ್ತಲಿನ ವನರಾಜಿಯೂ, ಜುಳಜುಳನೆ ಹರಿಯುತ್ತಿರುವ ಬ್ರಾಹ್ಮೀನದಿಯೂ ಕಂಡು ಬರುತ್ತದೆ. ಆಗ ಶ್ರೀರಾಮನು ಬ್ರಾಹ್ಮೀಜಲದಲ್ಲಿ ಮಿಂದು, ನದಿಯ ಮೇಲ್ಭಾಗದಲ್ಲಿ ತನ್ನಲ್ಲಿದ್ದ ಸುಂದರವಾದ ಅದ್ವೈತ ಲಿಂಗವನ್ನು ಭೂಮಿಯ ಮೇಲೆಯೇ ಪ್ರತಿಷ್ಠಾಪಿಸಿ ಪೂಜಿಸುತ್ತಾನೆ. ಹೀಗೆ ಮಹಾಪೂಜೆಯನ್ನು ಮಾಡಿದ ಶ್ರೀರಾಮನು ಮಂಗಳಾರತಿಯನ್ನು ಎತ್ತಿ ಕೆಳಗಿಡುವ ಸಮಯಕ್ಕೆ , ಲಕ್ಷ್ಮಣನು ಅಲ್ಲಿಗೆ ಬರುತ್ತಾನೆ. ಓ ಲಕ್ಷ್ಮಣಾ ಎಂದು ರಾಮನು ಗಾಬರಿಯಾಗುತ್ತಾನೆ. ಆಗ ಲಕ್ಷ್ಮಣನು ಅಣ್ಣಾ ಹಾ ಸೀತಾ ಓ ಲಕ್ಷ್ಮಣಾ ಎಂಬ ಕೂಗು ಕೇಳಲು ಸೀತೆಯು ಗಾಬರಿಯಿಂದ ರಾಮನು ಆಪತ್ತಿನಲ್ಲಿದ್ದಾನೆ, ನೀನು ಹೋಗು ಎಂದು ಬಲವಂತ ಮಾಡಿದ್ದರಿಂದ ನಾನು ಬರಬೇಕಾಯಿತು ಎನ್ನುತ್ತಾನೆ. ನಂತರ ಅವರು ಸೀತೆಯನ್ನು ಹುಡುಕಿಕೊಂಡು ಹೋಗುತ್ತಾರೆ. ಮಾರೀಚ ವಧೆಯಾದ ಸ್ಥಳ ಮೃಗವಧೆಗೂ, ತೀರ್ಥಹಳ್ಳಿ ಪ್ರದೇಶದ ಇನ್ನೊಂದು ಪೌರಾಣಿಕ ಹಿನ್ನೆಲೆಯುಳ್ಳ ಕ್ಷೇತ್ರ ಮಂಡಗದ್ದೆಗೂ ಸಂಬಂಧವಿದೆ. ಮಾಂಡವ್ಯ ಋಷಿ ಆಶ್ರಮ ಪ್ರದೇಶದಿಂದ ಶ್ರೀರಾಮನು ಕಾಲಿನ



ಶ್ರೀಕ್ಷೇತ್ರ ಮೃಗವಧೆ.




ಶ್ರೀ ಶನೈಶ್ವರ, ಮೃಗವಧೆ.

ಮುಂಡಿಯೂರಿ ಮಾಯಾಜಿಂಕೆಗೆ ಗುರಿಯಿಟ್ಟು ಹೊಡೆದಿದ್ದನು. ಆದ್ದರಿಂದಲೇ ಆ ಪ್ರದೇಶಕ್ಕೆ ಮುಂಡಿಯೂರಿದ ಗದ್ದೆ ,ಈಗ 'ಮಂಡಗದ್ದೆ 'ಯಾಗಿ ಹೆಸರು ಪಡೆದಿದೆ ಎಂದು ಸ್ಥಳೀಯರು ಹೇಳುತ್ತಾರೆ. ಹೀಗೆ ಮಾರೀಚಮೃಗವನ್ನು ವಧೆ ಮಾಡಿದ್ದರಿಂದ ''ಮೃಗವಧೆ '' ಎಂದು ಹೆಸರಾಗಿದೆ. ಶ್ರೀರಾಮನು ಪ್ರತಿಷ್ಠೆ ಮಾಡಿದ ಈ ಲಿಂಗವು 'ಶ್ರೀ ಉಮಾಸಹಿತ ಮಲಹಾನಿಕರೇಶ್ವರ ' ಎಂದು ಪ್ರಸಿದ್ಧಿಯಾಗಿದೆ.


'ಸಿಬ್ಬಲಗುಡ್ಡೆ'ಯ ಧಾರ್ಮಿಕ ಐತಿಹ್ಯಗಳು :

ಸಿಬ್ಬಲಗುಡ್ಡೆ ತೀರ್ಥಹಳ್ಳಿ ನಗರದಿಂದ ಏಳು ಕಿ.ಮೀ. ಸಾಗಿದರೆ ಮೇಳಿಗೆ ಗ್ರಾಮ ವ್ಯಾಪ್ತಿಯಲ್ಲಿ ಬರುವ ಒಂದು ಪ್ರಸಿದ್ಧ ಕ್ಷೇತ್ರ. ಪ್ರಕೃತಿಯ ಮಡಿಲಲ್ಲಿ ಶ್ರೀಸಿದ್ಧಿವಿನಾಯಕ ದೇವಾಲಯವಿದೆ. ತುಂಗಾ ನದಿಯ ತೀರದಲ್ಲಿ ಸ್ಥಾಪಿತಗೊಂಡಿರುವ ಇಲ್ಲಿಯ ಶ್ರೀಸಿದ್ಧಿವಿನಾಯಕ ಉದ್ಭವಮೂರ್ತಿಯಾಗಿ ಈ ಸ್ಥಳ ಒಂದು ಕಾರಣಿಕ ಕ್ಷೇತ್ರವಾಗಲು ಕಾರಣವಾಗಿದೆ. ಯತಿವರೇಣ್ಯ ಶ್ರೀಸಿದ್ದೇಶ್ವರ ಸ್ವಾಮಿಯ ತಪೋಭೂಮಿಯಾಗಿದ್ದ ಈ ಸ್ಥಳದಲ್ಲಿ ಒಮ್ಮೆ ಸಿದ್ಧಿವಿನಾಯಕನ ಉದ್ಭವಮೂರ್ತಿಯನ್ನು ಗುರುತಿಸಿದರು. ಅತೀವ ದೈವಭಕ್ತರಾದಂತಹ ಶ್ರೀಸಿದ್ದೇಶ್ವರ ಸ್ವಾಮಿ ಅದಕ್ಕೆ ಗುಡಿ ಕಟ್ಟಿಸಿ ಅದನ್ನು ಆರಾಧಿಸತೊಡಗಿದರು ಎಂದು ವಕ್ತೃ ಈ ದೇವಾಲಯದ ಅರ್ಚಕರಾಗಿರುವ ಶ್ರೀ ಎ.ಎಸ್.ಭಾಸ್ಕರ ಭಟ್ ಸಿಬ್ಬಲಗುಡ್ಡೆ ಇಲ್ಲಿಯ ದೇವರ ಸ್ಥಾಪನೆಯಾದ ಐತಿಹ್ಯವನ್ನು ಹೇಳುತ್ತಾರೆ.

ತುಂಗಾ ನದಿಯ ತೀರದಲ್ಲಿರುವ ಈ ದೇವಾಲಯ ಪ್ರಸಿದ್ಧವಾಗಲು ಈಗಲೂ ನಂಬಿಕೊಂಡಿರುವ ಒಂದು ಐತಿಹ್ಯ ಹೀಗಿದೆ. ರೋಗರುಜಿನಗಳು ಗುಣವಾಗುವುದಕ್ಕೆ ಸಂಬಂಧಿಸಿದ ಈ ಐತಿಹ್ಯ ಅಸಾಧಾರಣವಾದ ವಿವರಗಳನ್ನು ನೀಡುತ್ತದೆ. ಸಿದ್ಧಿವಿನಾಯಕ ದೇವಾಲಯದ ಸನಿಹದಲ್ಲೇ ಇರುವ ತುಂಗಾ ನದಿಯಲ್ಲಿ ಸಾವಿರಾರು ಮೀನುಗಳು ನಿರಾತಂಕವಾಗಿ ನೆಲೆಸಿವೆ. ಇವನ್ನು 'ದೇವರಮೀನು' ಎಂದು ಕರೆಯುವ ಭಕ್ತಸಮೂಹ ಈ ಮೀನಿಗೆ ಅಕ್ಕಿ , ಮಂಡಕ್ಕಿಯನ್ನು ಆಹಾರವಾಗಿ ಒಪ್ಪಿಸುವ ಮೂಲಕ ತಮ್ಮ ಹರಕೆ ತೀರಿಸಿಕೊಳ್ಳುತ್ತಿದ್ದಾರೆ. ಮನುಷ್ಯನಿಗೆ ಸಹಜವಾಗಿ ಬರುವ ಚರ್ಮರೋಗಗಳಾದ ಬಿಳಿಚಿಬ್ಬೆ, ಚಿಮುಕುಲು (ಚರ್ಮದ ಮೇಲೇಳುವ ನಿರ್ಜೀವ ಗುಳ್ಳೆ), ತೊನ್ನು, ಹುಳುಕಡ್ಡಿ ಮೊದಲಾದ ಖಾಯಿಲೆಗಳು ಉಂಟಾದಾಗ ಚಿಬ್ಬಲಗುಡ್ಡೆಯ ದೇವಸ್ಥಾನದ



ಶ್ರೀಸಿದ್ಧಿವಿನಾಯಕ ದೇವಾಲಯ, ಸಿಬ್ಬಲಗುಡ್ಡೆ



ಸಿಬ್ಬಲಗುಡ್ಡೆಯ ಶ್ರೀ ಸಿದ್ಧಿ ವಿನಾಯಕನ ಉದ್ಭವಮೂರ್ತಿ.

[illegible]

[illegible]

[illegible]

[illegible]

[illegible]

'ದೇವರಮೀನು'ಗಳಿಗೆ ಅಕ್ಕಿ , ಮಂಡಕ್ಕಿ ಒಪ್ಪಿಸುತ್ತೇನೆಂದು ಹರಕೆ ಹೊತ್ತರೆ ಅವರಿಗಾದ ಚರ್ಮರೋಗಗಳು ಗುಣಮುಖವಾಗುತ್ತವೆಂಬ ನಂಬಿಕೆ ಈಗಲೂ ಪ್ರಸಿದ್ಧ ಐತಿಹ್ಯವಾಗಿದೆ. ಮನುಷ್ಯನಿಗಾಗುವ ಬಿಳಿಚಿಬ್ಬೆ ನಿವಾರಣೆಯಾಗುವ ಈ ಸ್ಥಳ ಮಹಾತ್ಮೆಯ ಕಾರಣದಿಂದಲೇ ಈ ಸ್ಥಳಕ್ಕೆ **ಚಿಬ್ಬಲಗುಡ್ಡೆ** ಎಂತಲೂ ಕರೆಯುವುದುಂಟು.

'ದೇವರಮೀನು'ಗಳೆಂದೂ ಕರೆಯಲ್ಪಡುತ್ತಿರುವ ಈ ದೇವಾಲಯದ ತೀರದ ನದಿಯಲ್ಲಿ ನಿರಾತಂಕವಾಗಿ ಈಜಾಡಿಕೊಂಡಿರುವ ಈ ಮೀನುಗಳಿಗೆ ಅಕ್ಕಿ, ಮಂಡಕ್ಕಿ ಒಪ್ಪಿಸುವುದಕ್ಕೂ, ಮನುಷ್ಯರ ಚರ್ಮರೋಗ ನಿವಾರಣೆಯಾಗುವುದಕ್ಕೂ ಸಂಬಂಧವಿದೆ ಎಂಬ ಐತಿಹ್ಯ ನಿರಾಧಾರವೆಂದೆನಿಸುತ್ತದೆ. ಹರಕೆ ಹೊತ್ತವರಿಗೆ ಆಕಸ್ಮಿಕವಾಗಿ ರೋಗ ಗುಣಮುಖವಾದರೆ ಅದು ಕಾಕತಾಳೀಯವಷ್ಟೆ. ಏಕೆಂದರೆ ಧಾರ್ಮಿಕ ಭಾವನೆಗಳ ಹಿನ್ನೆಲೆಯಲ್ಲಿ ಇದೊಂದು ನಂಬಿಕೆಯಷ್ಟೆ. ಹರಕೆ ಹೇಳಿಕೊಂಡವರು ತಮ್ಮ ಇಷ್ಟಾರ್ಥ ಈಡೇರಿದ್ದರೂ ವಾಸ್ತವ ಕಾರಣ ವೈದ್ಯಕೀಯ ಚಿಕಿತ್ಸೆ ನಡೆಸಿದ್ದರೆಂಬುದನ್ನು ಅಲ್ಲಗಳೆಯಲಾರರು. ಅಂದರೆ ಪ್ರಸ್ತುತ ಈ ಸಿಬ್ಬಲಗುಡ್ಡೆ ಮೀನಿಗೆ ಅಕ್ಕಿ ಹಾಕುವುದರಿಂದಲೇ ಚರ್ಮರೋಗ ನಿವಾರಣೆಯಾಗುತ್ತದೆ ಎಂದು ಸಾಬೀತುಪಡಿಸುವ ಸಾಕ್ಷ್ಯಾಧಾರ ನಿಖರವಾಗಿ ದೊರೆಯುವುದಿಲ್ಲ. ಆದ್ದರಿಂದ ಇದೊಂದು ಈ ಸ್ಥಳಕ್ಕಿರುವ ನಂಬಿಕೆಯಷ್ಟೆ ಎಂದು ನನಗನ್ನಿಸುತ್ತದೆ.

ಆರಗ ಪ್ರಾಂತ್ಯದ ಗುತ್ಯಮ್ಮ ದೇವಿಯ ಸಾಂಸ್ಕೃತಿಕ ಐತಿಹ್ಯ :

ತೀರ್ಥಹಳ್ಳಿಯಿಂದ ಹತ್ತು ಕಿ.ಮೀ. ದೂರದಲ್ಲಿರುವ ಆರಗ ಐತಿಹಾಸಿಕ, ಪುರಾಣ ಪ್ರಸಿದ್ಧ ಗ್ರಾಮ. ಸ್ಥಳೀಯ ಇತಿಹಾಸದ ಪ್ರಕಾರ ಈ ಪ್ರದೇಶ ಐತಿಹಾಸಿಕವಾಗಿ ಕೆಳದಿಯ ಅರಸರು, ವಿಜಯನಗರ ಸಾಮ್ರಾಜ್ಯದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ವೈಷ್ಣವ, ಶೈವಧರ್ಮ ಮತ್ತು ಜೈನ ಧರ್ಮದ ಸಾಂಸ್ಕೃತಿಕ ಕುರುಹುಗಳು ಈ ಗ್ರಾಮದಲ್ಲಿ ವಿಫುಲವಾಗಿ ದೊರೆಯುತ್ತವೆ. ಪ್ರಸಿದ್ಧವಾದ ಕಲಾನಾಥೇಶ್ವರ ದೇವಾಲಯ, ವಿರಕ್ತ ಮಠ, ಕಪಡಗುಡ್ಡದ ಜೈನಬಸದಿ, ಅಗ್ರಹಾರದ ಆಂಜನೇಯ ಸ್ವಾಮಿ ದೇವಸ್ಥಾನ, ಈಶ್ವರ ದೇವಸ್ಥಾನ, ಅಗಳಬಾಗಿಲಿನ ಗುತ್ತಿಯಮ್ಮ ದೇವಾಲಯ ಈ ಮೇಲಿನ ಅಂಶಗಳನ್ನು ಪುಷ್ಠೀಕರಿಸುತ್ತವೆ.

ಐತಿಹ್ಯಗಳಿಗೆ ಸಂಬಂಧಿಸಿದಂತೆ ಮಹಾಭಾರತದಲ್ಲಿ ಬರುವ ವಾರಣಾವತದ **ಲಾಕ್ಷಾಗೃಹ** ಇದೇ ಊರಿನಲ್ಲಿತ್ತು. ದುರ್ಯೋಧನ ಪಾಂಡವರನ್ನು ಅರಗಿನಮನೆಯಲ್ಲಿ ಭಸ್ಮ ಮಾಡುವ ಕುತಂತ್ರ ಮಾಡಿ ನಿರ್ಮಿಸಿದ ಲಾಕ್ಷಾಗೃಹ ಈ ಆರಗದಲ್ಲಿಯೇ ಇತ್ತು ಎಂದು ವಕ್ತೃ ಶ್ರೀ ಅಣ್ಣಪ್ಪ ನಾಯ್ಕ ಕುಂಬಾರಗೇರಿ (80) ಹೇಳುತ್ತಾರೆ. ಆದರೆ, ಈ ಐತಿಹ್ಯಕ್ಕೆ ಯಾವುದೇ ಕುರುಹುಗಳು ದೊರಕುವುದಿಲ್ಲ. ಆದರೆ, 'ಅರಗಿನಮನೆ' (ಅರಗು) ಅಂದರೆ ಮೇಣದ ಮನೆ, ಆ ಹೆಸರೇ ಈ ಊರಿಗೆ ಆರಗ ಎಂಬ ಹೆಸರಾಗಿದೆ ಎಂದು ಸ್ಥಳ ಸಂಬಂಧಿ ಐತಿಹ್ಯ ಹೇಳುತ್ತದೆ.

ಅಗಳಬಾಗಿಲಿನ ಶ್ರೀ ಗುತ್ಯಮ್ಮದೇವಿ ದೇವಸ್ಥಾನದ ಜಾನಪದ ಐತಿಹ್ಯ :

ಆರಗ ಸೀಮೆಯ ಕುಲದೇವತೆ ಶ್ರೀ ಗುತ್ಯಮ್ಮ. ಗುತ್ಯಮ್ಮನ ಬಗೆಗೆ ಇರುವ ಐತಿಹ್ಯ ಸ್ವಾರಸ್ಯಕರವಾದುದು. ಅಗ್ರಹಾರದ ಹಿರೇಕೆರೆ ಎಂದು ಈಗಲೂ ಕರೆಯಲ್ಪಡುತ್ತಿರುವ ಈ ಕೆರೆಯ ದಡದಲ್ಲಿ **ಮುಂಡುಗ** (ನೀರಿನಲ್ಲೇ ಬೆಳೆಯುವ ಮುಳ್ಳು ದಿಂಡಿನ ದಪ್ಪ ಗಿಡಗಳು) ಬೆಳೆದಿತ್ತು. ದನ ಕಾಯುವ ಗೋಪಾಲಕ ದನಕರುಗಳನ್ನು ಯಾವಾಗಲೂ ಅಲ್ಲಿ ಮೇಯಿಸುತ್ತಿದ್ದನು. ಆದರೆ ಒಂದು ಹಸು ಗೋಪಾಲಕನ ಕಣ್ತಪ್ಪಿಸಿ ದಿನಾಲೂ ಮುಂಡುಗದ ಪೊದೆಯಲ್ಲಿರುವ ಹುತ್ತಕ್ಕೆ ಹಾಲನ್ನು ಕರೆಯುತ್ತಿತ್ತು. ಆದರೆ ಆ ಹಸು ದಿನವೂ ಬರಿಯ ಕೆಚ್ಚಲಿನಲ್ಲಿ ಬರುತ್ತಿದ್ದನ್ನು ನೋಡಿ ಅದರ ಒಡೆಯ ಗೋಪಾಲಕನಿಗೆ ಗದರಿಸಿದ. ಚಿಂತಿತನಾದ ಗೋಪಾಲಕ ಇದಕ್ಕೆ ಕಾರಣವನ್ನು ಹುಡುಕಲು ಮಾರನೇ ದಿವಸ ಹಸುವನ್ನು ಹಿಂಬಾಲಿಸಿದನು. ಹಸು ಹುತ್ತಕ್ಕೆ ಹಾಲು ಕರೆಯುತ್ತಿದ್ದನ್ನು ಕಂಡು ಚಕಿತನಾಗಿ ತನ್ನ ಒಡೆಯನಿಗೆ ವಿಷಯ ತಿಳಿಸಿದನು. ಒಡೆಯ ಆ ಹುತ್ತವನ್ನು ಪರಿಶೀಲಿಸಿ ಅಲ್ಲಿ ಶ್ರೀದೇವಿ ನೆಲೆಸಿದ್ದಳೆಂದೂ, ಆ ಸ್ಥಳದಲ್ಲಿ ಗುಡಿ ಕಟ್ಟಿಸಿದನು. ಹುತ್ತದಲ್ಲಿ ಕಾಣಿಸಿದ ದೇವಿಗೆ **ಹುತ್ತದ ಅಮ್ಮ** ಎಂಬ ಹೆಸರಿನಿಂದಲೇ ಆರಾಧಿಸತೊಡಗಿದನು. ಜನರ ಬಾಯಿಂದ ಬಾಯಿಗೆ ಹುತ್ತದ ಅಮ್ಮ ಬದಲಾಗಿ ಗುತ್ತದ ಅಮ್ಮ -ಗುತ್ಯಮ್ಮ ಎಂದು ಈಗಲೂ ಪ್ರಸಿದ್ಧ ಕ್ಷೇತ್ರವಾಗಿದೆ. ಇದು ಆರಗ ಸೀಮೆ ದೇವತೆಯಾಗಿದ್ದು ಒಂದು ಅದ್ಭುತ ಕಾರಣಿಕ ಕ್ಷೇತ್ರವಾಗಿದೆ. ಮದುವೆಯಾಗದ ಹೆಣ್ಣು ಮಕ್ಕಳು, ಮಕ್ಕಳಾಗದ ದಂಪತಿಗಳು ಗುತ್ಯಮ್ಮನಿಗೆ ಹರಕೆ ಹೊತ್ತು ಶ್ರೀದೇವಿಯನ್ನು ಆರಾಧಿಸುತ್ತಿದ್ದಾರೆ.


ಅರುಣಗಿರಿ ಶ್ರೀ ವೆಂಕಟರಮಣ ದೇವಸ್ಥಾನದ ಉಗಮದ ಪೌರಾಣಿಕ ಐತಿಹ್ಯ :

ಆರಗದಿಂದ ಮೂರು ಕಿ.ಮೀ. ದೂರದ ಬೆಟ್ಟದ ಮೇಲೆ ಇರುವ ಕ್ಷೇತ್ರ ಶ್ರೀ ವೆಂಕಟರಮಣ ದೇವಸ್ಥಾನ. **ಅರುಣಗಿರಿ-ಅಣ್ಣಯ್ಯನ ಗುಡ್ಡ -ಅಣ್ಣನ ಗುಡ್ಡ -ಹಣ್ಣೆಗುಡ್ಡ** ಎಂಬ ಹೆಸರಿನಿಂದ ಕರೆಯಲ್ಪಡುತ್ತಿರುವ ಈ ಕ್ಷೇತ್ರಕ್ಕೆ 'ಭೂವೈಕುಂಠ'ವೆಂದೂ ಕರೆಯುತ್ತಾರೆ. ಪುರಾಣದ ಶ್ರೀನಿವಾಸ ಕಲ್ಯಾಣದ ಸಂದರ್ಭದ ಕಥೆ ಇಂದಿಗೂ ಐತಿಹ್ಯವಾಗಿ ಉಳಿದಿದೆ. ಶೇಷಾಚಲವಾಸ ತಿರುಪತಿ ವೆಂಕಟೇಶ್ವರ ಸ್ವಾಮಿಯ ಇನ್ನೊಂದು ರೂಪ ಶ್ರೀವೆಂಕಟರಮಣ ಸ್ವಾಮಿ. ಹಿರಿಯಣ್ಣನಾಗಿ ಈ ಗುಡ್ಡದಲ್ಲಿ ನೆಲೆಸಿದ್ದು ಸರ್ವರಿಗೂ ಸನ್ಮಂಗಳವನ್ನು ನೀಡುತ್ತಿದ್ದಾನೆ ಎಂಬುದು ಈ ಸ್ಥಳದ ಐತಿಹ್ಯ.

ತ್ರಿಮೂರ್ತಿಗಳಲ್ಲಿ ಸತ್ವಗುಣ ಸಂಪನ್ನನಾದ ಭಗವಾನ್ ಮಹಾವಿಷ್ಣು ಶ್ರೀಲಕ್ಷ್ಮೀ ಸಮೇತ ಶ್ರೀ ವೆಂಕಟಾರಮಣ ಸ್ವಾಮಿ ರೂಪದಲ್ಲಿ ಈ ಸ್ಥಳದಲ್ಲಿ ನೆಲೆಸಿರುವುದರಿಂದ ಈ ಪ್ರದೇಶ ಸುಖ, ಸಮೃದ್ಧಿಯಿಂದ ಕೂಡಿತ್ತು. ಪ್ರಸ್ತುತ ಆ ವೈಭವ ತಾತ್ಕಾಲಿಕವಾಗಿತ್ತು. ವೆಂಕಟರಮಣ ಸ್ವಾಮಿ ತನ್ನ ತಮ್ಮನ ಸಹಾಯಕ್ಕೆ ತಿರುಪತಿಗೆ ಹೋಗಿದ್ದೇ ಕಾರಣವೆಂದು ವಕ್ತೃ ಶ್ರೀ ಮುರುಳೀಧರ ಭಟ್ ಆರಗ ಹೇಳುತ್ತಾರೆ. ಈ ಐತಿಹ್ಯವನ್ನು ನಿರೂಪಿಸುತ್ತಾ ಅರುಣಗಿರಿಯ ಶ್ರೀ ವೆಂಕಟರಮಣ ಸ್ವಾಮಿ ಶೇಷಾಚಲ ವಾಸಿ ತಿರುಪತಿಯ ವೆಂಕಟೇಶ್ವರ ಸ್ವಾಮಿಗೆ ಸಹಾಯ ಮಾಡಲು ತೆರಳಿದ್ದು ಏಕೆಂದರೆ, ತಿರುಪತಿಯ ವೆಂಕಟರಮಣ ಸ್ವಾಮಿ ತನ್ನ ಮದುವೆಯ ಸಂದರ್ಭದಲ್ಲಿ ಸಂಪತ್ತಿನ ಒಡೆಯ ಕುಬೇರನಿಂದ ಅಗಾಧ ಪ್ರಮಾಣದ ಸಂಪತ್ತನ್ನು ಸಾಲವಾಗಿ ಪಡೆದುಕೊಂಡಿದ್ದನು. ಮಾತಿನಂತೆ ಕುಬೇರನಿಗೆ ಸಾಲವನ್ನು ತೀರಿಸಲು ಅಸಮರ್ಥನಾದ ವೆಂಕಟೇಶ ಸ್ವಾಮಿ ತನ್ನ ಅಣ್ಣನ ಸಹಾಯವನ್ನು ಕೇಳಿದನು. ಆಗ ತಮ್ಮನ ಸಹಾಯಕ್ಕೆ ಅರುಣಗಿರಿಯ ಶ್ರೀ ವೆಂಕಟರಮಣ ಸ್ವಾಮಿ ಊರವರಿಗೆ ಗೊತ್ತಾಗದಂತೆ ಅಣ್ಣಯ್ಯನ ರೂಪದ ಒಬ್ಬ ವೃದ್ಧನ ವೇಷ ಧರಿಸಿ ಊರುಗೋಲು ಹಿಡಿದು ಊರವರ ಕಣ್ತಪ್ಪಿಸಿ ಅರುಣಗಿರಿಯಿಂದ ಶೇಷಾಚಲ ಪರ್ವತಕ್ಕೆ ತೆರಳಿದನು. ಆಗ ಹೊರಟ ಅವನ ಪಾದದ ಗುರುತು ಮತ್ತು ಊರುಗೋಲು (ಜಲ್ಲು) ಗುರುತು ಈಗಲೂ ಈ ಬೆಟ್ಟದ ದೇವಸ್ಥಾನದ ಹಿಂಭಾಗದ ಬಂಡೆಯ ಮೇಲಿದೆ ಎಂದು ಕಲ್ಲಿನ ಮೇಲೆ ಪಾದದ ಗುರುತು ಮತ್ತು ಒರಳುಕಲ್ಲಿನ ಗುಂಡಿಯಾಕಾರದಂತೆ ಇರುವ ಬಂಡೆಯ ಮೇಲಿನ ಗುರುತನ್ನು ಈಗಲೂ ಐತಿಹ್ಯಕ್ಕೆ ಪುರಾವೆಯೆಂದು ಸ್ಥಳೀಯರು ತೋರಿಸುತ್ತಾರೆ.

ಈ ಅರುಣಗಿರಿ ಬೆಟ್ಟದಲ್ಲಿ ಶ್ರೀವೆಂಕಟರಮಣ ಸ್ವಾಮಿ ಸ್ಥಾಪನೆಗೊಂಡ ಬಗೆಗೆ ಇನ್ನೊಂದು ಐತಿಹ್ಯ ನನ್ನ ಗಮನ ಸೆಳೆಯಿತು. ಅದೇನೆಂದರೆ ತ್ರಿಮೂರ್ತಿಗಳಲ್ಲಿ ಒಬ್ಬನಾದ ಭಗವಾನ್ ಮಹಾವಿಷ್ಣು ತಿರುಪತಿಯ ಶೇಷಾಚಲದಲ್ಲಿ ಶ್ರೀಲಕ್ಷ್ಮೀಸಹಿತ ನೆಲೆನಿಂತರೂ ಶ್ರೀಸ್ವಾಮಿಯು ತ್ರಿಲೋಕಸಂಚಾರ ಮಾಡುವ ಪದ್ಧತಿಯನ್ನು ಇರಿಸಿಕೊಂಡಿದ್ದನು. ಭೂಲೋಕ ಸಂಚಾರ ಮಾಡುವಾಗ ವೆಂಕಟೇಶ್ವರನು ಮಾನವರಿಗೆ ತನ್ನ ನಿಜ ರೂಪ ತಿಳಿಯದಂತೆ ಒಬ್ಬ ಮುದುಕನ ವೇಷದಲ್ಲಿ ಸಂಚಾರ ಮಾಡುತ್ತಿದ್ದನು. ಹೀಗಿರುವಾಗ ಶ್ರೀ ವೆಂಕಟೇಶ್ವರನು ಆರಗ ಪ್ರಾಂತ್ಯದ **ಕಡೇಗದ್ದೆ** ಪರ್ವತದ ಮೇಲೆ ಆಕಾಶಮಾರ್ಗವಾಗಿ ಬಂದಿಳಿದನು. ಆದರೆ ಶ್ರೀಸ್ವಾಮಿಯ ಭಾರ ತಡೆಯಲಾರದೆ ಕಡೆಗದ್ದೆಯ ಪರ್ವತ ನಡುಗಲಾರಂಭಿಸಿದಾಗ ಕೂಡಲೇ ಶ್ರೀಸ್ವಾಮಿಯು ಆ ಪರ್ವತದಿಂದ ಅರುಣಗಿರಿಗೆ ನೆಗೆದನು. ಅರುಣಗಿರಿ ಶ್ರೀಸ್ವಾಮಿಯ ಭಾರವನ್ನು ತಡೆದುಕೊಂಡಿದ್ದರಿಂದ ವೆಂಕಟೇಶ್ವರನು ಅಲ್ಲಿಯೇ ನೆಲೆಸಿದನು ಎಂದು ವಕ್ತೃ ಶ್ರೀ ಬಿ.ಗಣಪತಿ ಬಾಳಗೋಡು ಹೇಳುತ್ತಾರೆ. ಪ್ರಸ್ತುತ ದೇವಾಲಯದ ಪಕ್ಕದ ಬಂಡೆಯ ಮೇಲಿರುವ ಪಾದದ ಗುರುತು ಮತ್ತು ಊರುಗೋಲು ಊರಿದ ಗುರುತು ಶ್ರೀಸ್ವಾಮಿಯು ಈ ಅರುಣಗಿರಿಗೆ ಬಂದಂತಹ ಕುರುಹುಗಳು ಎಂದು ಸ್ಥಳೀಯರು ಈಗಲೂ ಭಕ್ತಿಯಿಂದ ಆ ಗುರುತುಗಳನ್ನು ಪೂಜಿಸಿ ಆ ಸ್ಥಳದ ಐತಿಹ್ಯವನ್ನು ಹೇಳುತ್ತಾರೆ.

ಈ ಸ್ಥಳಕ್ಕಿರುವ ಎರಡು ಐತಿಹ್ಯಗಳನ್ನು ವಿಶ್ಲೇಷಿಸಿದಾಗ ಒಂದು ಸ್ವಾಮಿಯ ಆಗಮನ, ಇನ್ನೊಂದು ನಿರ್ಗಮನದ ಸಾಕ್ಷಿಯನ್ನು ಒಂದೇ ಗುರುತು ನಿರೂಪಿಸುವುದು ದ್ವಂದ್ವಕ್ಕೆ ಎಡೆ ಮಾಡಿಕೊಡುತ್ತದೆ. ಪಾದದ ಗುರುತು ಮತ್ತು ಊರುಗೋಲಿನ ಗುರುತುಗಳು ವಾಸ್ತವವಾಗಿ ಆ ಸ್ಥಳದ ಬಗೆಗಿರುವ ಐತಿಹ್ಯ ಕೇವಲ ಊಹಾತ್ಮಕವಾದುದು ಎಂಬುದನ್ನು ಸ್ಪಷ್ಟೀಕರಿಸುತ್ತದೆ. ದೇವರ ವಿಗ್ರಹ, ದೇವಾಲಯ, ಆಧುನಿಕ ಶೈಲಿಯ ಮೆಟ್ಟಿಲುಗಳನ್ನು ಗಮನಿಸಿದಾಗ ಐತಿಹಾಸಿಕವಾಗಿ ಕೆಳದಿ ಅರಸರ ಕಾಲದಲ್ಲಿ ಈ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಸ್ಥಳೀಯರು ಈ ಸ್ಥಳವನ್ನು ಪ್ರಸಿದ್ಧಿ ಗೊಳಿಸುವ ಉದ್ದೇಶದಿಂದ ಈ ಬಗೆಯ ಐತಿಹ್ಯಗಳನ್ನು ಸೃಷ್ಟಿಸಿದ್ದಾರೆ. ವೆಂಕಟರಮಣ ಸ್ವಾಮಿ ಅರುಣಗಿರಿಯಿಂದ ಶೇಷಾಚಲಕ್ಕೆ ತೆರಳಿದ ಪಾದದ ಗುರುತು ಮತ್ತು ಊರುಗೋಲಿನ ಗುರುತು ಐತಿಹ್ಯಕ್ಕೆ ಕುರುಹು ಎಂದು ನಂಬಿದರೆ ಅದು ಕೇವಲ ಕಾಕತಾಳೀಯವಷ್ಟೆ ಸ್ಥಳ



ಶ್ರೀ ವೆಂಕಟರಮಣ ಸ್ವಾಮಿ ಊರುಗೋಲು ಊರಿದ ಗುರುತು.



ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ, ಅರುಣಗಿರಿ.


ಮಹಾತ್ಮೆಯನ್ನು ಪ್ರಸಿದ್ಧಿಪಡಿಸಲು ಸ್ಥಳೀಯ ಶಿಲ್ಪಿಯ ಕೈಯಿಂದ ಈ ಗುರುತುಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಶ್ರೀಕ್ಷೇತ್ರ ಅಂಬುತೀರ್ಥದ ರಾಮೇಶ್ವರ ದೇವಸ್ಥಾನ :

ತೀರ್ಥಹಳ್ಳಿಯಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿರುವ ನೊಣಬೂರು ಗ್ರಾಮದಲ್ಲಿರುವ ಅಂಬುತೀರ್ಥದ ಬಗೆಗೆ ಇರುವ ಪುರಾಣದ ರಾಮಾಯಣದ ಕಾಲದ ಸಂದರ್ಭದ ಐತಿಹ್ಯ ಸ್ವಾರಸ್ಯಕರವಾದುದು. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಜೀವನದಿಗಳಲ್ಲೊಂದಾದ ಶರಾವತಿ ನದಿಯ ಉಗಮ ಸ್ಥಳ ಅಂಬುತೀರ್ಥ ಸ್ಥಳ ಸಂಬಂಧಿ ಐತಿಹ್ಯಕ್ಕಾಗಿ ಪ್ರಾಮುಖ್ಯತೆ ಪಡೆದಿದೆ. ಅಂಬುತೀರ್ಥಕ್ಕೆ ಆ ಹೆಸರು ಬರಲು ಇದ್ದ ವಾಸ್ತವ ಕಾರಣವನ್ನು ವಿವರಿಸುವ ಐತಿಹ್ಯವೊಂದು ಹೀಗಿದೆ. ತ್ರೇತಾಯುಗದ ಶ್ರೀರಾಮಚಂದ್ರ ಸೀತಾ ಸಮೇತ ಲಕ್ಷ್ಮಣನೊಂದಿಗೆ ಪಿತೃವಾಕ್ಯ ಪರಿಪಾಲನೆಗಾಗಿ ಹದಿನಾಲ್ಕು ವರ್ಷ ವನವಾಸ ಕೈಗೊಳ್ಳಬೇಕಾಗುತ್ತದೆ. ಆ ವನವಾಸದ ಸಂದರ್ಭದಲ್ಲಿ ಶ್ರೀರಾಮ ಕೆಲಕಾಲ ದಂಡಕಾರಣ್ಯದಲ್ಲಿ ನೆಲೆಸಿದ್ದನು ಎಂಬ ಉಲ್ಲೇಖ ವಾಲ್ಮೀಕಿ ರಾಮಾಯಣದ ಅರಣ್ಯ ಖಾಂಡ (ಶ್ಲೋಕ 360)ದಲ್ಲಿದೆ. ದಂಡಕಾರಣ್ಯದಲ್ಲಿ ನೆಲೆಸಿದ್ದ ಆ ಸಮಯದಲ್ಲಿ ಶ್ರೀರಾಮ ದುಷ್ಟ ಮೃಗಗಳನ್ನು ಬೇಟೆಯಾಡುತ್ತಿದ್ದಾಗ ಸೂರ್ಯಾಸ್ತದ ಸಮಯವಾಯಿತು. ಕತ್ತಲಾಗುವ ಮುನ್ನ ಸಂಧ್ಯಾವಂದನೆ ಮಾಡಲು ಬಯಸಿದ ಶ್ರೀರಾಮನಿಗೆ ಅಲ್ಲೆಲ್ಲಿಯೂ ನೀರು ದೊರಕದಿರುವಾಗ ಆ ಸ್ಥಳದಲ್ಲೇ ತನ್ನ ಕೋದಂಡದಿಂದ ದಿವ್ಯಾಸ್ತ್ರವನ್ನು ನೆಲಕ್ಕೆ ಹೊಡೆದು ಪಾತಾಳ ಗಂಗೆಯನ್ನು ಚಿಮ್ಮಿಸಿದ. ಆ ನೀರು ಚಿಮ್ಮಲು ಶ್ರೀರಾಮನ ದಿವ್ಯ ಅಂಬು (ಬಾಣ) ಕಾರಣವಾಯಿತು ಹಾಗೂ ರಾಮ ಚಿಮ್ಮಿಸಿದ ಆ ನೀರು ಪುಣ್ಯತೀರ್ಥವಾಯಿತು. ಅಂದರೆ ಅಂಬುವಿನಿಂದ ಉದ್ಭವಿಸಿದ ತೀರ್ಥ ಅಂಬುತೀರ್ಥ ಎಂದು, ಆ ಸ್ಥಳ **ಅಂಬುತೀರ್ಥ** ಎಂಬ ಹೆಸರಿನಿಂದ ಶ್ರೀರಾಮ ಕರೆದನು. ಮುಂದೆ ಈ ತೀರ್ಥ ಶರಾವತಿ ನದಿಯಾಗಿ ಹರಿದು ಸಾಗರ ತಾಲ್ಲೂಕಿನ ಜೋಗ ಜಲಪಾತವಾಗಿ ಜಗತ್ಪ್ರಸಿದ್ಧವಾಗಿದೆ. ಅಂಬುವಿನಿಂದ ಚಿಮ್ಮಿದ ತೀರ್ಥ ಅಂಬುತೀರ್ಥವಾದಂತೆಯೇ, **ಶರಾವತಿ** ಅಂದರೆ ಶರ(ಬಾಣ)ದಿಂದ ಉದ್ಭವಿಸಿದವಳು ಶರಾವತಿಯಾದಳು. ಅದರ ಸ್ಥಳ ಮಹಾತ್ಮೆಯನ್ನು ಹೆಚ್ಚಿಸುವುದಕ್ಕೋಸ್ಕರ ಆ ಸ್ಥಳದಲ್ಲಿ ಶಿವಲಿಂಗವೊಂದನ್ನು ಸ್ಥಾಪಿಸಿದನು. ರಾಮ ಸ್ಥಾಪಿಸಿದ ಶಿವಲಿಂಗ ಶ್ರೀರಾಮೇಶ್ವರ ಕ್ಷೇತ್ರ ಎಂದು ಈಗಲೂ ಕಾರಣಿಕ



ಅಂಬುತೀರ್ಥದ ಶ್ರೀ ರಾಮೇಶ್ವರ ದೇವಾಲಯ.



ಶ್ರೀ ರಾಮೇಶ್ವರ ಲಿಂಗ, ಅಂಬುತೀರ್ಥ.

ಕ್ಷೇತ್ರವಾಗಿದೆ.

ಅಂಬುತೀರ್ಥಕ್ಕೆ ಸಂಬಂಧಿಸಿದ ಇನ್ನೊಂದು ಐತಿಹ್ಯ ಬೇರೆ ಕಥೆಯನ್ನು ನಿರೂಪಿಸುತ್ತದೆ. ಅದೇನೆಂದರೆ, ಶ್ರೀರಾಮನೊಡನೆ ವನವಾಸಕ್ಕೆ ಬಂದಿದ್ದ ಸೀತಾದೇವಿ ಆಯಾಸದಿಂದ ಬಳಲಿ ನೀರನ್ನು ಕೇಳಿದಳು. ಆ ಪ್ರದೇಶದಲ್ಲೆಲ್ಲೂ ನೀರಿನ ಸುಳಿವು ಕಾಣದ ಶ್ರೀರಾಮ ತನ್ನ ಅದ್ಭುತ ಶಕ್ತಿಯಿಂದ ಅಂಬುವನ್ನು ಭೂಗರ್ಭಕ್ಕೆ ಹೊಡೆದು ಪಾತಾಳದಿಂದ ಗಂಗೆಯನ್ನು ಚಿಮ್ಮಿಸಿ ಸೀತಾದೇವಿಯ ಬಾಯಾರಿಕೆಯನ್ನು ನೀಗಿಸಿದನು. ಆಯಾಸ ಪರಿಹಾರಕ್ಕಾಗಿ ಶ್ರೀರಾಮನ ಅಂಬುವಿನಿಂದ ಉದ್ಭವಗೊಂಡ ಪುಣ್ಯ ತೀರ್ಥ ಅಂಬುತೀರ್ಥ ವಾಯಿತು. ಈ ಸ್ಥಳದಲ್ಲಿ ಶ್ರೀರಾಮ ರಾಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನು ಎಂದು ಇನ್ನೊಂದು ಐತಿಹ್ಯವನ್ನು ಸ್ಥಳೀಯ ವಕ್ತೃ ಶ್ರೀರಾಮ ಜೋಯಿಸ್ ಹೇಳುತ್ತಾರೆ.

ವಾಸ್ತವದಲ್ಲಿ ಪಶ್ಚಿಮ ಘಟ್ಟದ ತಪ್ಪಲಿನ ಪ್ರದೇಶವಾದ ಈ ಸ್ಥಳ ಸಹಜವಾಗಿಯೇ ನೀರಿನ ಸೆಲೆಯನ್ನು ಹೊಂದಿದೆ. ಅಗಾಧವಾದ ಬೆಟ್ಟಗುಡ್ಡಗಳ ಅರಣ್ಯ ಪ್ರದೇಶ. ಎತ್ತರದ ಬೆಟ್ಟ ಗುಡ್ಡಗಳ ತಪ್ಪಲಿನಲ್ಲಿ ಪ್ರಾಕೃತಿಕವಾಗಿಯೇ ನೀರಿನ ಚಿಲುಮೆ ಚಿಮ್ಮುವುದು ಸರ್ವೇಸಾಮಾನ್ಯ. ಪ್ರಾಕೃತಿಕ ಕಾರಣದಿಂದಲೇ ನಿರ್ಮಾಣವಾಗಿರಬಹುದಾದ ಈ ಶರಾವತಿ ನದಿಯ ಉಗಮ ಸ್ಥಾನ. ಅಂಬುತೀರ್ಥಕ್ಕೆ ಸ್ಥಳ ಮಹಾತ್ಮೆಯನ್ನು ಪ್ರಚಾರಗೊಳಿಸುವುದ ಕ್ಕೋಸ್ಕರವೇ ಪುರಾಣದ ಶ್ರೀರಾಮನ ಹೆಸರಿನ ಐತಿಹ್ಯವನ್ನು ಸೇರಿಸಿದ್ದಾರೆ ಎಂಬುದು ನನ್ನ ಅಭಿಪ್ರಾಯ.

ಬಿಲ್ಲೇಶ್ವರದ ಶ್ರೀ ಈಶ್ವರ ದೇವಾಲಯ :

ಅಂಬುತೀರ್ಥಕ್ಕಿರುವ ಐತಿಹ್ಯದ ರೂಪದಲ್ಲೇ ಬಿಲ್ಲೇಶ್ವರದ ಐತಿಹ್ಯವೂ ಕೂಡ ಸಮಾನಾಂತರ ಸಂಗತಿಗಳನ್ನೇ ಒಳಗೊಂಡಿದೆ. ಅಂಬುತೀರ್ಥದಿಂದ ಏಳು ಕಿ.ಮೀ. ದೂರದಲ್ಲಿರುವ ಜೈನರ ಪ್ರಸಿದ್ಧ ಯಾತ್ರಾ ಸ್ಥಳ ಹುಂಚದ ಸಮೀಪದ ಕುಮುದ್ವತಿ ನದಿಯ ತೀರದಲ್ಲಿರುವ ಸ್ಥಳ ಬಿಲ್ಲೇಶ್ವರ. ರಾಮಾಯಣ ಕಾಲದ ಸಂಗತಿಯೊಡನೆ ಈ ಐತಿಹ್ಯವೂ ಕೂಡ ಬೆಳಕು ಚೆಲ್ಲುತ್ತದೆ. ದಂಡಕಾರಣ್ಯದಲ್ಲಿ ವಾಸವಾಗಿದ್ದ ಶ್ರೀರಾಮ, ಲಕ್ಷ್ಮಣ, ಸೀತಾದೇವಿಯವರು ಶಿವಪೂಜೆಗೆಂದು ಶಿವಲಿಂಗ ನಿರ್ಮಿಸಿದರು. ಶಿವಲಿಂಗವನ್ನು ಲಕ್ಷ್ಮಣನೆ ನಿರ್ಮಿಸಿದನೆಂದೂ, ಸದಾಕಾಲ ಶಿವಪೂಜೆಗೆ ಪುಷ್ಪಗಳನ್ನು ಒದಗಿಸುವುದಕ್ಕೋಸ್ಕರ ಶಿವಲಿಂಗದ ಪಕ್ಕದಲ್ಲಿ ಸುಂದರವಾದ ಕೊಳವನ್ನು ನಿರ್ಮಿಸಿ ಅದರಲ್ಲಿ ಪ್ರತಿನಿತ್ಯ

ದೊರೆಯುತ್ತಿದ್ದ 'ಅಂಬುಜ'(ತಾವರೆ)ಗಳನ್ನು ಬಳಸುತ್ತಿದ್ದರು. ಎಲ್ಲಾ ಕಾಲವೂ ದೊರೆಯುತ್ತಿದ್ದ ಆ ಕೊಳಕ್ಕೆ ಅಂಬುಜ ಕ್ಷೇತ್ರ ಎಂದು ನಾಮಕರಣ ಮಾಡಿದರು. ಅಂಬುಜ - ಹೊಂಬುಜ - **ಹುಂಚ** ಎಂಬ ಹೆಸರಿನಿಂದ ಪ್ರಸ್ತುತ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದೆ.

ಕಳ್ಳರಮನೆ -ಕನಕಪುರ ಮಂಜರವಳ್ಳಿ ದೇವಸ್ಥಾನದ ಐತಿಹ್ಯ :

ತೀರ್ಥಹಳ್ಳಿಯಿಂದ ಇಪ್ಪತ್ತೈದು ಕಿ.ಮೀ. ದೂರವಿರುವ ಅರೆಹಳ್ಳಿ ಗ್ರಾಮದ ಕಳ್ಳರ ಮನೆ ಮಂಜರವಳ್ಳಿ (ಪಂಜರವಳ್ಳಿ) ಶಕ್ತಿದೇವತೆ ಸ್ಥಳ ಗ್ರಾಮದೈವದ ಐತಿಹ್ಯದ ಸಂಶೋಧನೆಯಲ್ಲಿ ವಿಶೇಷವಾಗಿ ನನ್ನ ಗಮನ ಸೆಳೆದಿದೆ.

ಈ ದೇವಸ್ಥಾನದ ಸ್ಥಾಪನೆಗೆ ಕಾರಣವಾದ ಕಳ್ಳರ ಮನೆಗಿಂತ ಮೊದಲ ಹೆಸರು ''ದಂಡಿನ ಮನೆ '' ಇಲ್ಲಿ ಹಿಂದೆ ರಾಜಮನೆತನದವರು ಈ ಊರಿನ ಮೇಲೆ ದಂಡೆತ್ತಿ ಬಂದು ದವಸಧಾನ್ಯ, ನಗನಾಣ್ಯಗಳನ್ನು ದೋಚಿಕೊಂಡು ಹೋಗುತ್ತಿದ್ದಂತೆ, ಆ ಕಾಲದ ದಂಡಿನ ಮನೆಯವರು ಕತ್ತಿ, ಗುರಾಣಿ, ಈಟಿಗಳನ್ನು ಹಿಡಿದು ಹೋರಾಡಿ ತಮ್ಮ ಸಂಪತ್ತನ್ನು ಉಳಿಸಿಕೊಳ್ಳುತ್ತಿದ್ದರಂತೆ. ಇದನ್ನು ರಕ್ಷಿಸಲು ಕಲ್ಲಿನ ಬಾವಿಯನ್ನು ಕೊರೆದು ಅದರಲ್ಲಿ ಸಂಪತ್ತನ್ನು ಮುಚ್ಚಿಟ್ಟು ಎದುರಾಳಿಗಳು ಬಂದು ಹೋದ ನಂತರ ತೆಗೆದು ಜೀವನ ನಡೆಸುತ್ತಿದ್ದರು. ಈಗಲೂ ಕಲ್ಲು ಬಾವಿ ಅದರ ಕುರುಹು ಹಾಗೇ ಇದೆ. ಕೆಲವೊಮ್ಮೆ ದವಸ-ಧಾನ್ಯಗಳನ್ನು ಕಣದಲ್ಲಿ ಒಕ್ಕಣಿಕೆ ಮಾಡುವಾಗಲೂ ಸಹ ಒಮ್ಮೊಮ್ಮೆ ಧಾಳಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಇಲ್ಲಿಯ ದಂಡಿನಮನೆಯವರು ಕೆರೆದಂಡೆಯ ಮೇಲೆ ಸ್ಥಾಪನೆಯಾಗಿರುವ 'ಚಗಳಿಯಬ್ರಹ್ಮ 'ನಿಗೆ ನಮ್ಮ ಸ್ವತ್ತು ಉಳಿಸಿಕೊಡು ಎಂದು ಪ್ರಾರ್ಥಿಸಿ ಕೊಂಡಾಗ ಕಣದಲ್ಲಿರುವ ದವಸ ಧಾನ್ಯಗಳೆಲ್ಲವೂ ಚಗಳಿ ಇರುವೆ ರಾಶಿಯಾಗಿ ಕಾಣುತ್ತಿತ್ತಂತೆ. ಆಗ ಅವರು (ಕೊಳ್ಳೆ ಹೊಡೆಯುವರು) ಬರಿಗೈಲಿ ವಾಪಾಸಾಗುತ್ತಿದ್ದರು ಎಂದು ಪ್ರತೀತಿ ಇದೆ. ಇಂತಹ ಮನೆತನದ ಸತ್ಯಿಕೆಗೆ ಒಂದು ಕರಾಳ ಕಪ್ಪು ಚುಕ್ಕೆ ಆವರಿಸಿತಂತೆ ಈ ದಂಡಿನ ಮನೆಯೇ ಕಳ್ಳರಮನೆ, ದಿ.ನಾಗಪ್ಪ ಗೌಡರಮನೆ. ಇವರ ಮುತ್ತಜ್ಜನ ಕಾಲದಲ್ಲಿ ಒಬ್ಬ ಕನ್ನಡ ಜಿಲ್ಲೆಯ ಮೆಣಪ ಪೂಜಾರಿ ಎಂಬುವವರು ಇವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಇದ್ದರಂತೆ. ಹಿಂದೆ ಕೂಲಿ ಮಾಡಿದವರಿಗೆ

ಸಂಬಳವಾಗಿ ಬಂಗಾರದ ನಾಣ್ಯಗಳನ್ನು ಕೊಡುತ್ತಿದ್ದರಂತೆ. ಆ ಕಾಲದಲ್ಲಿ ಮೆಣಪಪೂಜಾರಿಯವರು ಕಾಲ್ನಡಿಗೆಯಲ್ಲಿ ಆಗುಂಬೆ ಘಾಟಿಯನ್ನು ಇಳಿದು ಹೋಗುತ್ತಿದ್ದರಂತೆ. ಮಾರ್ಗದ ಮಧ್ಯೆ ಕಳ್ಳ -ಕಾಕರು ಪಾದಚಾರಿಗಳನ್ನು ತಡೆದು ಅವರಲ್ಲಿರುವ ಸಂಪತ್ತನ್ನು ಲೂಟಿ ಮಾಡುತ್ತಿದ್ದರು. ಒಮ್ಮೆ ಪೂಜಾರಿಯವರು ಊರಿಗೆ ಹೋಗಬೇಕಾದ ಸಂದರ್ಭ ಬಂದಾಗ ತನ್ನ ಸಂಪತ್ತು ಉಳಿಯಲೆಂದು ದಂಡಿನಮನೆಯವರ ಹತ್ತಿರ ವಾಟೆಹುಳಿ ಮಧ್ಯದಲ್ಲಿ ಬಂಗಾರದ ನಾಣ್ಯಗಳನ್ನು ಇಟ್ಟು ಬುತ್ತಿ (ಗಂಟು) ಕಟ್ಟಿ , ಇದು ವಾಟೆಯ ಹುಳಿ, ಇದನ್ನು ನಿಮ್ಮಲ್ಲಿರಿಸಿಕೊಳ್ಳಿ, ನಾನು ಊರಿಗೆ ಹೋಗಿ ಬಂದ ನಂತರ ತೆಗೆದುಕೊಳ್ಳುತ್ತೇನೆಂದು ಹೇಳಿ ಕೊಟ್ಟು ಊರಿಗೆ ಹೋದನು. ಅದನ್ನು ಎತ್ತಿಕೊಂಡ ಮನೆಯ ಯಜಮಾನ ಇದು ಬರೀ ಹುಳಿಯಲ್ಲ . ಇದರಲ್ಲಿ ಏನೋ ತೂಕವಾದ ವಸ್ತು ಇದೆ ಎಂದು ಅದನ್ನು ಒಳಗೆ ತೆಗೆದುಕೊಂಡು ಹೋಗಿ ಬಿಚ್ಚಿ ನೋಡುವಾಗ ಅದರಲ್ಲಿ ಬಂಗಾರದ ನಾಣ್ಯಗಳಿದ್ದುದು ಕಂಡುಬಂತು. ಆಗ ಅವರು ನಾಣ್ಯವನ್ನೆಲ್ಲ ತೆಗೆದು ಅದಕ್ಕೆ ಇನ್ನಷ್ಟು ವಾಟೆ ಹುಳಿ ಸೇರಿಸಿ ತೆಗೆದಿಟ್ಟರು. ನಂತರ ಮೆಣಪಪೂಜಾರಿಯವರು ವಾಪಾಸು ಬಂದು ನಾನು ಕೊಟ್ಟ ಹುಳಿಯ ಗಂಟನ್ನು ವಾಪಾಸು ಕೇಳಿದಾಗ ಕೊಟ್ಟರಂತೆ. ಅವರು ಅದನ್ನು ತೆಗೆದು ಬಿಚ್ಚಿ ನೋಡಿದಾಗ ಬಂಗಾರದ ನಾಣ್ಯಗಳಿರಲಿಲ್ಲ. ದಿಗ್ಭ್ರಮೆಗೊಂಡ ಪೂಜಾರಿಯವರು ನಾನು ಇದರೊಳಗೆ ಬಂಗಾರದ ನಾಣ್ಯಗಳನ್ನು ಇಟ್ಟಿದ್ದೆ ನೀವು ತೆಗೆದುಕೊಂಡಿದ್ದೀರಿ ಕೊಡಿ ಎಂದು ಅಂಗಲಾಚಿ ಬೇಡಿದಾಗ ನೀನು ಕೊಡಲಿಲ್ಲ , ಕೊಟ್ಟಿದ್ದು ಬರೀ ಹುಳಿಗಂಟು ಎಂದು ಕೊಡಲು ನಿರಾಕರಿಸಿದರು.

ಸ್ವತ್ತು ಕಳೆದುಕೊಂಡ ಮೆಣಪ ಪೂಜಾರರು ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿಯಲ್ಲಿ ದೂರು ಕೊಡುತ್ತಾರೆ. ಈ ದೂರಿನ ಸತ್ಯಾ -ಅಸತ್ಯವನ್ನು ತೀರ್ಮಾನಿಸಿಕೊಂಡು ಬಾ ಎಂದು ಸ್ವಾಮಿಯ ಪ್ರತಿನಿಧಿ ಹೆಗಡೆಯವರು ಅಲ್ಲಿಂದ ಕೆಂಪಾನು ಪಂಜರವಳ್ಳಿ ಎಂಬ ಭೂತವನ್ನು ಕಳುಹಿಸಿಕೊಟ್ಟರಂತೆ.

ಆಗ ಆ ದೇವರು ಸತ್ಯ ಪರೀಕ್ಷೆಗೆ ಬರುವಾಗ ಭಾರಿ ಮಳೆಗಾಲ. ನದಿ ದಾಟಿ ಬರಲು ಆಗದೆ ಸಮಯ ಕಾಯುತ್ತಿರುವಾಗ ಒಂದು ಬಂಗಾರದ ಕುಡಿಬಾಳೆಎಲೆ **ಬಾಗಿಹಳ್ಳ**ದಲ್ಲಿ ತೇಲಿಕೊಂಡು ಹೋಗುವಾಗ ಅದರ ಮೇಲೆ ಕುಳಿತು ನದಿ ದಾಟಿ ಬಂದು ಈ ದಂಡಿನಮನೆಯವರ ಮೇಲೆ ತನ್ನ ಪ್ರಭಾವವನ್ನು ಬೀರಿತಂತೆ. ಆದರೂ ಅವರು ಜಗ್ಗದೆ

ಹೋದಾಗ ಹದಿನೈದು ದಿನಕ್ಕೊಬ್ಬರಂತೆ ಅವರ ಮನೆಯಲ್ಲಿ ಮರಣ ಹೊಂದುತ್ತಿದ್ದರಂತೆ. ಕೊನೆ ಘಳಿಗೆಯಲ್ಲಿ ಜ್ಯೋತಿಷ್ಯರನ್ನು ಕೇಳಿದಾಗ ನಿಮ್ಮ ಮನೆಮಂದಿಯೆಲ್ಲ ಶ್ರೀ ಸ್ಥಳದ 'ಹುಯಿಲು' ಪೆಟ್ಟಿನಿಂದ ಸಾಯುತ್ತಿದ್ದಾರೆ. ನೀವು ಕೂಡಲೇ ಇದನ್ನು ಇತ್ಯರ್ಥ ಮಾಡಿಕೊಳ್ಳಹೋದರೆ ನಿಮ್ಮ ವಂಶ ನಿರ್ನಾಮವಾಗುತ್ತದೆ ಎಂದು ತಿಳಿಸಿದರು. ಆಗ ಎಚ್ಚೆತ್ತುಕೊಂಡ ಕುಟುಂಬದವರು ಹೋಗಿ ಎಷ್ಟು ಹುಡುಕಿದರೂ ದೂರು ಕೊಟ್ಟ ಆಸಾಮಿ ಸಿಗಲಿಲ್ಲವಂತೆ. ಕೊನೆಗೆ ಇವರು ತಪ್ಪೊಪ್ಪಿ ತೆಗೆದ ಬಂಗಾರದ ನಾಣ್ಯಗಳನ್ನು ಶ್ರೀಸ್ವಾಮಿಯ ಸನ್ನಿಧಿಗೆ ಅರ್ಪಿಸಿ ನಮ್ಮ ಊರಿನ ಸತ್ಯ -ಅಸತ್ಯವನ್ನು ಪರಿಹರಿಸಲು ಹಾಗೂ ನಮ್ಮ ರಕ್ಷಣೆಗೆ ಈ ಸ್ವಾಮಿಯನ್ನು (ಪಂಜರವಳ್ಳಿ) ನಾವೇ ಊರಿನಲ್ಲಿ ನೆಲೆಸಿಕೊಳ್ಳುತ್ತೇವೆ ಎಂದು ಸ್ಥಳದ ಅಪ್ಪಣೆ ಪಡೆದು ಇದನ್ನು ಅರೆಹಳ್ಳಿ ಮತ್ತು ಚಾವಲ್ಮನೆ ಗ್ರಾಮದ ಮಧ್ಯದ ಅರೆಮನೆ ಎಂಬಲ್ಲಿ ಸ್ಥಾಪಿಸಿಕೊಂಡರಂತೆ. ಈ ತಪ್ಪಿನಿಂದ ಆ ಮನೆಗೆ ಕಳ್ಳರಮನೆ ಎಂದು, ಆ ಮನೆಯಿರುವ ಊರನ್ನು **ಕಳ್ಳರಮನೆ** ಎಂಬ ಹೆಸರಿನಿಂದ ಕರೆಯುತ್ತಿದ್ದಾರೆ. ಈ ಮನೆತನದವರೇ ಈಗಲೂ ಈ ಕ್ಷೇತ್ರದ ವಹಿವಾಟುದಾರರಾಗಿರುತ್ತಾರೆ. ಈಗಲೂ ಸತ್ಯ -ಅಸತ್ಯದ ಬಗ್ಗೆ ಶ್ರೀ ಪಂಜರುಳ್ಳಿಯಲ್ಲಿ ಪ್ರಾರ್ಥಿಸಿಕೊಂಡರೆ ನ್ಯಾಯ -ಅನ್ಯಾಯ ಇತ್ಯರ್ಥವಾಗುತ್ತದೆ ಎಂಬ ನಂಬಿಕೆ ಸ್ಥಳೀಯರದು ಎಂದು ವಕ್ತೃ ಎಸ್.ಜಿ.ಚೂಡಣ್ಣ ಗೌಡ ಕಳ್ಳರಮನೆ ಹೇಳುತ್ತಾರೆ.

ಏಕನಾಥಿ ಗೋಪಾಲಕೃಷ್ಣ ದೇವಸ್ಥಾನ ನಡಬೂರು ಸಾಂಸ್ಕೃತಿಕ ಮತ್ತು ಧಾರ್ಮಿಕ ಐತಿಹ್ಯ :

ತೀರ್ಥಹಳ್ಳಿ ತಾಲ್ಲೂಕಿನ ಅರೆಹಳ್ಳಿ ಗ್ರಾಮದ ನಡಬೂರಿನ ಏಕನಾತಿ ಗೋಪಾಲಕೃಷ್ಣ ದೇವಾಲಯದ ಸ್ಥಾಪನೆಯ ಹಿಂದಿರುವ ಐತಿಹ್ಯ ಕುತೂಹಲಕಾರಿಯಾದುದು. ಸುಮಾರು 12ನೇ ಶತಮಾನದ ನಾಥ ಪಂಥದವರು ಸ್ಥಾಪಿಸಿದ 'ವಿಷ್ಣುಮೂರ್ತಿ ಶ್ರೀದೇವಿ ಭೂದೇವಿ'ಯ ಸುಮಾರು 5 ಅಡಿ ಸುಂದರ ವಿಗ್ರಹವಿದೆ. 'ಸಂತಾನ ಗೋಪಾಲಕೃಷ್ಣ ವನದುರ್ಗಾಂಬಿಕಾ ' ಎಂದು ಕರೆಯಿಸಿಕೊಳ್ಳುವ ಈ ದೇವಸ್ಥಾನಕ್ಕೆ ರಂಜನೀಯ ಐತಿಹ್ಯವಿದೆ. ಮುಂದೆ ವೈಷ್ಣವರು ಈ ದೇವರನ್ನು ಪೂಜಿಸಿದರೆಂದೂ ಸಪ್ತ ಮಾತೃಕೆಯರಲ್ಲಿ ಒಂದಾದ ಇವಳನ್ನು ವೈಷ್ಣವಿ ಎಂದೂ ಕರೆದರೆಂದೂ ಪ್ರತೀತಿ ಇದೆ. ದೇವಸ್ಥಾನದ ಒಳಗೆ ಸುಂದರವಾಗಿ ಕೆತ್ತಿರುವ 'ಜಯ ವಿಜಯರಿದ್ದಾರೆ '. ಹಾಗೆ ದ್ವಾರ ಬಾಗಿಲ ಅಕ್ಕಪಕ್ಕ ಆಂಜನೇಯ ಗರುಡ ವಿಗ್ರಹಗಳನ್ನೂ ಕೆತ್ತಲಾಗಿದೆ. ಹೊರಗೆ ಆನೆ ಸುಂದರ ಸ್ತ್ರೀಯರ

ಹಾಗೂ ಮೀನುಗಳ ಚಿತ್ರವಿದೆ. ಒಂದು ಕಾಲದಲ್ಲಿ ವೈಷ್ಣವ ಪಂಥದ ಹಿನ್ನೆಲೆಯಲ್ಲಿ ಸ್ಥಾಪಿತಗೊಂಡಂತಹ ಈ ದೇವಾಲಯವು ಕಾಲಾಂತರದಲ್ಲಿ ಶೈವ ಪಂಥದ ಹಿನ್ನೆಲೆಗೆ ಬದಲಾವಣೆಗೊಂಡಿದ್ದು ಗೋಚರಿಸುತ್ತದೆ.

ಪೂರ್ವಕಾಲದಲ್ಲಿ ಮನುಷ್ಯನು ನಾಗಗಳ ಭಯದಿಂದ ತತ್ತರಿಸಿ ಹೋಗಲು ಬ್ರಹ್ಮನು ದೇವಿಯ ಮೊರೆ ಹೋಗುತ್ತಾನೆ. ದೇವಿಯ ಆಜ್ಞೆಯಂತೆ ಕಶ್ಯಪ ಋಷಿಗಳ ಮನಸ್ಸಿನಿಂದ ಜನಿಸಿದ ಶಿಶುವಿಗೆ 'ಮಾನಸದೇವಿ ' ಎಂದು ನಾಮಕರಣ ಮಾಡುತ್ತಾರೆ. ಮುಂದೆ ಮಾನಸ ಶಿವ ಹಾಗೂ ವಿಷ್ಣುವಿನ ಕುರಿತು ತಪಸ್ಸು ಮಾಡುತ್ತಾಳೆ. ಶಿವನನ್ನು ಸಾಕ್ಷಾತ್ಕರಿಸಿ ಕೊಂಡು 'ಶಿವೆ ' ಆದಳು. ವಿಷ್ಣುವನ್ನು ಸಾಕ್ಷತ್ಕರಿಸಿಕೊಂಡು 'ವೈಷ್ಣವಿ ಆದಳು ದೇವಾನು ದೇವತೆಗಳಿಂದ ಪೂಜಿಸಲ್ಪಟ್ಟ ಈಕೆ ಪೂಜ್ಯಳೆನಿಸಿದಳು. ಮುಂದೆ ವೈಷ್ಣವಿಯು 'ಆಸ್ತೀಕ'ನಿಕೆ ಜನ್ಮ ನೀಡುತ್ತಾಳೆ. ರಾಮ ಕ್ಷೇತ್ರವಾದ ದಂಡಕಾರಣ್ಯದಲ್ಲಿ ರಾಕ್ಷಸರ ಹಾವಳಿಯು ವಿಪರೀತವಾದಾಗ 'ಅಂಬಿಕೆಯು - ದುರ್ಗಿ ಅವತಾರವೆತ್ತಿ ರಾಕ್ಷಸರನ್ನು ಸಂಹರಿಸಿ ಲೋಕಲ್ಯಾಣವನ್ನು ಮಾಡುತ್ತಾಳೆ. 'ವನದುರ್ಗಾಂಬಿಕೆ ' ಎಂದು ಪ್ರಸಿದ್ಧಿ ಪಡೆಯುತ್ತಾಳೆ. ಇಲ್ಲಿ 'ರಕ್ತೇಶ್ವರಿ ' ಅಧಿದೇವತೆಯಾಗಿದ್ದು 'ನಾಗ ಮತ್ತು ಯಕ್ಷ ಬನವಿದೆ'. ಇಲ್ಲಿ ರಾತ್ರಿ ವಿಶೇಷ ಪೂಜೆ ದೀಪಾರಾಧನೆ ಇರುತ್ತದೆ.

ಈಗಲೂ ಕೂಡ ಮಕ್ಕಳಾಗದ ದಂಪತಿಗಳು ಏಕನಾಥಿ ಗೋಪಾಲಕೃಷ್ಣನಿಗೆ ಹರಕೆ ಹೊರುವುದುಂಟು. ಹರಕೆ ಒಪ್ಪಿಸುವ ವಿಧಾನವೂ ಕೂಡ ಕುತೂಹಲಕಾರಿಯಾದುದು. ಕರು ಹಾಕಿದ ಹಸುವಿನ ಹಾಲನ್ನು ಮನೆಯವರು ಉಪಯೋಗಿಸುವುದಕ್ಕೆ ಮೊದಲು ಶ್ರೀಸ್ವಾಮಿಗೆ ಅಭಿಷೇಕ ಮಾಡಿಸುವುದು, ಹೊಂಬಾಳೆ ಸಹಿತದ ಬಾಳೇಹಣ್ಣಿನ ಕೊನೆಯ ನೈವೇದ್ಯ, ಹಸು ಮತ್ತು ಕರುವಿನ ದಾನ ಮೊದಲಾದ ರೀತಿಯಲ್ಲಿ ಹರಕೆಯುನ್ನು ಹೊತ್ತುಕೊಂಡು ತಮ್ಮ ಇಷ್ಟಾರ್ಥದ ಬೇಡಿಕೆಗಾಗಿ ಆರಾಧಿಸುತ್ತಾರೆ. ಕಾಕತಾಳೀಯವೆಂಬಂತೆ ಸ್ಥಳೀಯ ವಕ್ತೃ ಶ್ರೀಪಾದ ಭಟ್ ನಡಬೂರು ಭಕ್ತರ ಬೇಡಿಕೆಗಳು ಈಡೇರಿದ ಉದಾಹರಣೆಗಳಿವೆ ಎಂದು ಹೇಳುತ್ತಾರೆ.

ನಡಬೂರು ಬ್ರಹ್ಮಲಿಂಗೇಶ್ವರ ದೇವಸ್ಥಾನದ ಪೌರಾಣಿಕ ಐತಿಹ್ಯ :

ತೀರ್ಥಹಳ್ಳಿ ತಾಲ್ಲೂಕಿನ ಅರೆಹಳ್ಳಿ ಗ್ರಾಮದಲ್ಲಿರುವ ನಡಬೂರು ಬ್ರಹ್ಮಲಿಂಗೇಶ್ವರ

ದೇವಸ್ಥಾನ ಭೂತಾಲಯವೆಂದೆ ಪ್ರಸಿದ್ಧಿಯಾಗಿದ್ದು, ಊರಿನ ಮಧ್ಯಭಾಗದಲ್ಲಿದೆ. ಇಲ್ಲಿ ಶ್ರೀ ಬ್ರಹ್ಮಲಿಂಗೇಶ್ವರ -ಕುಪ್ಪನಕೊಡಿಗೆ, ಬ್ರಹ್ಮ -ಸತ್ಯವತಿ ವಿಗ್ರಹವಿದೆ. ಪರಿವಾರ ದೇವತೆಗಳಾದ ಕ್ಷೇತ್ರಪಾಲ -ಜಟ್ಟಿಗ -ರಕ್ತ ಚಾಮುಂಡಿ - ಬೇತಾಳ, ಮೂರು ಗದಾಚೌಡಿ ವಿಗ್ರಹಗಳಿವೆ. ಇಲ್ಲಿ ಜಾನುವಾರುಗಳಿಗೆ ವಿಶೇಷ ಹರಕೆ ಹೇಳಿಕೊಳ್ಳಲಾಗುತ್ತದೆ. ಸಕಲ ಇಷ್ಟಾರ್ಥಗಳನ್ನು ನೆರವೇರಿಸಲು ಭಕ್ತಾದಿಗಳು ಇಲ್ಲಿ 'ದೀಪಾರಾಧನೆ ' 'ಯಕ್ಷಗಾನ ಬಯಲಾಟ' 'ರುದ್ರಾಭಿಷೇಕ ' ಬ್ರಾಹ್ಮಣರಿಗೆ 'ಬ್ರಹ್ಮಸಮಾರಾಧನೆ ' ಹರಕೆಗಳನ್ನು ಹೇಳಿಕೊಳ್ಳುತ್ತಾರೆ.

ಬ್ರಹ್ಮ ಶಿಲೆಯಾಗಿ 'ದುರ್ಗಾ ರಾಕ್ಷಸನು ' ಶಂಕರಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟು 'ಮಾರಣ ಕಟ್ಟೆಗೆ ' ತಪಸ್ವಿಗಳಾದ ಬ್ರಾಹ್ಮಣರು ಹೋಗಿದ್ದಾಗ ಕನಸಿನಲ್ಲಿ ನಾನು ಪರಿವಾರದೊಂದಿಗೆ ದೇವಿಯ ಸನ್ನಿಧಾನವಾದ ನಡಬೂರಿನಲ್ಲಿ ನೆಲೆಸುವುದಾಗಿ ತಿಳಿಸಲು ಆಜ್ಞೆಯಂತೆ ಬ್ರಾಹ್ಮಣರು ಶಿಲೆಯೊಂದನ್ನು ತಂದು ದಟ್ಟ ಕಾನನದ ಒಂದು ವೃಕ್ಷದ ಕೆಳಗೆ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಮುಂದೆ ಭಕ್ತಾದಿಗಳಿಂದ ಗುಡಿಯ ನಿರ್ಮಾಣ ವಾಗಿ 'ಶ್ರೀಬ್ರಹ್ಮ ಲಿಂಗೇಶ್ವರ ' ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಈಗಲೂ ಕೂಡ ಬ್ರಹ್ಮನ ಬನವೆಂದು ದೇವಸ್ಥಾನದ ಹಿಂಭಾಗದಲ್ಲಿ ಕುರುಹು ಕಾಣಬಹುದು.

ಈ ಊರಿನ ಸ್ಥಳ ದೇವತೆ ಬ್ರಹ್ಮಲಿಂಗೇಶ್ವರ ದೇವರ ಬಗೆಗೆ ಹರಕೆ ಹೊರುವ ಸಾವಿರಾರು ಕುಟುಂಬಗಳಿವೆ. ಹೊಸದಾಗಿ ತಂದ ಉಳುಮೆ ಮಾಡುವ ಎತ್ತುಗಳು ಕೆಲಸ ಮಾಡದಿದ್ದಾಗ, ಕೊಟ್ಟಿಗೆಯಲ್ಲಿ ದನ, ಎಮ್ಮೆ , ಕರುಗಳು ಅಕಾಲಿಕವಾಗಿ ಮರಣ ಹೊಂದಿದಾಗ, ಕರು ಹಾಕಿದ ಹಸು, ಎಮ್ಮೆಗಳು ಹಾಲು ಕರೆಯದಿದ್ದಾಗ ಶ್ರೀಸ್ವಾಮಿಗೆ ಹಾಲು, ಬೆಣ್ಣೆ , ತುಪ್ಪದ ಅಭಿಷೇಕ ಮಾಡಿಸುವ ಹರಕೆಯನ್ನು ಹೊತ್ತು ತಮ್ಮ ಜಾನುವಾರುಗಳನ್ನು ರಕ್ಷಿಸಿಕೊಳ್ಳುತ್ತಾರೆ. ಹಸುವಿನ ಕರುಗಳನ್ನು ದೇವಸ್ಥಾನಕ್ಕೆ ದೇಣಿಗೆಯಾಗಿ ಕೊಡುವುದು ಈಗಲೂ ಚಾಲ್ತಿಯಲ್ಲಿದೆ. ಪ್ರತೀ ವರ್ಷ ಗೌರೀ ಹಬ್ಬದಂದು ಭಕ್ತವೃಂದದವರು ದೇವರ ಸೇವೆಯಲ್ಲಿ ಪಾಲ್ಗೊಂಡು ಹರಕೆ ಒಪ್ಪಿಸುವುದು ಅನಾಧಿ ಕಾಲದಿಂದಲೂ ನಡೆದುಕೊಂಡು ಬಂದಿದೆ.

ಚಿಕ್ಕಳೂರು ಶ್ರೀಬನಶಂಕರಿ ಅಮ್ಮನವರ ದೇವಾಲಯದ ಸಾಂಸ್ಕೃತಿಕ ಮತ್ತು ಪೌರಾಣಿಕ ಐತಿಹ್ಯ :

ತೀರ್ಥಹಳ್ಳಿ ತಾಲ್ಲೂಕಿನ ಚಿಕ್ಕಳೂರು ಗ್ರಾಮದ ಶ್ರೀಬನಶಂಕರೀ ಅಮ್ಮನವರ ದೇವಸ್ಥಾನ ಈ ಭಾಗದ ಪ್ರಸಿದ್ಧ ಕಾರಣಿಕ ಶಕ್ತಿದೇವತಾ ಕ್ಷೇತ್ರ. ಈ ದೇವಾಲಯದ ಸ್ಥಾಪನೆಯ ಹಿಂದಿರುವ ಐತಿಹ್ಯವೆಂದರೆ -

ಚಿಕ್ಕಳೂರು ಗ್ರಾಮ ವ್ಯಾಪ್ತಿಯಲ್ಲಿ ಮೂರು ದೇವಸ್ಥಾನಗಳಿದ್ದು, ಇದರಲ್ಲಿ ಬಹಳ ಮುಖ್ಯವಾದ ಮೊದಲನೇ ದೇವಸ್ಥಾನ ಬನಶಂಕರಿ ಅಮ್ಮನವರ ದೇವಸ್ಥಾನ. ಎರಡನೆಯದು ರಾಮಲಿಂಗೇಶ್ವರ, ಮೂರನೆಯದು ಹಿರಿಯಮ್ಮನವರ ದೇವಸ್ಥಾನ. ಈ ಮೂರು ದೇವಸ್ಥಾನಗಳು ವಿಜಯನಗರ ಸಾಮ್ರಾಜ್ಯ ಮತ್ತು ಕೆಳದಿ ಅರಸರ ಕಾಲದಲ್ಲಿ ಸ್ಥಾಪಿತವಾಗಿ ವೈಭವದಿಂದ ಮೆರೆದಿದ್ದವು. ಕೆಳದಿಯ ಅರಸು ಶಿಸ್ತುಗಾರ ಶಿವಪ್ಪನಾಯ್ಕರವರ ಕಾಲದಲ್ಲಿ ಇವುಗಳ ಹೆಚ್ಚಿನ ಮಾನ್ಯತೆ ಪಡೆದಿದ್ದವು ಎಂಬುದಕ್ಕೆ ಕವಲೇದುರ್ಗದ ಮಠದಲ್ಲಿರುವ ಕೆಳದಿಯ ಇತಿಹಾಸ ಪುಸ್ತಕಗಳಲ್ಲಿ ದಾಖಲಾಗಿವೆ. ಶ್ರೀ ಬನಶಂಕರಿ ಅಮ್ಮನವರ ದೇವಸ್ಥಾನದಲ್ಲಿ ಸಪ್ತ ದಿಕ್ಕುಗಳಲ್ಲಿ ಏಳುಕಟ್ಟೆಗಳಿದ್ದು, ಈ ಬನಶಂಕರಿ ತನ್ನ ಏಳು ಜನ ಅಕ್ಕತಂಗಿಯರ ಮನೆಗೆ ಹೋಗುವ ಬದಲು ಈ ಏಳುಕಟ್ಟೆಗಳ ಬಳಿಗೆ ರಥೋತ್ಸವದ ಸಂದರ್ಭದಲ್ಲಿ ಸಂಚರಿಸುತ್ತಿದ್ದಳು. ಈ ಏಳುಕಟ್ಟೆಗಳೆಂದರೆ, ಚಿಪ್ಪಳಕಟ್ಟೆ ಎಂದರೆ ಚಪ್ಪಳ ಎಂದರೆ ಎರಡು ಕಟ್ಟೆ ಒಟ್ಟಿಗೆ ಸೇರಿದ್ದು ಎನ್ನುವ ಅರ್ಥ, ಕಾರುಬೈಲು ಕಟ್ಟೆ , ಮಾವಿನಕಟ್ಟೆ ನೆಲ್ಲಿಕಟ್ಟೆ ಗೋಳಿಕಟ್ಟೆ ಕೆರೆಕಟ್ಟೆ ಎಂದು ಇವುಗಳ ನಡುವೆ ಇರುವ (ಚಿಕ್ಕದಾದ ಊರನ್ನು) ಸಪ್ತಮಾತೃಕೆಯಲ್ಲಿ ಚಿಕ್ಕವಳು ನೆಲೆಸಿದ ಊರಾದ್ದರಿಂದ ಚಿಕ್ಕಳೂರು ಎಂದು ಕರೆಯಲಾಯಿತು. ಇಲ್ಲಿ ಅಂದಿನ ದಿನದಲ್ಲಿ ಹೆಚ್ಚಿನ ಜನಸಂಖ್ಯೆ ಇರುವ ಊರಾಗಿ ನಾಗರೀಕತೆ ಬೆಳೆದಿದ್ದು ಜಾತ್ರೆ ರಥೋತ್ಸವಗಳು ನಡೆದು ನಂತರದ ದಿನಗಳಲ್ಲಿ ನಶಿಸಿ ಹೋಗಿತ್ತು. ನಂತರ ಚಿಕ್ಕಳೂರಿನ ಹಲವು ಕುಟುಂಬಗಳು ಅಸ್ತಿತ್ವಕ್ಕೆ ಬಂದಾಗ ಒಂದೊಂದು ದೇವಸ್ಥಾನಗಳು ಬೆಳಕಿಗೆ ಬಂದು ಪುನರ್ ಪ್ರತಿಷ್ಠಾಪನೆಯಾಗಿ ಜೀರ್ಣೋದ್ಧಾರವಾಗಿ ಅಭಿವೃದ್ಧಿ ಹೊಂದಿದವು.

ಸ್ಥಳ ಪುರಾಣದ ನಿಷ್ಪತ್ತಿಯ ಸಾಂಸ್ಕೃತಿಕ ಅಧ್ಯಯನ :

ಶ್ರೀ ಬನಶಂಕರೀ ಅಮ್ಮನವರ ದೇವಸ್ಥಾನ : ಇದು ಚಿಕ್ಕಳೂರಿನ ಹೃದಯ ಭಾಗದಲ್ಲಿದ್ದು, ಪುರಾತನ ಕಾಲದ ಬಹಳ ಮುಖ್ಯ ಐತಿಹಾಸಿಕ ಹಿನ್ನೆಲೆ ಹೊಂದಿರುವ ದೇವಸ್ಥಾನ. ಪುರಾಣದಲ್ಲಿ ಪರಶುರಾಮನು ತನ್ನ ತಂದೆಯ ಆದೇಶದಂತೆ ತಾಯಿಯಾದ ರೇಣುಕಾಂಬೆಯ ಶಿರಶ್ಛೇದನ ಮಾಡಿದಾಗ, ಒಂದು ಶಿರಶ್ಚೇತನ ಮಾಡಿದಾಗ ಇನ್ನೊಂದು ಎಂಬಂತೆ ಏಳು ರುಂಡಗಳು ಉದ್ಭವಿಸಿ ಏಳನೇ ರುಂಡ ತುಂಡಾಗಿ ರೇಣುಕಾಂಬೆ ಮರಣವನ್ನಪ್ಪುತ್ತಾಳೆ. ಪರಶುರಾಮನ ಕೊಡಲಿಯ ಕೊಚ್ಚಿಗೆ ತುಂಡಾದ ಈ ರೇಣುಕಾಂಬೆಯ ಏಳು ರುಂಡಗಳು ಏಳು ಊರು ಎಂದು ಕೊನೆಯಲ್ಲಿ ಉಲ್ಲೇಖ ಬರುವ ಏಳು ಊರುಗಳಲ್ಲಿ ಉದ್ಭವವಾಗಿವೆ ಎಂದು ಪೌರಾಣಿಕ ಪ್ರತೀತಿ ಇದೆ.

ಆ ಏಳು ಊರುಗಳು ಮತ್ತು ದೇವರೆಂದರೆ, ಮುನಿಯೂರಿನ ಬನಶಂಕರಿ, ಹಾಲ್ಮುತ್ತೂರಿನ ಲೋಕಪರಮೇಶ್ವರಿ, ಮಳಲೂರಿನ ಬನಶಂಕರಿ , ಶಿರೂರಿನ ಬನಶಂಕರಿ, ಕೆಸಲೂರಿನ ಬನಶಂಕರಿ, ಹೊಳಲೂರಿನ (ಜಿವಗೇರಿ) ಬನಶಂಕರಿ ದೇವರು ಹತ್ತು ಅಡಿ ಎತ್ತರದ ಹುತ್ತಿನಲ್ಲಿ ಉದ್ಭವವಾಗಿ ಪಾದಯಮಾತ್ರ ಕಾಣಿಸುತ್ತಿದ್ದು, ಪಾದ ಪೀಠಕ್ಕೆ ಪೂಜಿಸಲಾಗುತ್ತದೆ. ಹಿಂದೆ ಕಾಡಿನಲ್ಲಿ ನಶಿಸಿ ಹೋದ ದೇವರ ಹುತ್ತಿನ ಮೇಲೆ ಒಂದು ಹಸುವು ಪ್ರತಿ ದಿನವೂ ಹಾಲು ಸುರಿಸುತ್ತಿತ್ತೆಂದು ವಾಡಿಕೆ. ಆ ಯಜಮಾನ ನೋಡಿ ಈ ದೇವರನ್ನು ಬೆಳಕಿಗೆ ತಂದು ದೇಗುಲವನ್ನು ಹತ್ತು ಅಡಿ ಎತ್ತರದ ಹುತ್ತಕ್ಕೆ ಸರಿಹೊಂದುವಂತೆ ನಿರ್ಮಿಸಲಾಯಿತು. ನಂತರ ಇದರ ಅಭಿವೃದ್ಧಿ ಮುಂದುವರಿಯುತ್ತ ಬಂದಿದ್ದು, ಇಂದು ಈ ಭಾಗದ ಪ್ರಮುಖ ದೇವಸ್ಥಾನವಾಗಿದೆ.

ಚಿಕ್ಕಳೂರಿನ ಶ್ರೀ ಬನಶಂಕರಿ ಅಮ್ಮನವರ ದೇವಾಲಯದ ಬಗೆಗಿನ ಐತಿಹ್ಯವನ್ನು ಗಮನಸಿದಾಗ, ಈ ತಾಲ್ಲೂಕಿನ ಬಹುಪಾಲು ಪ್ರದೇಶದಲ್ಲಿ ಪರಶುರಾಮನಿಗೆ ಸಂಬಂಧಿ ಸಿದ ಐತಿಹ್ಯಗಳು ಒಂದಕ್ಕೊಂದು ತಳುಕು ಹಾಕಿಕೊಂಡಿವೆ.

ತೀರ್ಥಹಳ್ಳಿಯ ಪರಶುರಾಮತೀರ್ಥಕ್ಕೂ , ಚಿಕ್ಕಳೂರಿನ ಈ ದೇವಾಲಯಕ್ಕೂ ಪ್ರಾದೇಶಿಕವಾಗಿ ಕೆಲವೇ ಮೈಲುಗಳ ಅಂತರ ಇರುವುದರಿಂದ ಈ ಸ್ಥಳದ ಐತಿಹ್ಯವನ್ನು ಪುಷ್ಟೀಕರಿಸಲು ತೀರ್ಥಹಳ್ಳಿಯ ಪರಶುರಾಮನ ತೀರ್ಥ ಸಾಕ್ಷ್ಯವನ್ನು ಒದಗಿಸುತ್ತದೆ.

ಟಿಪ್ಪಣಿಗಳು ಮತ್ತು ವಕ್ತೃಗಳು :

1. ವೈಷ್ಣವ ಒಕ್ಕಲಿಗರ ಮೌಖಿಕ ಸಾಹಿತ್ಯ 1999, ಕನ್ನಡ ಪುಸ್ತಕ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಪುಟ 395
2. 'ಕೌಲೇದುರ್ಗ' ಲೇಖಕರು - ಕೆ. ಜಗನ್ನಾಥ ಶಾಸ್ತ್ರಿ 1983 ಐಬಿಹೆಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು - 9 ಪುಟ 8
3. ಸ್ಕಂದ ಪುರಾಣ, ಸಹ್ಯಾದ್ರಿ ಖಾಂಡ (ಉತ್ತರಾರ್ಧ) ಸಂ. ಶ್ರೀಮತಿ ಮಹಿಷಿ ಭಾನುಮತಿ - ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ., (95-96 ನೇ ಅಧ್ಯಾಯ)
4. ಅದೇ ಅಧ್ಯಾಯ (97)
5. ಅದೇ ಅಧ್ಯಾಯ (98)
6. ಕರ್ನಾಟಕ ಗೆಜೆಟಿಯರಿನ್ 1963

'ಸಹ್ಯಾದ್ರಿ ಪರಿಸರದ ಚಾರಿತ್ರಿಕ ನೋಟ ' ಪ್ರಬಂಧ ಲೇಖನ 2008 - ಲೇಖಕ : ಶ್ರೀ ಶಿವಾನಂದ ಕರ್ಕಿ

'ಜಲ್ಲು ' - ವೃದ್ಧರು ನಡೆದಾಡುವಾಗ ಉಪಯೋಗಿಸುವ ಊರುಗೋಲು. ಈ ಪ್ರದೇಶದಲ್ಲಿ ಜಲ್ಲು ಎಂಬ ಹೆಸರಿನಿಂದ ಕರೆಯುತ್ತಾರೆ.

ಅಧ್ಯಾಯ - 4

ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಸಂಚಾರಿ ಐತಿಹ್ಯಗಳ ಸಾಂಸ್ಕೃತಿಕ ಮತ್ತು ಜನಪದೀಯ ಅಧ್ಯಯನ

ಸಂಚಾರಿ ಐತಿಹ್ಯಗಳು :

ಬಹುಸಂಸ್ಕೃತಿಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿರುವ ತೀರ್ಥಹಳ್ಳಿ ತಾಲ್ಲೂಕು ತನ್ನ ಗರ್ಭದಲ್ಲಿ ಅನೇಕ ಕುತೂಹಲಕಾರಿ ಸಂಚಾರಿ ಐತಿಹ್ಯಗಳನ್ನು ಹುದುಗಿಸಿಕೊಂಡಿದೆ. ಪುರಾತನ ಭಾರೀ ಸ್ಮಾರಕಗಳನ್ನು ಅತಿಮಾನುಷ ಶಕ್ತಿಗಳಿಗೆ ಆರೋಪಿಸುವ ಐತಿಹ್ಯಗಳು, ಮತಾಚಾರಣೆಯ ಐತಿಹ್ಯಗಳು, ಮೂಢಾಚರಣೆಯ ಐತಿಹ್ಯಗಳು, ಸ್ವಪ್ನ ಐತಿಹ್ಯಗಳು ಇತ್ಯಾದಿಯಾಗಿ ಇನ್ನೂ ಹಲವಾರು ಪ್ರಕಾರಗಳನ್ನು ವಿಂಗಡಿಸಬಹುದು. ಅದರ ಮೇಲೆ ವಿವರಿಸಿದ ಪ್ರಕಾರಗಳು ಜನಪ್ರಿಯವಾಗಿದ್ದವು.

ಸಂಚಾರಿ ಐತಿಹ್ಯಗಳಲ್ಲಿನ ಕೆಲವು ವರ್ಗಗಳಿಗಾದರೂ ನಿಶ್ಚಯವಾಗಿ ಮೂಲವನ್ನು ಹೇಳಲು ಸಾಧ್ಯವಿವೆ. ಯಾವುದೇ ಐತಿಹ್ಯ ಅದು ಹೇಗೇ ಇರಲಿ ಚಾರಿತ್ರಿಕವಾದುದೆಂಬು ದನ್ನು ಮರೆಯುವಂತಿಲ್ಲ. ಆದರೆ ಧಾರ್ಮಿಕ ಗ್ರಂಥಗಳ ಪ್ರಭಾವದಿಂದ ಅಲ್ಲಿನ ಎಷ್ಟೋ ವಿಷಯಗಳು ಐತಿಹ್ಯಗಳಾಗಿ ಪ್ರಚುರವಾಗಿರುವುದನ್ನೂ ಗಮನಿಸದಿರುವಂತಿಲ್ಲ. ಒಟ್ಟಿನಲ್ಲಿ

> ''ಗೊತ್ತಾದ ಸಂಪ್ರದಾಯವೊಂದರ ಕೆಳಗೆ ನಿಶ್ಚಿತ ಐತಿಹಾಸಿಕ ಘಟನೆಯೊಂದು ಇರುವುದಾದರೂ, ಐತಿಹ್ಯ ಕಡೆಯ ಪಕ್ಷ ನಡೆದುದರ ತಿರುಳನ್ನು ರಕ್ಷಿಸುತ್ತದೆಯೋ ಹೊರತು ಮತ್ತೇನನ್ನೂ ಅಲ್ಲ''[1]

ಎಂಬ ಜನಪದ ವಿದ್ವಾಂಸ ಅಲೆಗ್ಸಾಂಡರ್ ಕ್ರಾಪ್ಪೆ ಮಾತನ್ನು ಒಪ್ಪಿಕೊಳ್ಳಬಹುದೆಂದು ತೋರುತ್ತದೆ. ಪ್ರಸಾರದ ದೃಷ್ಟಿಯಿಂದ ಅತ್ಯಂತ ಮಹತ್ವವೆಂದರೆ ವಲಸೆ ಬಂದ ಐತಿಹ್ಯಗಳು ಸ್ಥಳೀಯ ಐತಿಹ್ಯಗಳೇ ಆಗಿದೆ. ಇದು ಯಾವುದೋ ಒಂದು ಸ್ಥಳದಲ್ಲಿ ಹುಟ್ಟಿ ವಿಶ್ವವ್ಯಾಪಕತೆಯನ್ನು ಪಡೆದುಕೊಳ್ಳುತ್ತದೆ. ಇದು ಕೆಲಮಟ್ಟಿಗೆ ದೀರ್ಘವಿರುವ ಕಸ್ತೆ ಕಥೆಗಿಂತ ಚಿಕ್ಕದಾದ ಗದ್ಯ ಕಥನ. ಪಾಠಾಂತರಗಳು ಪರಿಮಿತ ಸಂಖ್ಯೆಯಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಆಶಯಗಳು ಬಹಳ ಸಂಖ್ಯೆಯಲ್ಲಿದ್ದರೂ ಸ್ಥಿರವಾದವುಗಳು. ವಲಸೆ ಹೋಗುವುದರಿಂದ ಅವು ವ್ಯತ್ಯಾಸವಾಗಲಾರವು. ಈ ಕಾರಣದಿಂದ ಬಹುಮೂಲ ಸಿದ್ಧಾಂತ

ಇಂಥಹ ಐತಿಹ್ಯಗಳಿಗೆ ಅನ್ವಯಿಸಲಾಗುವುದಿಲ್ಲ. ಈ ಐತಿಹ್ಯದ ಹರಡುವಿಕೆ, ದುರ್ಗಾಭಾಗವತರು ಹೇಳುವ ಹಾಗೆ,

> 'ಸ್ಥಳೀಯ ಐತಿಹ್ಯಕ್ಕಿಂತ ವಿಸ್ತಾರವಾದುದು. ಕಿನ್ನರ ಕಥೆಗಿಂತ ಪರಿಮಿತವಾದುದು. ಇಂಥ ಕಥೆಗಳು ಸ್ಥಳದಿಂದ ಸ್ಥಳಕ್ಕೆ ಕ್ಷಿಪ್ರಗತಿಯಲ್ಲಿ ಹರಡಿಕೊಳ್ಳುವುದಕ್ಕೆ ಎಲ್ಲ ಕಡೆಯೂ ಕಾಣಬರುವ ಮೂಲಭೂತ ಭಾವನೆಯೇ ಕಾರಣ'[2]

ಎಂದು ಹೇಳುತ್ತಾರೆ. ಮನುಷ್ಯ ಧಾರ್ಮಿಕವಾಗಿ ಸರ್ವಚೇತನವಾದ ಹಂತವನ್ನು ಮುಟ್ಟಿದ ಕಡೆಯಲ್ಲಿ ಇದು ಸುಲಭವಾಗುತ್ತದೆಂದು ವಿದ್ವಾಂಸರ ಅಭಿಪ್ರಾಯ. ವಲಸೆಯ ಹಾಗೆಯೇ 'ವಿಕ್ಟಮ್ಸ್ ಲಾಸ್ಟ್ ವರ್ಡ್ಸ್' ಎಂಬ ಕಥೆ ಬೌದ್ಧಧರ್ಮದ ಮೂಲಭೂತ ತತ್ವವನ್ನು ಆಧರಿಸಿರುವ ಈ ಕಥೆ ಭಾರತದಲ್ಲಿ ಹುಟ್ಟಿ, ಅನಂತರ ಇತರ ಕಡೆಗಳಿಗೆ ಹರಡಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ.

ವಲಸೆಯ ಐತಿಹ್ಯಗಳು ದೇಶ, ಮತಗಳಿಂದ ಅತೀತವಾಗಿರುತ್ತವೆ ಎಂದು ಹೇಳಲಾಗುವುದಿಲ್ಲ. ಅವು ಹುಟ್ಟುತ್ತಲೇ ಅಲ್ಲಿನ ಸ್ಥಿತಿ, ಅನುಷ್ಠಾನ, ನಂಬಿಕೆ ಹಾಗೂ ಸಾಂಪ್ರದಾಯಿಕ ಪದ್ಧತಿಗಳನ್ನು ಮೈಗೂಡಿಸಿಕೊಳ್ಳುತ್ತವೆ. ವಲಸೆ ಬಂದಾಗ ಅಲ್ಲಿನ ಪರಿಸ್ಥಿತಿಗೆ ಇವು ಅನಾಮತ್ತಾಗಿ ಒಪ್ಪಿಗೆಯಾಗಬಹುದು ಅಥವಾ ಅಲ್ಲಿನ ಧಾರ್ಮಿಕ ಪದ್ಧತಿಗಳಲ್ಲಿ ವಿಲೀನವಾಗಬಹುದು. ಹೀಗೆ ಐತಿಹ್ಯವೊಂದು ಆಯಾ ಪರಿಸರಕ್ಕೆ ಒಗ್ಗಿಕೊಂಡರೂ, ಅದರಲ್ಲಿನ ಪ್ರತ್ಯೇಕತೆಯ ಕೆಲವೊಂದು ಲಕ್ಷಣದಿಂದಾಗಿ ತನ್ನ ಮೂಲ ವಾಸನೆಯನ್ನು ಉಳಿಸಿಕೊಂಡೇ ಇರುತ್ತದೆ. ಕೆಲವು ವೇಳೆ ಹೆಸರಿನ ಆಕಸ್ಮಿಕ ಉಲ್ಲೇಖ ಇಂಥ ಬೆಲೆಯುಳ್ಳ ಸೂಚನೆಯನ್ನು ನೀಡುತ್ತದೆ.

ಈ ಬಗೆಯ ಕಥೆಗಳು ದೇಶದಿಂದ ದೇಶಕ್ಕೆ ಹೇಗೆ ವಲಸೆ ಹೋಗುತ್ತವೆ ಎಂಬುದು ಒಂದು ಪ್ರಶ್ನೆ. ಇದಕ್ಕೆ ಭಾರತೀಯ ಮೂಲವಾದದ ಮೂಲಕ ಕೆಲಮಟ್ಟಿಗೆ ಉತ್ತರ ಕೊಡಬಹುದು. ಇದರ ಪ್ರಕಾರ ಭಾರತೀಯ ಕಥೆಗಳು ಇತರ ಕಡೆಗೆ ಹರಡಿಕೊಳ್ಳುವುದು ಬೌದ್ಧ ಮಿಷನರಿಗಳ ಮೂಲಕ. ಆದರೆ ಇದಕ್ಕೆ ಮೂಲ ಆಧಾರ ಜಾತಕ, ಪಂಚತಂತ್ರ ಮುಂತಾದ ಬರವಣಿಗೆ ರೂಪದ ಕಥೆಗಳು. ಆದ್ದರಿಂದ ವಾಚಿಕ ಪರಂಪರೆಯ ಕಥೆಗಳಿಗೆಲ್ಲ ಪ್ರಚಾರವೇ ಕಾರಣವಾಯಿತೆಂದು ಹೇಳಲಾಗುವುದಿಲ್ಲ. ಇದಕ್ಕಿಂತ ಬೇರೆಯಾದ

ಕಾರಣವೊಂದು ಇರಬೇಕೆನ್ನಿಸುತ್ತದೆ. ಒಟ್ಟಿನಲ್ಲಿ ಸಾಕಷ್ಟು ಸಂಖ್ಯೆಯ ಇಂಥ ಐತಿಹ್ಯಗಳ ಪ್ರಸಾರಕ್ಕೆ ಧರ್ಮಪ್ರಚಾರಕರು ಕಾರಣವಾಗಿದ್ದರೆಂಬ ಅಂಶವನ್ನು ಒಪ್ಪಿಸಿಕೊಳ್ಳಬಹುದಾಗಿದೆ. ಯೂರೋಪಿನಾದ್ಯಂತ ಹರಡಿರುವ 'ಈಡಿಪಸ್' ಐತಿಹ್ಯವನ್ನೆ ಇದಕ್ಕೆ ಉದಾಹರಿಸಬಹುದು.

ಹೀಗೆ ಐತಿಹ್ಯಗಳನ್ನು ಸ್ಥಳೀಯ ಮತ್ತು ವಲಸೆಯ ಐತಿಹ್ಯಗಳೆಂದೂ ಎರಡು ವಿಧವಾಗಿ ಮಾಡಿಕೊಳ್ಳಬಹುದು. ಇವುಗಳಿಗೆ ಸಂಬಂಧವಿರುವಂತೆ ವ್ಯತ್ಯಾಸವೂ ಇದೆ. ಸ್ಥಳೀಯ ಐತಿಹ್ಯ ಪರಿಮಿತ ಪ್ರದೇಶದಲ್ಲಿ ವಲಸೆ ಬಂದಂತೆ ಕಂಡುಬಂದರೂ, ಒಂದು ಕಡೆ ನೆಲೆಯಾಗಿ ನಿಂತುಕೊಂಡದ್ದು. ವಲಸೆಯ ಐತಿಹ್ಯ ವಿಸ್ತಾರವಾದ ಭೂ ಪ್ರದೇಶದಲ್ಲಿ ಎಲ್ಲ ಕಡೆಯೂ ವಲಸೆ ಬಂದದ್ದೇ ಆಗಿರುತ್ತದೆ. ಮೊದಲನೆಯದು ಬಹುಮೂಲಕ್ಕೆ ಸಂಬಂದಿಸಿದರೆ, ಎರಡನೆಯದು ಏಕಮೂಲಕ್ಕೆ ಸಂಬಂಧಿಸಿದುದು. ಹೀಗೆ ಸ್ಥಳೀಯ ಮತ್ತು ವಲಸೆಯ ಐತಿಹ್ಯಗಳಿಗಿರುವ ವ್ಯತ್ಯಾಸವನ್ನು ತೋರಸಬಹುದಾದನ್ನೂ, ಎರಡರ ನಡುವೆ ಗೆರೆಯನ್ನು ಎಳೆಯುವುದು ಎಷ್ಟೋ ಸಮಯದಲ್ಲಿ ಕಷ್ಟವಾಗುತ್ತದೆ.

ಪ್ರತಿಯೊಂದು ಧರ್ಮವೂ ಜನಪದ ವರ್ಗವೂ ತನಗೆ ಸಂಬಂಧಿಸಿದ ಐತಿಹ್ಯಗಳನ್ನು ಬಹು ಸಂಖ್ಯೆಯಲ್ಲಿ ಹೊಂದಿರುತ್ತದೆ. ಈ ಪ್ರದೇಶದಲ್ಲಿ ಕೆಲವು ಐತಿಹ್ಯಗಳು ಉಳಿದುಬಂದಿವೆ. ಸೃಷ್ಟಿಯ ಬಗ್ಗೆ ಅವರು ತಳೆದ ಆಸಕ್ತಿ ಏನು ಎಂಬುದನ್ನು ಹೇಳುವ ಒಂದು ಐತಿಹ್ಯ ಹೀಗಿದೆ : ಸೃಷ್ಟಿಯ ಆರಂಭದಲ್ಲಿ ಜಗತ್ತಿನಲ್ಲಿ ಭೂಮಿ ಇರಲಿಲ್ಲ. ನೀರೇ ಆವರಿಸಿತ್ತು. ಆಗ ದೇವರ ಸೊಲ್ಲೂ ಇರಲಿಲ್ಲ. ದ್ವೆವ, ಪಿಶಾಚಿಗಳ ಕಾಕೂ ಇರಲಿಲ್ಲ; ಗಾಳಿಯೂ ಇರಲಿಲ್ಲ. ಎಲ್ಲವೂ ಶೂನ್ಯವಾಗಿತ್ತು. ವಾಸ್ತವದಲ್ಲಿ ಆಕಾಶ ಇರುವ ಹಾಗೆ ಆಗ ಎಲ್ಲೆಲ್ಲೂ ನೀರಿತ್ತು. ನೀರಿನ ಮೇಲೆ ತೇಲುತ್ತಿದ್ದ ಕಮಲದ ಮೇಲೆ ಭಗವಂತ ವಿರಮಿಸಿದ್ದ. ಅವನು ಏಕಾಂತದಲ್ಲಿದ್ದ. ಈ ವಿವರಣೆಯಲ್ಲಿ ಸಹಜತೆ ಮತ್ತು ಪೌರಾಣಿಕ ಅಂಶಗಳೆರಡೂ ಒಂದಕ್ಕೊಂದು ಹೆಣೆದುಕೊಂಡಿವೆ.

ಮನುಷ್ಯ ಸೃಷ್ಟಿಯ ಜಾನಪದ ಐತಿಹ್ಯ :

ಜೀವವಿಕಾಸಕ್ಕೆ ಸಂಬಂಧಿಸಿದ ಒಂದು ಐತಿಹ್ಯ ತುಂಬ ಕುತೂಹಲಕಾರಿ ಯಾದುದು: 'ಹಿಂದಿನ ಕಾಲದಲ್ಲಿ ದೇವರು ಒಬ್ಬನೇ ಇದ್ದನು. ಅವನಿಗೆ ಕಾಡುತ್ತಿದ್ದ

[illegible]

ಏಕಾಕಿತನಕ್ಕೆ ಸಂಗಾತಿ ಬೇಕೆನಿಸಿತು. ಆಗ ತನ್ನ ದೈವಿಕ ಶಕ್ತಿಯಿಂದ ಒಬ್ಬಳು ಸಂಗಾತಿಯನ್ನು ಸೃಷ್ಟಿಸಿಕೊಂಡ. ಹಾಗೆ ಸೃಷ್ಟಿಸಿಕೊಂಡ ಸಂಗಾತಿಯೊಡನೆ ಸಂಭೋಗ ನಡೆಸಿದ. ಅವಳು ಒಂದು ಗಂಡು ಮಗುವಿಗೆ ಜನ್ಮ ನೀಡಿದಳು. ಮುಂದೆ ಅವಳು ಸ್ತ್ರೀಧರ್ಮದನ್ವಯ ತನ್ನ ಹೊಟ್ಟೆಯಿಂದ ಹುಟ್ಟಿದ ಮಗ ಮತ್ತೆ ತನ್ನೊಡನೆ ಹೇಗೆ ಸೇರುತ್ತಾನೆಂದು ಆಲೋಚಿಸಿ ಹಸುವಿನ ರೂಪ ತಾಳಿದಳು. ಆಗ ಅವಳ ಮಗ ಎತ್ತಿನರೂಪ (ಹೋರಿ) ಧರಿಸಿದ. ಆ ಹೋರಿ ಹಸುವಿನೊಡನೆ ಕೂಡಿದಾಗ ಕರುಗಳು ಹುಟ್ಟಿದವು' ಎಂದು ವಕ್ತೃ ಹೇಳುತ್ತಾರೆ. ಜೀವಿಗಳ ಸೃಷ್ಟಿ ಹೇಗಾಯಿತೆಂಬುದನ್ನು ವಿವರಿಸುವ ಈ ಐತಿಹ್ಯ ವಿವರಣಾತ್ಮಕ ಕತೆಯ ಲಕ್ಷಣಗಳನ್ನೇ ಹೊಂದಿದೆ.

ನಾಗರಹಾವು -ಹೆಂಟೆಗೊದ್ದದ ಬಗೆಗಿನ ಜಾನಪದ ಐತಿಹ್ಯ :

ನಾಗರಹಾವಿನ ಅತಿಮಾನುಷತೆ ಮತ್ತು ಆರಾಧನೆಯ ಸ್ವರೂಪದ ಬಗೆಗೆ ಅನೇಕ ನಂಬಿಕೆ, ಕಲ್ಪನೆಗಳಿವೆ. ನಾಗರಹಾವು ಗುಪ್ತನಿಧಿಯನ್ನು ಕಾಯುತ್ತಿರುತ್ತದೆ, ಹಾವಿನ ತಲೆಯಲ್ಲಿ ನಾಗಮಣಿ ಎಂಬ ರತ್ನವಿರುತ್ತದೆ. ಹಾವು ಹನ್ನೆರಡು ವರ್ಷವಾದರೂ ದ್ವೇಷ ಸಾಧಿಸುತ್ತದೆ ಮುಂತಾದವುಗಳಿಗೆ ಸಂಬಂಧಿಸಿದಂತೆ ವಿವಿಧ ಐತಿಹ್ಯಗಳಿವೆ.

ಜಾನಪದ ವಿದ್ವಾಂಸ ಡಾ|| ಅಂಬಳಿಕೆ ಹಿರಿಯಣ್ಣನವರು ನಾಗರಹಾವಿನ (ನಾಗನ) ಬಗೆಗೆ ಇವರು ಹೇಳುವ ಐತಿಹ್ಯ ಸ್ವಾರಸ್ಯಕರವಾದುದು :

> 'ನಾಗನು ಶಿವನ ಸೃಷ್ಟಿ (ಜನರು ನಾಗನನ್ನು ಪೂಜಿಸಲೆಂದು ಶಿವನು ನಾಗನನ್ನು ಸೃಷ್ಟಿಸಿದನು). ನಾಗನನ್ನು ಪೂಜಿಸಿದರೆ ಜನರಿಗೆ ಮುಕ್ತಿ ಸಿಗುತ್ತದೆಂದೆಣಿಸಿ ಶಿವನು ನಾಗನನ್ನು ಸೃಷ್ಟಿಸಿದ. ಪೂಜಿಸದಿದ್ದರೆ ನಾಗಪ್ಪ ಮುನಿಯುತ್ತಾನೆ. ಆಗ ಸಾವು ನಿಶ್ಚಿತ '[3]

ಹೆಂಟೆಗೊದ್ದದ ಸಂಬಂಧವಾಗಿ ಹುಟ್ಟಿಕೊಂಡಿರುವ ಐತಿಹ್ಯ ಆ ಪ್ರಾಣಿಯ ಸೃಷ್ಟಿ ಏತಕ್ಕಾಗಿ ಆಗಿದೆ ಎಂಬುದನ್ನು ಹೀಗೆ ವಿವರಿಸುತ್ತಾ,

> 'ಜನರು ಕಷ್ಟಪಟ್ಟರೂ ಬೆಳೆ ಹುಲುಸಾಗದಿದ್ದುದನ್ನು ಕಂಡ ಭೂಮಿತಾಯಿ ಹೆಂಟೆಗೊದ್ದವರನ್ನು ಸೃಷ್ಟಿಸಿದಳು. ಗದ್ದೆ ಹೆಂಟೆಗಳ ಮೇಲೆ ಹೆಂಟೆಗೊದ್ದ ಹರಿದಾಡಿದರೆ ಬೆಳೆ ಹುಲುಸಾಗಬೇಕು ಎಂದು ವರವನ್ನಿತ್ತಳು. ಹೆಂಟೆಗೊದ್ದದ ಮೈಮೇಲಿನ ಗೆರೆಗಳು, ಬೆಳೆದು ನಿಂತ ಗದ್ದೆಯ ಪೈರು ತೆನೆಗಳನ್ನು ಸಂಕೇತಿಸುತ್ತವೆ '[4]

ಈ ಐತಿಹ್ಯ ಈ ಭಾಗದ ಜನ ದ್ರಾವಿಡ ಪರಂಪರೆಯವರೆಂಬುದನ್ನು ವಿವರಿಸುತ್ತದೆ.



ನಾಗರ ಕಲ್ಲುಗಳು.



ಶ್ರೀ ಆದಿಶೇಷ ದೇವರು

ಸೂರ್ಯ-ಚಂದ್ರರ ಹುಟ್ಟು ಮತ್ತು ಗುಣ ಸಂಬಂಧಿ ಐತಿಹ್ಯ :

ಸೌರಮಂಡಲ ಬಗೆಗಿರುವ ಒಂದು ಐತಿಹ್ಯ ಹೀಗಿದೆ : ಸೂರ್ಯನ ತಾಯಿ ತನ್ನ ಮಗುವಿಗೆ ಬೆಣ್ಣೆ ಸೇರಿಸಿದ ಅನ್ನವನ್ನೂ ಸವತಿಯ ಮಗನಾದ ಚಂದ್ರನಿಗೆ ಗಂಜಿಯನ್ನೂ ಉಣಿಸಿ ಸಾಕುತ್ತಿದ್ದಳು. ಗಂಜಿಯುಂಡ ಚಂದ್ರನೇ ದಷ್ಟಪುಷ್ಟವಾಗಿ ಆರೋಗ್ಯವಾಗಿ ಬೆಳೆದ. ಸೂರ್ಯ ಕೃಷನಾದ. ಹೀಗಿರುವಾಗ ಒಂದು ದಿನ ಸೂರ್ಯ ಚಂದ್ರರು ಒಂದು ಊಟದ ಮನೆಗೆ ಹೋದರು. ಸೂರ್ಯ ಚೆನ್ನಾಗಿ ಊಟ ಮಾಡಿದ. ಚಂದ್ರ ಎಷ್ಟು ಬೇಕೋ ಅಷ್ಟೆ ಉಂಡು ಸ್ವಲ್ಪ ಊಟವನ್ನು ಉಳಿಸಿಕೊಂಡು ಅದನ್ನು ಮನೆಗೆ ತೆಗೆದುಕೊಂಡು ಬಂದು ಸಾಕುತಾಯಿಗೆ ನೀಡಿದನು. ಸವತಿಯ ಮಗನಾದರೂ ತನ್ನ ಮೇಲಿನ ಅಕ್ಕರೆಯಿಂದ ಊಟ ತಂದನೆಂದು ಸೂರ್ಯನ ತಾಯಿಗೆ ಚಂದ್ರನ ಬಗ್ಗೆ ಅಮಿತ ವಾತ್ಸಲ್ಯ ಮೂಡಿತು. ಆಗ ಅವಳು ಚಂದ್ರನಿಗೆ **ತಂಪಲ್ಲೇ ಹೋಗಿ ತಂಪಲ್ಲೇ ಬಾ** ಎಂದು ಆಶೀರ್ವದಿಸಿದಳು. ತನ್ನ ಮಗನಾದ ಸೂರ್ಯನಿಗೆ **ಉರೀಲೇ ಹೋಗಿ ಉರೀಲೇ ಬಾ** ಎಂದು ಶಾಪವಿತ್ತಳು. ಇಲ್ಲಿ ಸೂರ್ಯಚಂದ್ರರಿಗೆ ಮಾನವ ಸಹಜಗುಣಗಳನ್ನು ಆರೋಪಿಸಲಾಗಿದೆ. ಸೂರ್ಯ ಉರಿಯಲು, ಚಂದ್ರ ತಂಪಾಗಿರಲು ಏನು ಕಾರಣ ಎಂಬುದನ್ನು ವಿವರಿಸುವ ಪ್ರಯತ್ನವನ್ನು ಈ ಐತಿಹ್ಯ ಮಾಡಿದೆ.

ಎತ್ತನ್ನು ಭೂಮಿಯಲ್ಲಿ ಉಳುಮೆ ಮಾಡಲು ಬಳಸುವ ಕಾರಣ ಯಾವುದು ಎಂದು ವಿವರಿಸುವ ಸಂಚಾರಿ ಐತಿಹ್ಯವೊಂದು ಕುತೂಹಲಕಾರಿಯಾದದ್ದು. 'ಕೈಲಾಸವಾಸಿಯಾದ ಪರಶಿವನ ನಂದಿ ಒಮ್ಮೆ ಭೂಲೋಕದಲ್ಲಿ ಭತ್ತದ ಹೊಲವನ್ನು ಮೇಯುತ್ತಿದ್ದುದನ್ನು ಕಂಡು ಹೊಲವನ್ನು ಕಾಯುತ್ತಿದ್ದ ಕಾವಲುಗಾರ ಅದನ್ನು ಹೊಡೆಯಲು ಅಟ್ಟಿಸಿಕೊಂಡು ಹೋದಾಗ ನಂದಿ ಅವನನ್ನು ತಿವಿಯಲು ಮುಂದಾಯಿತು. ಕಾವಲುಗಾರ ನಂದಿಯ ಮೇಲೆ ತನ್ನ ಕೈಯಲ್ಲಿದ್ದ ಕತ್ತಿಯನ್ನು ಎಸೆದ. ನಂದಿಯ ಹಣೆ ರಕ್ತಸಿಕ್ತವಾಯಿತು. 'ರಾಮುರಹಿತವಾಯ್ತು '. ಈ ಸುದ್ದಿ ಪರಶಿವನಿಗೆ ತಿಳಿದಾಗ ಪರಶಿವ ಕೈಲಾಸದಿಂದ ಭೂಲೋಕಕ್ಕೆ ಬಂದು ಕಾವಲಿನವನಿಗೆ

ಒಂದು ಪೆಟ್ಟು ನನಗಾದು
ಒಂದು ಪೆಟ್ಟು ನಿನಗಾದು
ಒಂದು ಪೆಟ್ಟು ನಂದಿ ಮರಕಾದು [5]

ಎಂದು ಬುದ್ಧಿವಾದ ಹೇಳಿ ಕಾವಲಿನವನಿಗೂ, ಬಸವನಿಗೂ ಸಂಧಾನ ಮಾಡಿಸಿದ. ನಂದಿ ಕಾವಲಿನವನನ್ನು ತಿವಿಯಲು ಹೋದ ಅಪರಾಧಕ್ಕಾಗಿ ಪರಶಿವನ ಸೂಚನೆಯ ಮೇರೆಗೆ ಕಾವಲಿನವನು ಅಂದಿನಿಂದ ನಂದಿಯನ್ನು ಉಳುಮೆಗೆ ಹೂಡಿದ ' ಎಂದು ವಕ್ತೃ ಮಂಜಪ್ಪ ನಾಯಕರು ಕೆಸಲೂರು ಹೇಳುತ್ತಾರೆ.

ಗಾಳಿಗೆ ಸಂಬಂಧಿಸಿದ ಐತಿಹ್ಯ ಇನ್ನೂ ಕುತೂಹಲಕಾರಿಯಾಗಿದೆ. 'ತ್ರಿಮೂರ್ತಿಯಲ್ಲಿ ಒಬ್ಬನಾದ ಭಗವಾನ್ ಮಹಾವಿಷ್ಣುವು ವಿಶ್ವ ಸಂಚಾರ ಮಾಡುತ್ತಿದ್ದಾಗ ಸುಡುವ ಸೂರ್ಯನ ಬಿಸಿಲಿಗೆ ಬೆವತುಹೋದ. ಅವನೊಡನಿದ್ದ ಆಪ್ತ ತುಂಬುರ-ನಾರದರು ಪೀತಾಂಬರದಿಂದ ಗಾಳಿ ಬೀಸಿ ಭಗವಾನ್ ಮಹಾವಿಷ್ಣುವನ್ನು ಉಪಚರಿಸಿದರು. ತನ್ನ ಭಕ್ತರ ಸೇವೆಯಿಂದ ಸಂತೋಷಗೊಂಡ ವಿಷ್ಣು ಒಂದು ಸಲ ದೀರ್ಘವಾದ ನಿಟ್ಟುಸಿರನ್ನು ಬಿಟ್ಟನು. ಆ ನಿಟ್ಟುಸಿರೇ **ಗಾಳಿಯಾಗಿ** ಬ್ರಹ್ಮಾಂಡದಲ್ಲಿ ಹರಡಿತು. ಮತ್ತೊಂದು ಸಲ ಭಗವಾನ್ ವಿಷ್ಣು ಬೇಸರದಿಂದ ಸೀನಿದ. ಅದು **ಸುಂಟರಗಾಳಿ**ಯಾಯಿತು. ಮತ್ತೊಂದು ಸಲ ದೀರ್ಘವಾಗಿ ಆಕಳಿಸಿದ. ಅದು **ಬಿರುಗಾಳಿ**ಯಾಯಿತು. ಹಾಗೆಯೇ ಆಯಾಸ ಪರಿಹರಿಸಿಕೊಳ್ಳುತ್ತಾ ಒಂದು ಸಲ ಕೆಮ್ಮಿದ. ಅದರಿಂದ **ದೆವ್ವದ ಗಾಳಿ** ಸೃಷ್ಟಿಯಾಯಿತು' ಎಂದು ವಕ್ತೃ ಶ್ರೀಮತಿ ಲಕ್ಷ್ಮೀದೇವಮ್ಮ ಅಗ್ರಹಾರ ಹೇಳುತ್ತಾರೆ. ಈ ರೀತಿಯ ಐತಿಹ್ಯಗಳ ಪ್ರಸ್ತಾಪಗಳನ್ನು ಜನಪದ ವಿದ್ವಾಂಸ ಅಂಬಳಿಕೆ ಹಿರಿಯಣ್ಣನವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಪ್ರಾಚೀನ ವೈದಿಕ ಮತ್ತು ದ್ರಾವಿಡ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಈ ತಾಲ್ಲೂಕಿನ ಪ್ರದೇಶದಲ್ಲಿ ಗ್ರಾಮ ದೈವಗಳ ಬಗ್ಗೆ ಅನೇಕ ಕುತೂಹಲಕಾರಿ ಐತಿಹ್ಯಗಳಿವೆ. ಸಾಮಾಜಿಕ, ಧಾರ್ಮಿಕ ನಂಬಿಕೆಗಳ ಹಿನ್ನೆಲೆಯಲ್ಲಿ ಅನೇಕ ಸ್ತ್ರೀ -ಪುರುಷ ಗ್ರಾಮದೈವಗಳನ್ನು ಆರಾಧಿಸುವ ಊರು -ಕುಟುಂಬಗಳಿವೆ. ಗ್ರಾಮದೈವಗಳು ಹುಟ್ಟಿಕೊಂಡ ರೀತಿ ಮತ್ತು ಅವುಗಳನ್ನು ಆರಾಧಿಸುವ ಸಂಪ್ರದಾಯದ ಹಿಂದೆ ಅನೇಕ ಕುತೂಹಲಕಾರಿ ಐತಿಹ್ಯಗಳಿವೆ.

ಜನಪದೀಯರ ಹಬ್ಬದಲ್ಲಿ ಮಾರಿಜಾತ್ರೆಯ ಆಚರಣೆಯ ಐತಿಹ್ಯ

ಧಾರ್ಮಿಕ ಕಾರಣಗಳು :

ಭಾರತೀಯ ಪೂಜಾ ಸಂಪ್ರದಾಯದಲ್ಲಿ ಪ್ರಾಚೀನ ದ್ರಾವಿಡ ಸಂಸ್ಕೃತಿಯಿಂದ ಇಂದಿನವರೆಗೂ ಮಹತ್ವವನ್ನು ಪಡೆದುಕೊಂಡಿರುವ ಆರಾಧನಾ ಪರಂಪರೆ ಎಂದರೆ ಮಾರಿಜಾತ್ರೆ. ತೀರ್ಥಹಳ್ಳಿ ಪ್ರದೇಶದಲ್ಲಿಯೂ ಕೂಡ ಈ ಪರಂಪರೆಯನ್ನು ಅವ್ಯಾಹತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ದೇವಿಯ ಆರಾಧನೆಯ ಹಿಂದೆ ವಿಸ್ತಾರವಾದ ಐತಿಹ್ಯದ ಕಥೆ ಹೀಗಿದೆ.

ಮಾರಮ್ಮ ಎನ್ನುವುದು ಅಮ್ಮ-ತಾಯಿಯ ಕಲ್ಪನೆಯಾಗಿದೆ. ಇದು ಮಾನವನ ಹುಟ್ಟಿನೊಂದಿಗೆ ಬೆಳೆದು ಬಂದಿದೆ. ಇಡೀ ಜಗತ್ತೇ ಒಬ್ಬ ತಾಯಿಯ ಗರ್ಭದಿಂದಲೇ ಹುಟ್ಟಿ ಬೆಳೆದಿದೆ ಎಂದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಕಾರಣ ಜಗತ್ತಿನಲ್ಲಿರುವ ಪ್ರತಿಯೊಂದು ಧರ್ಮಗಳ ಮೊದಲ ಹಂತದಿಂದಲೇ ಒಬ್ಬ ತಾಯಿಯಿಂದ ಬೆಳೆದಿದೆ ಎನ್ನುವ ಭಾವನೆ ಸಾರ್ವತ್ರಿಕವಾಗಿ ಮೂಡಿದೆ.

ಜನಪದರ ಹಿಂದೂ ಧಾರ್ಮಿಕ ಚೌಕಟ್ಟಿನಲ್ಲಿರುವ ಅನೇಕ ರೀತಿ -ನೀತಿಗಳನ್ನು ಒಪ್ಪಿಕೊಂಡಿದ್ದಾರೆ. ಆದರೂ ಹಲವಾರು ವಿಷಯಗಳಲ್ಲಿ ತನ್ನದೇ ಆದ ರೂಪಗಳನ್ನು ಅಳವಡಿಸಿಕೊಂಡಿದ್ದಾರೆ. ಬ್ರಾಹ್ಮಣ ಧಾರ್ಮಿಕ ಚೌಕಟ್ಟುಗಳು ಉತ್ತರದಿಂದ ದಕ್ಷಿಣಕ್ಕೆ ಹರಿದು ಬಂದಿವೆ. ಅವುಗಳ ಪ್ರಭಾವವು ದ್ರಾವಿಡ ಧರ್ಮದ ಮೇಲೆ ಭಾರೀ ಪ್ರಮಾಣದಲ್ಲಿ ಪರಿಣಾಮವನ್ನುಂಟು ಮಾಡಿವೆ.

ನಿಸರ್ಗದ ವೈಚಿತ್ರ್ಯಗಳು, ಪ್ರಕೋಪಗಳು ಆದಿಮಾನವನ ಮನಸ್ಸಿನಲ್ಲಿ ಭಯದ ಬೀಜವನ್ನು ಬಿತ್ತಿದವು. ಆತಂಕ, ತಲ್ಲಣಗಳಿಗೆ ಗುರಿ ಮಾಡಿದವು. ಅಘೋಚರವಾದ ಶಕ್ತಿಗಳಿಂದ ಸಂಭವಿಸುತ್ತಿದ್ದ ಸಾವು -ನೋವುಗಳು, ಹಾನಿಗಳು, ಉಪದ್ರವಗಳನ್ನು ಅವನನ್ನು ಕಂಗೆಡಿಸಿದವು. ವೈಚಾರಿಕತೆ ಎಂದರೇನೆಂಬುದನ್ನು ತಿಳಿಯದ ಆದಿ ಮಾನವನು ಕೇವಲ ಭಯದಿಂದ, ತನ್ನಲ್ಲಿ ಅಂಜಿಕೆಯನ್ನುಂಟು ಮಾಡಿದ್ದ ನಿಸರ್ಗವನ್ನೇ ತಾಯಿಯಾಗಿ ಕಾಪಾಡು

ಎಂದು ಪೂಜಿಲಾರಂಭಿಸಿದನು. ತಾಯಿಯನ್ನು ಒಲಿಸಿಕೊಳ್ಳುವ ಸಲುವಾಗಿ ಪೂಜಿಸಿದನು. ಬಲಿ ಇತ್ಯಾದಿಗಳಿಂದ ಸಂತುಷ್ಟಗೊಳಿಸಲು ಯತ್ನಿಸಿದನು. ಆತಂಕಕಾರಿಯೂ, ಲಯ ಸ್ವರೂಪಿಣಿಯೂ ಆದ ನಿಸರ್ಗ ದೇವತೆಯನ್ನು ತನಗನ್ನಿಸಿದ ನಾನಾ ಹೆಸರುಗಳಿಂದ ಕೂಗಿ ಕರೆದು ಅವಳ ಪ್ರೀತ್ಯರ್ಥವಾಗಿ ನಾನಾ ವಿಧವಾದ ಸೇವೆಗಳನ್ನು ಕೈಗೊಂಡನು. ಹೀಗೆ ಮನುಷ್ಯ ಸಂಸ್ಕೃತಿಯ ವಿಕಾಸದ ಪ್ರಾಥಮಿಕ ಹಂತದಲ್ಲಿ ಆದಿಮಾನವನ ಭಯದ ಕಾರಣದಿಂದ ರೂಪುಗೊಂಡ ಭಕ್ತಿಯೇ ವ್ಯಕ್ತರೂಪವನ್ನು ಪಡೆದುಕೊಂಡು ಮಾತೃದೇವತಾ ಆರಾಧನೆಗೆ ಎಡೆಮಾಡಿಕೊಟ್ಟಿತು.

ಮಾತೃದೇವತಾ ಉಪಾಸನೆ ಅತ್ಯಂತ ಪ್ರಾಚೀನವಾದುದು. ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲಿಯೂ ಕಂಡುಬರುವ ಸಾರ್ವತ್ರಿಕ ಆರಾಧನೆಯಿದು. ಭಾರತದಲ್ಲಿ ಸಿಂಧೂ ಕೊಳ್ಳದ ಸಂಸ್ಕೃತಿಯ ಕಾಲದಿಂದಲೂ ಮಾತೃದೇವತಾರಾಧನೆ ಒಂದಲ್ಲ ಒಂದು ರೀತಿಯಲ್ಲಿ ಉಳಿದು ಬೆಳೆದುಕೊಂಡು ಬಂದಿದೆ. ಮಾತೃದೇವತೆಯನ್ನು ''ಅಮ್ಮ '' ಎಂದು ಕರೆದು ಸಮೃದ್ಧ ಮಳೆ ಬೆಳೆಗಾಗಿ, ಸಾಂಕ್ರಾಮಿಕ ರೋಗರುಜಿನಗಳ ಪರಿಹಾರಕ್ಕಾಗಿ ಅಮ್ಮನಿಗೆ ಶರಣಾಗಿ ಜಾತ್ರೆ ಉತ್ಸವಗಳನ್ನು ಮಾಡಿ ಆರಾಧಿಸುವುದು ಅನೂಚಾನವಾಗಿ ನಡೆದುಬಂದಿತು. ಅಮ್ಮ ಭೂಮಿ ಬೇಸಾಯಕ್ಕೆ, ಮರಗಿಡಗಳಿಗೆ ನೀರಿಗೆ, ಬೆಟ್ಟಗುಡ್ಡ ಕಾಡುಮೇಡುಗಳಿಗೆ ಸಂರಕ್ಷಣೆ ದೇವತೆ ಎನಿಸಿಕೊಂಡಳು. ವೈದಿಕರು ಅನ್ನಪೂರ್ಣೆ, ಬನಶಂಕರಿ, ಶಾಕಾಂಬರಿ ಮೊದಲಾದ ಹೆಸರುಗಳಿಂದ ಕರೆದು ಪೂಜಿಸಲಾರಂಭಿಸಿದರು. ಆರ್ಯ ದ್ರಾವಿಡರೆಂಬ ಭೇದವಿಲ್ಲದೆ ಎಲ್ಲರ ಅಮ್ಮ ಎನಿಸಿಕೊಂಡಳು.

ಜನರು ತಮ್ಮ ತೊಂದರೆಗಳ ನಿವಾರಣೆಗಾಗಿ ಅಘೋಚರವಾಗಿದ್ದ ಅಮ್ಮನನ್ನು ತಮಗೆ ಸರಿತೋರಿದ ರೂಪಗಳಲ್ಲಿ ಕಾಣಲಾರಂಭಿಸಿದರು. ಮರ, ಕಲ್ಲುಗಳನ್ನು ಅಮ್ಮನೆಂದು ಪೂಜಿಸುತ್ತಿದ್ದ ಜನ ಸಂಸ್ಕೃತಿ ವಿಕಾಸವಾಗುತ್ತಾ ಬಂದಂತೆಲ್ಲ ಕಾಷ್ಠಶಿಲ್ಪ, ಲೋಹಶಿಲ್ಪ , ಶಿಲಾ ವಿಗ್ರಹಗಳ ರೂಪದಲ್ಲಿ ಸ್ಮಾರಕಗಳನ್ನು ನಿರ್ಮಿಸಿ ಬಂಡಿ, ತೇರು, ಜಾತ್ರೆಗಳನ್ನು ಆರಾಧನೆಯ ಅಂಗಗಳನ್ನಾಗಿಸಿದರು. ಭೂ ಸಂಪತ್ತು, ಜಲಸಂಪತ್ತು, ಸಸ್ಯ ಸಂಪತ್ತು, ಕೃಷಿ ಇತ್ಯಾದಿಗಳೊಂದಿಗೆ ಅಮ್ಮನ ನಿಕಟ ಸಂಬಂಧವನ್ನು ಗುರುತಿಸಲಾರಂಭಿಸಿದ ಜನಪದರು ಗಂಗಮ್ಮ, ಮರದಮ್ಮ, ಎಲ್ಲಮ್ಮ, ದುರ್ಗಮ್ಮ, ಚೌಡಮ್ಮ, ಕಾಳಮ್ಮ, ಬಿಸಿಲಮ್ಮ,

ಮಾಯಮ್ಮ, ಮರಕೆಯಮ್ಮ, ಬೇವಿನಮರದಮ್ಮ , ಗೋಣಿಮರದಮ್ಮ ಇತ್ಯಾದಿ ಹೆಸರುಗಳಿಂದ ಕರೆಯಲಾರಂಭಿಸಿದರು. ಹೀಗೆ ಮಾರಮ್ಮ ಇಡೀ ದಕ್ಷಿಣ ಭಾರತದ ಅತ್ಯಂತ ಪ್ರಬಲ ಶಕ್ತಿಯಾಗಿ ಮಾರ್ಪಟ್ಟಳು. ಮಾರಮ್ಮ ವೃಕ್ಷದೇವತೆ, ಸಂತಾನದೇವತೆ, ಪುರಾಣ ದೇವತೆ, ಜನಾಂಗ ದೇವತೆ, ರೋಗ ನಿವಾರಣಾ ದೇವತೆಯಾಗಿ ಕಂಗೊಳಿಸಲು ಆರಂಭಿಸಿದಳು.

ಮಾರಮ್ಮನ ಬೆಳವಣಿಗೆಯ ಸ್ವರೂಪವನ್ನು ಡಾ॥ ಅರವಿಂದ ಮಾಲಗತ್ತಿಯವರು ಐದು ಹಂತಗಳಲ್ಲಿ ಗುರುತಿಸಿದ್ದಾರೆ.

ವೃಕ್ಷದೇವತೆಯಾಗಿ

ಸಂತಾನ ಪ್ರಾಪ್ತಿಯ ದೇವತೆಯಾಗಿ

ಪುರಾಣ ದೇವತೆಯಾಗಿ

ರೋಗನಿವಾರಣಾ ದೇವತೆಯಾಗಿ

ಸಂಕೀರ್ಣ, ವ್ಯಕ್ತಿತ್ವದ ದೇವತೆಯಾಗಿ [6]

ಮಾರಿಜಾತ್ರೆಯ ಆಚರಣೆ ಆರಾಧನಾ ವಿಧಿಗಳ ಸಾಂಸ್ಕೃತಿಕ ವಿಧಾನಗಳು

ಗ್ರಾಮೀಣ ಬದುಕಿನಲ್ಲಿ ಮಾರಿಹಬ್ಬಕ್ಕೆ ವಿಶಿಷ್ಟವಾದ ಸ್ಥಾನವಿದೆ. ಈ ಹಬ್ಬದಲ್ಲಿ ಶುಚಿತ್ವಕ್ಕೆ ಹೆಚ್ಚು ಪ್ರಾಧಾನ್ಯತೆ. ಮುಟ್ಟುಚಿಟ್ಟು ಏನಾದರೂ ಆದರೆ ಮಾರಮ್ಮ ಕೋಪಗೊಳ್ಳುತ್ತಾಳೆಂಬ ಭಯಮೂಲ ನಂಬಿಕೆ ಇದೆ. ಹಬ್ಬ ಸಾರಿದ ಮೇಲೆ ಊರಿನಲ್ಲಿ ಯಾರೂ ಮಾಂಸಮಡ್ಡಿ ಮಾಡುವಂತಿಲ್ಲ, ಮೆಣಸಿನಕಾಯಿ ಸುಟ್ಟ ವಾಸನೆ ಬರಕೂಡದು. ಎಕ್ಕಡ ಹಾಕಿಕೊಂಡು ಯಾರೂ ಊರಲ್ಲಿ ತಿರುಗಾಡುವಂತಿಲ್ಲ. ಪರ ಊರಿನವರು ಬರುವಂತಿಲ್ಲ, ಬಂದರೆ ಹಬ್ಬ ಮುರಿಯುವವರೆಗೆ ಹೋಗುವಂತಿಲ್ಲ, ಮಾರಮ್ಮನಿಗೆ ಆರತಿ ಮಾಡುವುದು, ಮೀಸಲು ನೀರು ತರುವುದು, ಕೊಂಡ ಹಾಯುವುದು, ಸಿಡಿ ಆಡುವುದು ಇವೆಲ್ಲವೂ ತುಂಬಾ ಭಯಭಕ್ತಿಯಿಂದ ಮಡಿಯಲ್ಲಿ ನಡೆಯುತ್ತವೆ. ಆದರೀಗ ಇಂತಹ ನಂಬಿಕೆಗಳಲ್ಲಿ ಸಡಿಲಿಕೆಗಳು ಉಂಟಾಗಿವೆ.

ಮಾರಮ್ಮನ ಜಾತ್ರೆಯನ್ನು ಇಂತಹ ದಿನದಂದೇ ಆಚರಿಸಬೇಕೆಂಬ ನಿಯಮಗಳೇನೂ ಇಲ್ಲ. ಸಾಮಾನ್ಯವಾಗಿ ಸುಗ್ಗಿಯ ನಂತರ ರೈತಾಪಿ ಜನರಿಗೆ ಸಿಗುವ ಬಿಡುವಿನ ಬೇಸಿಗೆ ದಿನಗಳಲ್ಲಿ ಹಬ್ಬ ಆಚರಿಸುವುದು ರೂಢಿ. ಮಾರಮ್ಮನ ಭಕ್ತಾದಿಗಳೆಲ್ಲರೂ ಒಟ್ಟಾಗಿ ಸೇರಿ ದಿನ ನಿಗದಿ ಮಾಡಿ ಮಾರನೆಯ ಮಂಗಳವಾರದಂದು ಮಾರಿ ಸಾರುತ್ತಾರೆ. ಎರಡನೆಯ ಮಂಗಳವಾರ ಮಾರಮ್ಮನ ಹೆಸರಿನಲ್ಲಿ ಪಟ್ಟದ ಕೋಣವನ್ನು ಬಿಡುತ್ತಾರೆ. ಮಾರನೆಯ ಮಂಗಳವಾರದಂದು ಜಾತ್ರೆ ಆರಂಭವಾಗುವುದು. ಮಾರಿ ಹಬ್ಬ ಸಾರುವುದರಿಂದ ಹಿಡಿದು ಮುಕ್ತಾಯಗೊಳ್ಳುವವರೆಗೂ ಊರಿನಲ್ಲಿ ಎಲ್ಲಿಲ್ಲದ ಸಡಗರ, ಸಂಭ್ರಮದ ವಾತಾವರಣ ಕಂಡುಬರುತ್ತದೆ. ಮಾರಮ್ಮನ ಒಕ್ಕಲು ಮನೆತನಗಳಾದ ಮಾದಿಗರು, ಚಲವಾದಿಗಳು ಹಬ್ಬದ ಆರಂಭದಿಂದ ಅಂತ್ಯದವರೆಗೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಮಾರಿಜಾತ್ರೆ ಸಾರಿದ ಎರಡನೆಯ ಮಂಗಳವಾರ ನೊಗಕ್ಕೆ ಕಟ್ಟಿದ ಕೋಣವೊಂದನ್ನು ಪೂಜಿಸಿ ಪಾದ ತೊಳೆದು ಅರಿಶಿನ ಕಂಕುಮಗಳನ್ನಿಟ್ಟು ಕೊರಳಿಗೆ ಕೆಂಪು ಕಣಿಗಲೆ ಹೂವು ಮತ್ತು ಬೇವಿನ ಸೊಪ್ಪಿನ ಹಾರಹಾಕಿ ಪಟ್ಟಕ್ಕೆ ಬಿಡುತ್ತಾರೆ. ಸಾಮಾನ್ಯವಾಗಿ ಇಂತಹ ಕೋಣಕ್ಕೆ ಬಿಳಿಯಬಾಲ ಹಣೆಯ ಮೇಲೆ ಬಿಳಿಯ ಗುರುತಿರಬೇಕು. ಐತಿಹ್ಯದ ಪ್ರಕಾರ ಈ ಕೋಣವೇ ಮಾರಮ್ಮನ ಗಂಡ. ಮಾರಮ್ಮ ತನ್ನ ಪತಿಯನ್ನು ಸಂಹರಿಸಿದ ಮೇರೆಗೆ ಈ ಕೋಣದ ಬಲಿ ನಡೆಯುತ್ತದೆ.

ಮೂರನೆಯ ಮಂಗಳವಾರದಂದು ಜಾತ್ರೆ ಪ್ರಾರಂಭವಾಗುತ್ತದೆ. ಈ ದಿನದಂದು ಮಾರಮ್ಮನಿಗೆ ದೃಷ್ಟಿಮರಿ, ಬಾನದಮರಿ, ಪಟ್ಟದಕೋಣ, ಇವು ಮೂರು ಬಲಿಯಾಗುತ್ತವೆ. ಮೊದಲಿಗೆ ಮಾರಮ್ಮನ ಕಣ್ಣು ತೆರೆಸುವ ಆಚರಣೆ. ದೇವರಿಗೆ ಜೀವಕಳೆ ತಿದ್ದಿದರೂ ಕೂಡಾ ಕಣ್ಣಿಗೆ ದೃಷ್ಟಿಬೊಟ್ಟು ಹಾಕಿರುವುದಿಲ್ಲ. ಉಗ್ರ ದೇವತೆಯ ಕಣ್ಣಿಗೆ ಮೊದಲು ಬೀಳಬಾರದೆನ್ನುವ ನಂಬಿಕೆ ದೃಷ್ಟಿಮರಿಬಲಿಯ ಹಿನ್ನಲೆಯಲ್ಲಿದೆ. ಅದಕ್ಕಾಗಿ ದೇವಸ್ಥಾನದ ಮುಂಭಾಗದಲ್ಲಿರುವ ಬಲಿಗಂಬದ ಬಳಿ ಮೇಕೆಯೊಂದನ್ನು ಅಮ್ಮನಿಗೆ ನೇರವಾಗಿ ಕಾಣುವಂತೆ ನಿಲ್ಲಿಸಿ, ಅಮ್ಮನಿಗೆ ಪೂಜಾರರು ದೃಷ್ಟಿಬೊಟ್ಟನ್ನಿರಿಸಿದ ಕೂಡಲೇ ಅಡ್ಡ ಪರದೆ ತೆಗೆಯುತ್ತಾರೆ. ಕೂಡಲೇ ದೃಷ್ಟಿಮರಿಯನ್ನು ಬಲಿ ಕೊಡುತ್ತಾರೆ. ದೃಷ್ಟಿಬೊಟ್ಟನ್ನಿರಿಸುವುದು, ಪರದೆ ಸರಿಸುವುದು, ಮರಿಬಲಿ ಕೊಡುವುದು ಇವೆರಡೂ ತಕ್ಷಣದಲ್ಲಿಯೇ ಸಂಭವಿಸುತ್ತವೆ.

ಬಲಿಯಾಗುವ ಮರಿಯನ್ನು 'ಕಣ್ಣು ತೆರೆಸೋ ' ಮರಿ ಎಂದೂ ಕರೆಯುವರು.

ಮಾರಮ್ಮನ ಜಾತ್ರೆಯ ನೇತೃತ್ವವನ್ನು ವಹಿಸಿಕೊಂಡು ಊರಿನ ಮುಖ್ಯಸ್ಥರಾದ ಗೌಡರ ಮನೆಯವರು ಅಂದು ಉಪವಾಸವಿದ್ದು ನಿಯಮ ನಿಷ್ಠೆಗಳಿಂದ ಮಾಡಿದ ಬಾನವನ್ನು ಹೊರಿಸಿಕೊಂಡು ಮೆರವಣಿಗೆ ದೇವರನ್ನು ಇಳಿಸಿರುವ ಜಾಗಕ್ಕೆ ತರುತ್ತಾರೆ. ಬಾನ ಹೊತ್ತು ತಂದವರು ಮಾರಮ್ಮನ ದೇವಸ್ಥಾನವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ ಮಡಿ ಬಟ್ಟೆಯ ಮೇಲೆ ಬಾನ ಹರಡುತ್ತಾರೆ. (ಬಾನ ಎಂದರೆ ಭೋಜನ /ಅನ್ನ ಎಂದರ್ಥ) ಮಡಿವಾಳರು ಅದರಲ್ಲಿ ಸ್ವಲ್ಪ ಅನ್ನ ತೆಗೆದುಕೊಂಡು ಬಾಳೆ ಹಣ್ಣಿನೊಂದಿಗೆ ಚೆನ್ನಾಗಿ ಕಲೆಸಿ ಐದು ಕಡುಬುಗಳನ್ನು ಮಾಡಿ ಬೇವಿನ ಸೊಪ್ಪಿನ ಮೇಲೆ ಇಡುತ್ತಾರೆ. ಬಾನಕ್ಕೆ ಪೂಜೆ ಸಲ್ಲಿಸಿಯಾದ ಮೇಲೆ ಅದರ ಮುಂದೆ ಮೇಕೆ ಮರಿಯೊಂದನ್ನು ಬಲಿಯನ್ನಾಗಿ ಕೊಡುವರು. ಇದನ್ನು 'ಬಾನದಮರಿ ' ಎಂದು ಕರೆಯುವುದು ರೂಢಿ.

ಬಾನದ ಮರಿಯ ಬಲಿಯಾದ ನಂತರ ಪಟ್ಟದ ಕೋಣವನ್ನು ಬಲಿಗಂಬದ ಬಳಿ ತಂದು ಅಮ್ಮನಿಗೆ ಪೂಜೆ ಮಾಡಿ ತೀರ್ಥತಂದು ಕೋಣದ ತಲೆಯ ಮೇಲೆರಚಿ ಅಮ್ಮನ ಭಂಡಾರವನ್ನು ಕೋಣದ ಹಣೆಗೆ ಹಚ್ಚುತ್ತಾರೆ. ಅನಂತರ ಸೇರಿದ ಭಕ್ತಾದಿಗಳೆಲ್ಲರ ಸಮ್ಮತಿಯ ಮೇರೆಗೆ ಪಟ್ಟದ ಕೋಣವನ್ನು ಬಲಿಕೊಡುತ್ತಾರೆ. ಬಲಿಯಾದ ನಂತರ ಕೋಣನ ಬಾಯಿಗೆ ಅಮ್ಮನ ತೀರ್ಥ ಬಿಡುತ್ತಾರೆ. ಪಟ್ಟದ ಕೋಣವನ್ನು ಬೆಳಗಿನ ಜಾವ ಕೋಳಿ ಕೂಗುವ ಮುನ್ನ ಬಲಿ ಕೊಡುತ್ತಾರೆ.

ಬುಧವಾರ ಬೆಳಿಗ್ಗೆ ಅಮ್ಮನಿಗೆ ಆರತಿ, ತಂಪು, ತಂಬಿಟ್ಟಿನಾರತಿ ಮಾಡಿಕೊಂಡು ಬೇವಿನ ಸೊಪ್ಪನ್ನು ತಟ್ಟೆಯಲ್ಲಿರಿಸಿಕೊಂಡು ದೇವಸ್ಥಾನಕ್ಕೆ ಕೊಂಡೊಯ್ದು ಪೂಜೆ ಸಲ್ಲಿಸುತ್ತಾರೆ. ಹರಕೆ ಸೇವೆಗಳೆಲ್ಲವೂ ಬುಧವಾರದಂದು ನಡೆಯುತ್ತವೆ. ಈ ದಿನ ಬಲಿ ಇರುವುದಿಲ್ಲ, ತಮ್ಮ ತೊಂದರೆಗಳು, ರೋಗಗಳ ನಿವಾರಣೆಗಾಗಿ ಬೇವಿನುಡುಗೆ, ಹೂವಿನ ಸೀರೆ, ಪಟ್ಟೆ ಸೀರೆ ಇತ್ಯಾದಿ ಹರಕೆಗಳನ್ನು ಅಮ್ಮನಿಗೆ ಸಲ್ಲಿಸುತ್ತಾರೆ.

ಗಂಡಸರು ಸೊಂಟದಿಂದ ಕೆಳಕ್ಕೆ ಹೆಂಗಸರು ಎದೆ ಮಟ್ಟದವರೆಗೆ ಬೇವಿನ ಸೊಪ್ಪನ್ನು ಮೈತುಂಬಾ ಧರಿಸಿ ತಲೆಯ ಮೇಲೆ ತಂಬಿಟ್ಟಿನ ಆರತಿಗಳನ್ನು ಹೊತ್ತು ತಂದು ಹರಕೆ

ಸಲ್ಲಿಸುತ್ತಾರೆ. ಬಾಯಿ ಬೀಗ ಚುಚ್ಚಿಸಿಕೊಳ್ಳುವ ಹರಕೆ ಹೊತ್ತವರು ವಿಶಿಷ್ಟವಾದ ತಂತಿಯಿಂದ ಕೆನ್ನೆಗಳ ಮಧ್ಯ ಭಾಗಕ್ಕೆ ಚುಚ್ಚಿಸಿಕೊಳ್ಳುತ್ತಾರೆ. ಆ ದಿನ ಅವರು ಯಾರೊಡನೆಯೂ ಮಾತನಾಡದೆ ಮೌನವ್ರತ, ಉಪವಾಸ ವ್ರತಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಬಾಯಿಬೀಗ ಚುಚ್ಚಿಸಿಕೊಂಡು ದೇವಸ್ಥಾನಕ್ಕೆ ಬಂದು ಅಮ್ಮನವರಿಗೆ ಪೂಜೆ ಸಲ್ಲಿಸಿದ ನಂತರ ಬಾಯಿಬೇಗ ತೆಗೆದು ತಂತಿಯನ್ನು ಚುಚ್ಚಿದ್ದ ಜಾಗಕ್ಕೆ ಅಮ್ಮನ ಭಂಡಾರವನ್ನು ಪೂಜಾರಿ ಹಚ್ಚುತ್ತಾನೆ.

ಬುಧವಾರದಂದು ರಾತ್ರಿ ಮಾರಮ್ಮನ ಕೆಂಡ. ಸುತ್ತೇಳು ಹಳ್ಳಿ ಜನರೆಲ್ಲರೂ ಶಕ್ತ್ಯಾನುಸಾರ ತಂತಮ್ಮ ಮನೆಗಳಿಂದ ಕೆಂಡಕ್ಕೆ ಸೌದೆ ತಂದು ಒಟ್ಟುತ್ತಾರೆ. ಗುಡಿಯ ಮುಂದೂ ಬಯಲಿನಲ್ಲಿ ತೋಡಿದ ಉದ್ದನಿಯ ಗುಂಡಿಯಲ್ಲಿ ಸೌದೆ ಸೇರಿಸಿ, ಬೆಂಕಿ ಹಚ್ಚಿಕೊಂಡು ಸಿದ್ಧಪಡಿಸುತ್ತಾರೆ. ಧಗಧಗನೆಂದು ಉರಿಯುವ ಬೆಂಕಿ ನಿಗಿನಿಗಿಸುವ ಕೆಂಡಗಳನ್ನು ಸೃಷ್ಟಿಸುತ್ತದೆ. ಇಂತಹ ಕೆಂಡದ ಮೇಲೆ ದೇವರನ್ನು ಹಿಂಬಾಲಿಸಿ ಹರಕೆ ಹೊತ್ತವರು ಬರಿಗಾಲಲ್ಲಿ ನಡೆಯುತ್ತಾರೆ.

ಗುರುವಾರ ಅಮ್ಮನ ಸಿಡಿ. ಸಿಡಿ ಎನ್ನುವುದು ಮಾರಮ್ಮನಿಗೆ ಸಲ್ಲಿಸುವ ಸೇವೆ. ಏಣಿ ಎನ್ನುವ ಅರ್ಥವೂ ಉಂಟು. ಸಿಡಿಯಾಡುವವರ ಹಿಮ್ಮಡಿಯ ನರಗಳಿಗೆ, ಇಲ್ಲವೆ ಬೆನ್ನಿನ ಚರ್ಮಕ್ಕೆ ಕಬ್ಬಿಣಕ್ಕೆ ಕೊಕ್ಕೆಯನ್ನು ಚುಚ್ಚಿ ಸಿಡಿಗಂಬದ ಮೇಲೆ ಇರಿಸುವರು. ಮೊದಲಿಗೆ ರೂಢಿಯಲ್ಲಿದ್ದ ಈ ಸಂಪ್ರದಾಯ ಈಗ ಬದಲಾಗಿದ್ದು ಸಿಡಿಕಂಬಕ್ಕೆ ತೊಟ್ಟಿಲುಗಳನ್ನು ಕಟ್ಟಿ ಅದರಲ್ಲಿ ಹರಕೆ ಹೊತ್ತವರು ಕುಳಿತುಕೊಳ್ಳುತ್ತಾರೆ. ಆಗ ಸಿಡಿ ಕಂಬವನ್ನು ಸುತ್ತುತ್ತ ಇರುವರು. ಮಾನವೀಯ ಸಂಬಂಧ -ಸಂಘರ್ಷ, ದೈವಿಕತೆ, ಕ್ರೌರ್ಯ, ಭಯಂಕರತೆ ಹಾಗೂ ಪ್ರತಿಭಟನೆಗಳ ಸಂಕೇತವಾಗಿ ಮಾರಮ್ಮನ ಜಾತ್ರೆಯ ಕೆಂಡದಲ್ಲಿ ಕಾಣಬಹುದು. ಇಂತಹ ಜಾತ್ರೆಗಳು ತಲೆಮಾರಿನಿಂದ ತಲೆಮಾರಿನವರೆಗೆ ಪರಂಪರಾಗತವಾಗಿ ಹರಿದು ಬಂದಿರುವುದು ಅವುಗಳಲ್ಲಿರುವ ಸತ್ಯಕ್ಕೆ ಸಾಕ್ಷಿಯಾಗಿದೆ. ಕೃಷಿಯಿಂದ ಜೀವನ ಸಾಗಿಸುವ ಜನರಿಗೆ ಆಸರಿಕೆ ಬೇಸರಿಕೆ ನೀಗಲು, ನೆಮ್ಮದಿ ಪಡೆಯಲು, ಬಂಧು-ಬಾಂಧವರು ಹಂಚುಣ್ಣಲು ಇಂತಹ ಜಾತ್ರೆಗಳು ಅವಶ್ಯಕ. ಬಗೆಬಗೆಯ ಹಾಡು, ಕುಣಿತ, ದೇವತೆಗಳ ಮುಖವಾಡಗಳು ಮನಸ್ಸಿಗೆ ಆನಂದ ಕೊಡುತ್ತವೆ.

ಜನಪದರಲ್ಲಿ ಮಾರಿಜಾತ್ರೆಯ ಐತಿಹ್ಯಗಳು

ಗ್ರಾಮದೇವತೆಯಾದ ಮಾರಿದೇವತೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಐತಿಹ್ಯಗಳೇ ಪ್ರಮುಖ ಆಧಾರಗಳಾಗಿವೆ. ಈ ದೇವತೆಯನ್ನು ಕುರಿತಂತೆ ಶಿಲಾಶಾಸನಗಳಲ್ಲಾಗಲಿ, ಸಾಹಿತ್ಯ ಕೃತಿಗಳಲ್ಲಾಗಲಿ ಉಲ್ಲೇಖಗೊಂಡಿರುವುದಿಲ್ಲ. ನಾವು ಮಾರಿದೇವತೆಯ ಮಹಿಮೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಪುರಾಣ, ಇತಿಹಾಸಗಳ ಆಶ್ರಯ ಹೋಗಬೇಕಾಗುತ್ತದೆ. ಜನಪದರ ಚರಿತ್ರೆಯನ್ನು ಹುಡುಕುವುದಕ್ಕೆ ಐತಿಹ್ಯಗಳೇ ಪ್ರಮುಖ ಆಧಾರಗಳಾಗಿವೆ. ಐತಿಹ್ಯಗಳು ಕಟ್ಟುಕಥೆಯಲ್ಲ , ಜನಪದರ ಜೀವನ ವೃತ್ತಾಂತಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ಐತಿಹ್ಯ ಎನ್ನುವುದು ಪುರಾತನವಾದದ್ದು, ಪ್ರಾಚೀನವಾದದ್ದು ಎಂಬ ಅರ್ಥಗಳನ್ನು ಪಡೆದುಕೊಂಡಿದೆ. ಆದಿಮಾನವರು ತಾನು ಬದುಕುತ್ತಿದ್ದ ಪರಿಸರದ ಸುತ್ತಮುತ್ತಲಿನ ಪ್ರಾಣಿಪಕ್ಷಿಗಳ ಬಗ್ಗೆ ಕಾಲ್ಪನಿಕ ಕಥೆಯನ್ನು ಕಟ್ಟಿಕೊಂಡಿದ್ದನು. ಅವನಿಗೆ ವಾಸಿಸುವುದಕ್ಕೆ ಆಶ್ರಯ ನೀಡಿರುವ ಕಲ್ಲಿನ ಗುಹೆ, ಮರದ ಪೊಟರೆಗಳನ್ನು ಪೂಜ್ಯಭಾವನೆಯಿಂದ ಕಂಡನು. ವ್ಯಕ್ತಿಗಳ, ದೈವಗಳ, ಮಹಿಮೆ ಮತ್ತು ಪವಾಡಗಳ ಹಾಗೂ ಸಾಂಸ್ಕೃತಿಕ ನಾಯಕರುಗಳ ಕಥೆಗಳಿವೆ. ಜನಪದರು ಇವುಗಳನ್ನು ಧಾರ್ಮಿಕ ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ವಿವರಿಸಿ ಕಥಾನಕಗಳಾಗಿ ಕಾರ್ಯನಿರ್ವಹಿಸುತ್ತವೆ.

ಜಗತ್ತು ಯಾಕೆ ಹೀಗಿದೆ. ಸೃಷ್ಟಿಯ ಹಿನ್ನೆಲೆ ಏನು ? ಧರ್ಮ, ದೇವರು, ಮನಷ್ಯ ಇವುಗಳ ಬಗ್ಗೆ ಇರುವ ಸಹಜ ಕುತೂಹಲಗಳೇ ಐತಿಹ್ಯಗಳಿಗೆ ಉತ್ತರಗಳಾಗಿವೆ. ಇವೆಲ್ಲವೂ ದೇವತೆಗಳ ಹುಟ್ಟು, ಮಹಿಮೆ, ಪವಾಡಗಳ ಬಗ್ಗೆ ತಿಳಿಸುತ್ತವೆ.

ಮಾರಿಜಾತ್ರೆಯಲ್ಲಿ ಮಾರಮ್ಮನ ವಾರಸುದಾರರಾದ ಅಸಾದಿಗಳು ದೀರ್ಘವಾದ ಐತಿಹ್ಯದ ಕಥೆಯನ್ನು ಹೇಳುತ್ತಾರೆ. ಹಲಗೆಯ ವಾದ್ಯವನ್ನು ಬಡಿಯುತ್ತ ಹೇಳುವುದು ಚಂಪೂ ಸ್ವರೂಪವನ್ನು ಪಡೆದುಕೊಂಡಿದೆ. ಮಾರಿ ಬಗ್ಗೆ ಇರುವ ಮಹಿಮೆ ಮತ್ತು ಸ್ವರೂಪವನ್ನು ತಿಳಿಸುವುದು ಐತಿಹ್ಯದ ಮುಖ್ಯ ಆಶಯವಾಗಿದೆ. ದೇವಿ ಐತಿಹ್ಯ ಸೃಷ್ಟಿಯಾಗುವುದಕ್ಕೆ ಮುಂಚೆ ಸಹಸ್ರಾರು ವರ್ಷಗಳಿಂದ ನಡೆದ ಸಾಮಾಜಿಕ ಘಟನೆಗಳನ್ನು ಜನಪದರು ಐತಿಹ್ಯದ ಮೂಲಕ ತಿಳಿಸಿರುವುದನ್ನು ಗಮನಿಸಬಹುದು.

ಜನಪದ ಐತಿಹ್ಯ ಮಾರಿ ಬಗ್ಗೆ ಇರುವ ಅನೇಕ ಬಗೆಯ ಸ್ವರೂಪದ ಚಿತ್ರಣವನ್ನು ನೀಡುತ್ತದೆ. ಅದರಲ್ಲಿ ಪ್ರಮುಖವಾದುದೆಂದರೆ : ಶೂದ್ರನೆಂದು ತಿಳಿಯದೆ ಮದುವೆಯಾಗಿ ಮಕ್ಕಳನ್ನು ಪಡೆದಿದ್ದ ಬ್ರಾಹ್ಮಣ ಯುವತಿ ಒಮ್ಮೆ ಹಿತ್ತಲಿನಲ್ಲಿ ಬಾಳೆಪಟ್ಟೆಯಿಂದ ಎಕ್ಕಡ ಹೊಲೆಯುತ್ತಿರುವ ಮಗನನ್ನು ನೋಡುತ್ತಾಳೆ. ಆಶ್ಚರ್ಯ, ಅನುಮಾನ, ಜಿಗುಪ್ಸೆಗಳಿಂದ ಮಗನನ್ನು ವಿಚಾರಿಸಿದಾಗ, ಅಪ್ಪಾ ದಿನ ಮಾಡುವುದು ಇದೇ ಕೆಲಸ. ನಾನು ಅದನ್ನೇ ಕಲಿಯುತ್ತಿದ್ದೇನೆ ಎನ್ನುತ್ತಾನೆ. ಹೀಗಾಗಿ ತನ್ನ ಗಂಡ ಮೆಟ್ಟು ಹೊಲೆಯುವ ಜಾತಿಗೆ ಸೇರಿದವನೆಂದು ತಿಳಿಯುತ್ತದೆ. ಮೋಸದಿಂದ ತಾನು ಜಾತಿ ಭ್ರಷ್ಟಳಾದ ಬಗ್ಗೆ ಕೋಪಗೊಂಡ ತಾಯಿ ಮಗನನ್ನು ಹಿಡಿದು ಬಡಿಯುತ್ತಾಳೆ. ತಾಯಿಯ ರೌದ್ರವತಾರಕ್ಕೆ ಹೆದರಿದ ಮಗನು ತಪ್ಪಿಸಿಕೊಂಡು ಓಡುತ್ತಾನೆ. ಕೂಡಲೇ ಕಲ್ಲೊಂದನ್ನು ತೆಗೆದು ಅವನಿಗೆ ಹೊಡೆಯುತ್ತಾಳೆ. ಅದು ಹುಡುಗನ ತಲೆಗೆ ಬಡಿಯುತ್ತದೆ. ತಲೆಯೊಡೆದು ರಕ್ತ ಸೋರುತ್ತಿದ್ದರೂ ಪ್ರಾಣಭಯದಿಂದ ತಪ್ಪಿಸಿಕೊಳ್ಳುತ್ತಾನೆ. ಇದೇ ಆವೇಶದಿಂದ ಗಂಡನನ್ನು ಹುಡುಕುತ್ತಾ ಬರುತ್ತಾಳೆ. ಗಂಡನು ಇವಳ ಆವೇಶವನ್ನು ನೋಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆದರಿದ ತಲೆ, ಉರಿಗಣ್ಣು ಹೀಗೆ ಭಯಂಕರ ರೂಪವನ್ನು ತಾಳಿ ಎಲ್ಲಿ ಹೋದರೂ ಬಿಡದಂತೆ ಬೆನ್ನಟ್ಟುತ್ತಾಳೆ. ದಾರಿ ಕಾಣದ ಗಂಡ ಕೋಣನ ಹೊಟ್ಟೆಯೊಳಗೆ ಸೇರಿಬಿಡುತ್ತಾನೆ. ತನಗೆ ಆದ ಅವಮಾನ, ದುಃಖ, ನಿರಾಸೆಗಳಿಂದ ಮಾರಿ ಊರಿಗೆ ಹಿಂದಿರುಗುವುದಿಲ್ಲ. ಕಾಡಿನಿಂದ ಆವೃತ್ತಗೊಂಡಿದ್ದ ತೀರ್ಥಹಳ್ಳಿ ಪ್ರದೇಶದಲ್ಲಿ ಮಾರಿ ರೂಪವನ್ನು ತಾಳಿ ನೆಲೆಗೊಂಡಿರುವುದನ್ನು ಸ್ಥಳೀಯ ಐತಿಹ್ಯ ತಿಳಿಸುತ್ತದೆ. ಉದಾಹರಣೆಗೆ ಶ್ರೀಮಾರಿಕಾಂಬಾ ಕ್ಷೇತ್ರ ತೀರ್ಥಹಳ್ಳಿ, ಶ್ರೀ ಮಾರಿಕಾಂಬಾ ದೇವಸ್ಥಾನ, ಕವಲೇದುರ್ಗ, ಶ್ರೀ ಮಾರಿಕಾಂಬಾ ದೇವಾಲಯ ಆರಗ, ಶ್ರೀ ಮಾರಿಕಾಂಬಾ ದೇವಳ ಅಲುಗೊಳ್ಳಿ, ಮಾರಿಯಮ್ಮ ಬನ ಕೆಸಲೂರು, ಮಾರಿಕಾ ಬನ ಬುಕ್ಲಾಪುರ ಇಲ್ಲಿರುವ ಮಾರಿ ದೇವತೆಯ ಆರಾಧನೆಯನ್ನು ಸ್ಮರಿಸಬಹುದು.

ಈ ಐತಿಹ್ಯದ ಅಂತರ್ಯವನ್ನು ಗಮನಿಸಿದಾಗ ವೈದಿಕ ಜನಾಂಗದ ಸ್ತ್ರೀಯರನ್ನು ಕೆಳ ಜಾತಿಯವರಾದ ಆದಿ ಕರ್ನಾಟಕದವರು (ಹರಿಜನರು) ಮದುವೆಯಾಗಬಾರದೆಂದು ನಿರ್ಬಂಧವಿತ್ತು. ಅಂದಿನ ಕಾಲದಲ್ಲಿ ಮೇಲ್ವರ್ಗದವರು ಕೆಲಜಾತಿಯ ಸ್ತ್ರೀಯರನ್ನು ಮದುವೆಯಾಗಬಹುದಿತ್ತು. ಆದರೆ ಕೆಳಜಾತಿಯವರು ಮೇಲ್ವರ್ಗದ ಸ್ತ್ರೀಯರನ್ನು

ಮದುವೆಯಾಗು ವಂತಿದ್ದಿಲ್ಲ. ಕನಿಷ್ಠರು ಉತ್ತಮರ ಹೆಣ್ಣನ್ನು ವಿವಾಹವಾಗುವುದು ಮಹಾಪರಾಧವೆಂದು ಪರಿಗಣಿತವಾಗಿದೆ. ಇಂತಹ ಎಲ್ಲಾ ವಿಚಾರಗಳನ್ನು ಗಮನಿಸಿದರೆ ಕೆಳವರ್ಗದ ಜನಾಂಗ ತನ್ನ ವಿರುದ್ಧವಾದ ಅನಿಸಿಕೆಗಳಿಗೆ ಪ್ರತಿಭಟಿಸುತ್ತಾ ಬರುತ್ತಿದೆ. ತಮ್ಮೆಲ್ಲಾ ಆಸೆ, ಆಕಾಂಕ್ಷೆ, ಸ್ವಾತಂತ್ರ್ಯಜೀವನ, ಸಮಾನತೆ, ದ್ವೇಷ, ಕ್ರೌರ್ಯಗಳಿಗೆ ಸ್ಪಂದಿಸುತ್ತ ಮೇಲ್ವರ್ಗದ ಜನಾಂಗಗಳೊಡನೆ ಸಂಘರ್ಷಿಸುತ್ತಾ ಬರುತ್ತಿರುವುದನ್ನು ಜಾತ್ರೆಯಲ್ಲಿ ನಡೆಯುವ ಆಚರಣೆಗಳ ಮೂಲಕ ಗುರುತಿಸಬಹುದು.

ಎನ್.ಆರ್.ನಾಯಕ್‌ರವರು ಹೇಳುವಂತೆ :

''ವೇದಾಧ್ಯಯನವನ್ನು ಶೂದ್ರಾತಿಶೂದ್ರರಿಗೆ ನಿಷೇಧಿಸಿದ್ದ ಕಾಲದಲ್ಲಿ ಉತ್ಸಾಹಿ ಹೊಲೆಯರ ಹುಡುಗನೊಬ್ಬ ವಿದ್ಯೆ ವೇದವನ್ನು ಕಲಿತು ಪಾಂಡಿತ್ಯವನ್ನು ಪಡೆಯಲು ಆಶಿಸಿದ. ಆದರೆ ಹೆಂಗಸರು ಶೂದ್ರಾದಿಗಳು ವೇದ ವಿದ್ಯೆಯನ್ನು ಕಲಿಯಲು ಅವಕಾಶ ವಿಲ್ಲದಾಗ ಪಂಚಮನಿಗೆ ದೊರಕುವುದು ಹೇಗೆ ! ಆದರೆ ಜ್ಞಾನದಾಯಿಯಾದ ಹೊಲೆಯರ ಹುಡುಗ ವೇದಾಧ್ಯಯವನ್ನು ಪಡೆಯಬೇಕೆಂದು ಒಬ್ಬ ಬ್ರಾಹ್ಮಂವಟುವೇಷ ವನ್ನು ತೊಟ್ಟು ಬ್ರಾಹ್ಮಣ ಗುರುವನ್ನು ಆಶ್ರಯಿಸಿ. ಅಧ್ಯಯನ ಮಾಡಿ ವೇದ ಪಾರಂಗತನಾದವನು. ಹೊಲೆಯರ ಹುಡುಗನ ಚುರುಕು ಬುದ್ಧಿಗೆ ಸ್ತೋತ ಗುರು ಬ್ರಾಹ್ಮಣನೆಂದೇ ನಂಬಿ ಅವನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ. ಮಕ್ಕಳೂ ಆದರು.

ಹೊಲೆಯರ ಯುವಕ ತನ್ನ ಜೀವನ ನಿರ್ವಹಣೆ ಮಾಡಲು ಮೆಟ್ಟು ಹೊಲಿಯುವ ತನ್ನ ಕುಲಕಸುಬನ್ನು ಹೆಂಡತಿಗೆ ತಿಳಿಯದೆ ಮಾಡುವುದರ ಜೊತೆಗೆ ತನ್ನ ಪೂರ್ವದ ಮಾಂಸ ಸೇವನೆಯ ಚಟವನ್ನು ಹೊಂದಿದ್ದು , ತನ್ನ ಮಕ್ಕಳಿಗೂ ಅದರ ರೂಢಿ ಮಾಡಿಸಿದ್ದ. ಒಮ್ಮೆ ಆತನ ಮಗ ಊಟವನ್ನು ಮಾಡುವಾಗ ಪದಾರ್ಥದಲ್ಲಿಯ ಕುಂಬಳಕಾಯಿಯ ಹೋಳನ್ನು ನೋಡಿ ಇದು ಯಾವ ಮಾಂಸದ ಹೋಳಮ್ಮ ! ಎಂದು ಪ್ರಶ್ನಿಸಿದಾಗ, ಗಂಡನ ವಿಷಯದಲ್ಲಿ ಹೆಂಡತಿ ಅನುಮಾನಿಸಿ, ಗಂಡನ ಚಲನವಲನಗಳನ್ನು ರಹಸ್ಯವಾಗಿ ಪರೀಕ್ಷಿಸಿ ಹೊಲೆತನದ ಹೆಜ್ಜೆ ಕಂಡು ಕೆರಳಿದಳು. ಆಗ ತಂದೆಯಲ್ಲಿಗೆ ಬಂದು ನಾಯಿ ಮುಟ್ಟಿದ ಗಡಿಗೆಯನ್ನು ಏನು ಮಾಡಬೇಕೆಂದಾಗ ಅದನನ್ನು ಸುಟ್ಟು

ಶುದ್ಧಿಗೊಳಿಸು ಎನ್ನುತ್ತಾನೆ. ಆಗ ನಾರಿ ತನ್ನನ್ನು ಸುಟ್ಟುಕೊಳ್ಳುವ ನಿರ್ಧಾರಕ್ಕೆ ಬಂದು, ಮನೆಗೆ ಹಿಂದಿರುಗಿದಳು. ತನ್ನ ಈವರೆಗಿನ ಮುಗ್ಧತೆಯನ್ನು, ಸ್ನೇಹಮಯ ನಾರಿತನವನ್ನು ಮರೆತು, ಮುನಿದು ಮಾರಿಯಾದಳು. ರಾತ್ರಿ ವೇಳೆ ಎಲ್ಲರೂ ಮಲಗಿದ್ದಾಗ ಮನೆಗೆ ಕಿಚ್ಚಿಟ್ಟಳು. ಗಂಡ, ಮಗ ಓಡುತ್ತಿರುವಾಗ ಬೆನ್ನಟ್ಟಿದಳು. ಆಗ ಗಂಡ ತಾನು ಕಲಿತ ಪರಕಾಯ ಪ್ರವೇಶ ವಿದ್ಯೆ ಬಳಸಿ ಹೆಂಡತಿಯ ಕೈಯಿಂದ ತಪ್ಪಿಸಿಕೊಳ್ಳಲು ಕೋಳಿ, ಕುರಿ, ಹಂದಿ, ಕೋಣ ಬೇರೆ ರೂಪಗಳನ್ನು ತಾಳಿದರೂ ಆಕೆ ಈ ಎಲ್ಲಾ ರೂಪಗಳಲ್ಲಿ ಅವನನ್ನು ಸಂಹರಿಸಿ ಚಿತೆಗೆಸೆಯುತ್ತಾಳೆ. ಗಂಡ ಹೆಂಡಿರಲ್ಲಿ ಈ ಬಗೆಯ ಉಗ್ರ ಸೆಣಸಾಟ ನಡೆದಾಗ ಕಂಗೆಟ್ಟು ಮಕ್ಕಳು ಎಲ್ಲೆಲ್ಲೋ ಓಡಿ ತಲೆ ಮರೆಸಿಕೊಂಡರು. ಮಹಾಮಾರಿ ಸ್ವರೂಪದ ಈ ನಾರಿ, ಗಂಡನ ಚಿತೆಗೇರಿ ತಾನೂ ಸಾವೈದಿದಳು. ಹೀಗೆ ದೇಹ ಬಲಿದಾನ ಮಾಡಿದ ನಾರಿಯೇ ಮತ್ತೆ ತನಗೆ ಶರಣಾದವರನ್ನು ಕಾಪಾಡುವ ಅಮ್ಮನಾಗಿ, ಸೊಕ್ಕೇರಿ ಮೆರೆಯುವ ಶಿಷ್ಟಪೀಡಕರಿಗೆ, ಭೂತ ಪಿಶಾಚಿಗಳಿಗೆ, ಭಕ್ತರನ್ನು ಕಾಡುವ ರೋಗರುಜಿನಗಳಿಗೆ, ಕಾಡುವ ಮಾರಿಯೂ ಆಗಿ ಅವತರಿಸಿ ಮಾರಿಕಾಂಬೆಯೆನಿಸಿಕೊಂಡಳು "[7] ಎಂದು ಅಭಿಪ್ರಾಯಪಡುತ್ತಾರೆ

ಹೀಗೆ ಮಾರಿಜಾತ್ರೆಯ ವಿಧಿಗಳು ವೈಶಿಷ್ಟ್ಯಪೂರ್ಣವಾದವುಗಳಾಗಿವೆ. ಜಾತ್ರೆಯ ಆಚರಣೆಗಳಲ್ಲಿ ಯಾವುದೋ ಕಾಲಕ್ಕೆ ಘಟಿಸಿರಬಹುದಾದ ವರ್ಣ ಸಂಕರದ ಘಟನೆ, ಅದರ ಅಪರಾಧ, ಶಿಕ್ಷೆಯ ಸ್ವರೂಪ ಮುಂತಾದವನ್ನು ತಳಕು ಹಾಕಿ, ಆ ಹೋರಾಟದಲ್ಲಿ ಸತಿಯಿಂದ ಹತನಾದ ಪತಿ, ಮಡಿದು ಮಹಾಸತಿಯಾದ ಹೆಂಡತಿ ಈ ಮುಂತಾದ ಘಟನೆಗಳ ಆಚರಣೆ ಕಂಡರೂ ಮುಖ್ಯವಾಗಿ ಕೃಷಿ ಸಮೃದ್ಧಿಯ, ಅಮ್ಮನ ಲೈಂಗಿಕ ಶಕ್ತಿಯ ಸಮೃದ್ಧಿಯನ್ನೇ ಅವಲಂಭಿಸಿವೆ ಎಂಬ ಆದಿವಾಸಿಗಳ ನಂಬಿಕೆಯ ಹಿನ್ನೆಲೆಯಲ್ಲಿ ಮಾರಿ ಅಮ್ಮನ ಮದುವೆ ಮಾಡಿಸುವ, ಅವಳು ಮಕ್ಕಳನ್ನು ಹೆರುವ ಕಥೆಯನ್ನು ಕಟ್ಟಿದಂತಿದೆ. ಭೂಮಿ ತಾಯಿಯು ಫಲವತಿಯಾಗಬೇಕಾದರೆ, ಅವಳ ಮದುವೆಯಾಗುವುದು ಅಗತ್ಯ. ಅದಕ್ಕಾಗಿ ಅವಳಿಗೊಬ್ಬ ಪತಿ ಬೇಕು. ಆದಿಯಲ್ಲಿ ಹೊಲದ ವ್ಯವಸಾಯವನ್ನು ಮಾಡಿ ಹೊಲದ ಒಡೆಯರಾದವರು ಹೊಲೆಯರೇ ಆಗಿರಬೇಕೆಂಬ ಊಹೆಗಳಿವೆ. ಈ ಊಹೆಗೆ ಆಧಾರಗಳು ಇವೆ. ಅದಕ್ಕಾಗಿಯೇ ಭೂಮಿತಾಯಿಯ ಜೊತೆಗೆ ಅಭೇದ ಸಂಬಂಧವುಳ್ಳ ಮಾರಿಕಾಂಬೆಯ ಜೊತೆಗೆ ಹೊಲೆಯನ ಸಂಬಂಧ ಕಲ್ಪಿಸಿದ್ದಿರಬೇಕು. ಮುಂದೆ ಹೊಲೆಯನ

ಬಲಿಯಾಗಿ ಅವನಿಂದ ಭೂ ಸ್ವಾಮಿತ್ವವೇ ಹೋಗಿದ್ದುದರ ಸಂಕೇತವಾಗಿ ಕೋಣನ ಬಲಿ ಪ್ರಚಲಿತವಾಯಿತು. ಹೀಗೆ ಭೂಮಿಕ ನಾಗ, ವೃಕ್ಷ, ಮಾಸ್ತಿ, ಸ್ತ್ರೀಶಕ್ತಿಗಳಲ್ಲಿ ನೆಲೆಸಿರುವ ಮಾತೃದೇವತೆಯ ಕಲ್ಪನೆಯ, ವಿಕಾಸದ ಹಲವು ಮಜಲುಗಳನ್ನು ಮಾರಿಮಾತ್ರೆಯ ಆಚರನೆಯ ವಿಧಿಯ ಹಿನ್ನೆಲೆಯಲ್ಲಿ ಗುರುತಿಸಬಹುದು. ಭಾರತೀಯ ಸಂಸ್ಕೃತಿ, ಆದಿ ದ್ರಾವಿಡ, ದ್ರಾವಿಡ ಹಾಗೂ ಆರ್ಯ ಸಂಸ್ಕೃತಿಗಳ ಕಲಸುಮೇಲೋಗರವಾಗಿರುವುದನ್ನು ಮಾರಿಕಾಂಬೆಯ ಜಾತ್ರೆ ನಿಚ್ಚಳಗೊಳಿಸುತ್ತದೆ.

ಮಾರಿದೇವತೆಯ ಆರಾಧನೆಯ ಬಗೆಗಿರುವ ಜಾನಪದರ ನಂಬಿಕೆಯ ಬಗ್ಗೆ ಜಾನಪದ ತಜ್ಞ ಡಾ.ಎಂ.ಎಂ. ಕಲ್ಬುರ್ಗಿ ಹೇಳುವಂತೆ –

> '' ಈಕೆ ಮೂಲತಃ ಒಬ್ಬ ಬ್ರಾಹ್ಮಣ ಕನ್ಯೆ. ಸಮಗಾರ (ಚಪ್ಪಲಿ ಹೊಲಿಯುವವ) ವ್ಯಕ್ತಿಯೊಬ್ಬ ತಾನು ಬ್ರಾಹ್ಮಣನೆಂದು ನಟಿಸಿ, ಇವಳನ್ನು ಮದುವೆಯಾದ. ಒಂದು ಮಗುವೂ ಹುಟ್ಟಿತು. ಹಗಲು ಹೆಂಡತಿಯಿಂದ ದೂರ ಹೋಗಿ ಚಪ್ಪಲಿ ಹೊಲಿದು ಹಣ ಗಳಿಸಿಕೊಂಡು ಬರುವುದು ಇವನ ಕೆಲಸ. ಒಂದು ದಿನ ಜೊತೆ ಬರುವುದಾಗಿ ಹಠ ಹಿಡಿದ ಮಗುವನ್ನು ಕರೆದುಕೊಂಡು ಹೋದ. ತಿರುಗಿ ಬರುವಾಗ ಮಗು ಕಿಸೆಯಲ್ಲಿ ಚರ್ಮದ ತುಂಡು ತಂದಿತು. ಇದನ್ನು ಗಮನಿಸಿ ಕ್ರುದ್ಧಳಾದ ತಾಯಿ, ನಿಜ ಸಂಗತಿ ತಿಳಿದುಕೊಂಡು ಮೂಲೆಯಲ್ಲಿದ್ದ ಕುಡಗೋಲು ಕೈಗೆತ್ತಿಕೊಳ್ಳುತ್ತಲೇ ಗಂಡ ಓಡಿಹೋದ. ಪಾಪದ ಪಿಂಡವಾದ ಮಗುವನ್ನು ಕೊಲ್ಲಬೇಕೆನ್ನುವಷ್ಟರಲ್ಲಿ ಆತ ಕುರಿಯ ಒಡಲು ಸೇರಿದ. ತಾಯಿ ಕುರಿಯ ರುಂಡ ಕತ್ತರಿಸಿ ಗಂಡನನ್ನು ಬೆನ್ನಟ್ಟಿದಳು. ಗುಂಡ ಓಡಿಹೋಗಿ ಕೋಣನ ಶರೀರ ಸೇರಿದ ; ಹೆಂಡತಿ ಕೋಣನ ತಲೆ ಕತ್ತರಿಸಿ ಸಮಾಧಾನಪಟ್ಟಳು. ಮಾರಮ್ಮನ ವಿಷಯವಾಗಿ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಈ ಕಥೆ ಎಲ್ಲ ಕಡೆಗೂ ಸಿಗುತ್ತದೆ. ''ಮಾರಮ್ಮ ಬ್ರಾಹ್ಮಣತಿ, ಅವಳ ಪ್ರಿಯತಮ ಸಮಗಾರ '' ಎಂಬ ಅಂಶ ಅಲ್ಲೆಲ್ಲ ಕಡ್ಡಾಯವಾಗಿ ಬರುವ ಆಶಯವಾಗಿದೆ. ಇಂದಿಗೂ ಜಾತ್ರೆ ಸಂದರ್ಭದಲ್ಲಿ ಕಡಿದ ಕೋಣದ ರುಂಡವನ್ನು ಮಾರಿಕಾಂಬೆಯ ಬಲಕ್ಕೆ ಇಟ್ಟು, ಇದು ಅವಳ ಗಂಡನೆಂದು ಜನ ಹೇಳುತ್ತಾರೆ. ಹಾವೇರಿ ತಾಲ್ಲೂಕಿನ ಬಲಗಚ್ಚಿ ಗ್ರಾಮದಲ್ಲಿ ಉಡಚವ್ವ ದೇವಿಯ ಮುಂದೆ ಮುಂಜಾನೆ ಕೋಣವನ್ನು ಕಡಿದ ತಕ್ಷಣ ಅವಳ ಬಳೆ

> ಒಡೆಯುತ್ತಾರೆ ; ತಾಳಿ ತೆಗೆಯುತ್ತಾರೆ. ಸಾಯಂಕಾಲ ಮುಂದಿನ ವರ್ಷ ಕಡಿಯಲು ನಿಶ್ಚಯಿಸಿದ ಹೊಸಕಕೋಣವನ್ನು ದೇವಾಲಯಕ್ಕೆ ತಂದ ಬಳಿಕ, ಬಳೆ ತೊಡಿಸುತ್ತಾಳೆ. ಕೋಣದ ರುಂಡವನ್ನು ಬಲಕ್ಕೆ ಇಡುವುದು, ಬಳೆ -ತಾಳಿ ತೊಡಿಸುತ್ತಾಳೆ. ಕೋಣದ ರುಂಡವನ್ನು ಬಲಕ್ಕೆ ಇಡುವುದು, ಬಳೆ -ತಾಳಿ ತೆಗೆಯುವುದು ಇವರು ಗಂಡಹೆಂಡಿರೆಂಬುದರ ಸೂಚನೆಯಾಗಿವೆಯೆಂದು ಬೇರೆ ಹೇಳಬೇಕಿಲ್ಲ ''[8]

ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಮಾರಿಕಾಂಬೆಯ ಐತಿಹ್ಯವನ್ನು ಸಮಾಜ ಸಾಂಸ್ಕೃತಿಕ ನೆಲೆಯಲ್ಲಿ ಹಾಗೂ ದಲಿತ ಜನಾಂಗದ ಸಾಂಸ್ಕೃತಿಕ ಅಧ್ಯಯನದ ನೆಲೆಯಲ್ಲಿ ಚರ್ಚಿಸಬೇಕಾದ ಸಾಧ್ಯತೆಗಳು ಹೆಚ್ಚಾಗಿವೆಂದು ಹೇಳಬಹುದಾಗಿದೆ.

ಈ ಪ್ರದೇಶ ಬಹುತೇಕ ಗ್ರಾಮೀಣ ಪ್ರದೇಶವೇ ಆಗಿರುವುದರಿಂದ ದಟ್ಟ ಕಾನನದ ನಡುವೆ ಊರಿಗೊಂದು ಮನೆ, ಮನೆಗೊಂದು ದೇವತೆ. ಮನೆಯವರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸುವ ಜವಾಬ್ದಾರಿ ಈ ದೇವತೆಯದು. ಮನೆದೇವರಿಗೆ ನಡೆದುಕೊಂಡರೆ ತಮ್ಮ ಬೇಡಿಕೆಗಳು ಈಡೇರುತ್ತವೆ ; ತೊಂದರೆ, ತಾಪತ್ರಯಗಳು ದೂರಾಗುತ್ತವೆ ; ಆಯುರಾರೋಗ್ಯ ಭಾಗ್ಯ ಲಭಿಸುತ್ತದೆ ಎಂಬ ನಂಬಿಕೆ ಈ ಜನರಲ್ಲಿ ಬಲವಾಗಿ ಬೇರೂರಿದೆ.

ತುಳಸಿ ಪೂಜೆಗಿರುವ ಧಾರ್ಮಿಕ ಐತಿಹ್ಯ

ವೈದಿಕ ಸಂಸ್ಕೃತಿಯ ಹಿನ್ನೆಲೆಯುಳ್ಳ ಈ ಪ್ರದೇಶದಲ್ಲಿ ಪ್ರತಿಯೊಂದು ಮನೆಗೂ ತುಳಸಿ (ಬೃಂದಾವನ) ಇರುತ್ತದೆ. ತುಳಸಿಗೆ ಪೂಜೆ ಸಲ್ಲಿಸುವುದರೊಂದಿಗೆ ದೈನಂದಿನ ಚಟುವಟಿಕೆಗಳು ಆರಂಭವಾಗುತ್ತದೆ. ತುಳಸಿಗೆ ಪೂಜೆಯನ್ನು ಸಲ್ಲಿಸಿ ಪ್ರದಕ್ಷಿಣೆ ಹಾಕುವುದು ಆರೋಗ್ಯದ ದೃಷ್ಟಿಯಿಂದಲೂ ಹಿತಕರ ಎಂಬುದು ನಿರ್ವಿವಾದ. ಗಿಡ, ದೇವತೆಗಳ ಆರಾಧನೆ ಈ ಪ್ರದೇಶಗಳಲ್ಲಿ ಬಹುತೇಕ ಚಾಲ್ತಿಯಲ್ಲಿದೆ. ಪರೋಕ್ಷವಾಗಿ ಪರಿಸರ ಸಂರಕ್ಷಣೆ ಇಲ್ಲಿಯ ಮುಖ್ಯ ಉದ್ದೇಶವೆಂಬುದು ಕಂಡುಬರುತ್ತದೆ. ಕುಲದೈವಗಳ ಉಗಮ ಮತ್ತು ಅವು ಸ್ಥಾಪನೆಗೊಂಡ ಬಗೆಗೆ ಜನಪದರಲ್ಲಿ ಇರುವ ಐತಿಹ್ಯಗಳು ದಕ್ಷಿಣ ಭಾರತದ ಒಕ್ಕಲುತನ ಸಮಾಜಗಳ ಗ್ರಾಮದೇವತೆಗಳ ಸೃಷ್ಟಿಯ ಐತಿಹ್ಯಗಳ ಆಶಯವನ್ನೇ ಹೊಂದಿವೆ. ಆದರೆ, ಐತಿಹಾಸಿಕ ಸಂದರ್ಭಗಳೊಂದಿಗೆ ಈ ಐತಿಹ್ಯಗಳು ಸೇರಿ ಒಂದಾಗಿರುವ

ದಾಖಲೆಗಳು ಇಲ್ಲ. ಗ್ರಾಮದೈವಗಳ ಸಮೂಹ ಅನಂತರ ಸೇರಿಕೊಂಡಿವೆ ಎಂಬುದು ನಿರ್ವಿವಾದ. ವೈದಿಕ ಪುರಾಣದಲ್ಲಿ ಸಾಲಿಗ್ರಾಮ ಕಲ್ಲುಗಳು ಮಹಾವಿಷ್ಣುವಿನ ಪ್ರತೀಕ. ವೈಷ್ಣವ ಸಂಪ್ರದಾಯದ ಹಿನ್ನಲೆಯುಳ್ಳವರು ಇದನ್ನು ಪವಿತ್ರವೆಂದು ಭಾವಿಸಿದ್ದಾರೆ. ವೈಷ್ಣವ ಆರಾಧಕ ಎಲ್ಲಾ ಸಮುದಾಯಗಳಲ್ಲೂ ಸಾಲಿಗ್ರಾಮ ಕಲ್ಲಿನ ಬೃಂದಾವನವಿರುತ್ತದೆ (ತುಲಸಿ). ಆ ಬೃಂದಾವನದಲ್ಲಿ ತುಳಸಿ ಗಿಡವನ್ನು ಬೆಳೆಸಿ ಪೂಜಿಸುತ್ತಾರೆ. ತುಳಸಿ ತಿರುಪತಿಯ ವೆಂಕಟೇಶ್ವರನ ಪತ್ನಿ. ಆದ್ದರಿಂದ ವೆಂಕಟೇಶ್ವರನೊಂದಿಗೆ ತುಳಸಿಯನ್ನು ಪೂಜಿಸುವ ಪರಿಪಾಠ ಈಗಲೂ ಈ ಭಾಗದಲ್ಲಿದೆ. ಗೃಹ ಪ್ರವೇಶದ ಸಂದರ್ಭದಲ್ಲಿ ಪುರೋಹಿತರಿಂದ ಹೊಸ ತುಳಸಿಕಟ್ಟೆಯ ಸ್ಥಾಪನೆ ಮಾಡಲಾಗುತ್ತದೆ. ತುಳಸೀಕಟ್ಟೆ ಹಲವು ಮನೆಗಳಲ್ಲಿ ಮನೆಯ ಒಳಾಂಗಣದಲ್ಲಿ ನಿರ್ಮಾಣಗೊಂಡಿರುತ್ತವೆ. ಒಳಾಂಗಣದಲ್ಲಿ ನಿರ್ಮಿಸುವುದಕ್ಕೆ ಒಂದು ಪ್ರಬಲ ಕಾರಣವಿದೆ. ಸಾಮಾಜಿಕವಾಗಿ ಕೆಳಜಾತಿಯ ಜನರು ಮನೆಯ ಆವರಣಕ್ಕೆ ಬಂದು ಹೋಗುವುದರಿಂದ ತುಳಸಿಗೆ ಮೈಲಿಗೆಯಾಗುತ್ತದೆಂಬ ಆತಂಕ. ಚಪ್ಪರಗಳದಲ್ಲಿ ನಿರ್ಮಾಣಗೊಂಡ ಕಟ್ಟೆಗಳೂ ಈ ಮೈಲಿಗೆ ಭಯದಿಂದ ಮುಕ್ತವಾಗಿಲ್ಲ. ಈ ಕಾರಣಕ್ಕಾಗಿ ಯಾವಾಗಲೂ ಕೆಳ ಜಾತಿಯ ಜನರು ಕಟ್ಟೆಗೆ ದೂರದಲ್ಲಿ ನಿಂತು ವ್ಯವಹರಿಸುತ್ತಾರೆ. ಈ ಜನ ತುಳಸಿಕಟ್ಟೆಗೆ ಮೈಲಿಗೆ ಮಾಡಿದ್ದರೆ ಕಟ್ಟೆಗೆ ಪಂಚಗವ್ಯ (ಗೋಮಾಯ) ಹಾಕಿಸಿ 'ಶುದ್ಧ ' ಮಾಡಿಸುವರು.

ಪ್ರತೀ ಮನೆಯ ಮುಂಭಾಗದಲ್ಲಿ ಧಾರ್ಮಿಕ ಹಿನ್ನೆಲೆಯಿಂದ ತುಲಸಿಯನ್ನು ನಿರ್ಮಾಣ ಮಾಡಿ, ಪ್ರತೀ ನಿತ್ಯವೂ ಪೂಜಿಸುವುದರ ಹಿಂದೆ ವೈಜ್ಞಾನಿಕ ಕಾರಣವೂ ಇದೆ. ಆಯುರ್ವೇದದ ಹಿನ್ನೆಲೆಯಲ್ಲಿ ತುಳಸಿ ಒಂದು ಅತ್ಯುತ್ತಮವಾದ ಔಷಧ ಗುಣವುಳ್ಳ ಗಿಡಮೂಲಿಕೆ. ಇದರ ಸುವಾಸನೆ ಹರಡುವ ವಾತಾವರಣದ ಗಾಳಿ ಸೇವನೆಯಿಂದ ಉಸಿರಾಟದ ತೊಂದರೆಯಿಂದ ಬಳಲುವಿಕೆ ದೂರವಾಗುತ್ತದೆ ಮತ್ತು ಮನೆಯ ವಾತಾವರಣದಲ್ಲಿ ಇದರ ಕಂಪು ಹರಡಿರುವಾಗ ಬ್ಯಾಕ್ಟೀರಿಯಾಗಳು ಆ ವಾತಾವರಣದಲ್ಲಿ ನಾಶವಾಗುತ್ತವೆ ಎಂದು ವೈದ್ಯ ಕ್ಷೇತ್ರದಿಂದಲೇ ನಿರೂಪಿಸಲ್ಪಟ್ಟಿದೆ. ವ್ಯಕ್ತಿ ಮರಣ ಸಂದರ್ಭ ದಲ್ಲಿ ತುಳಸಿ ಎಲೆಯ ನೀರನ್ನು ಅವನಿಗೆ ಕುಡಿಸುವುದು ಧಾರ್ಮಿಕ ಹಿನ್ನೆಲೆಯ ಆಚರಣೆ ಯಾದರೂ, ಔಷಧ ಗುಣವುಳ್ಳ ತುಳಸಿ ಎಲೆಯ ನೀರು ಸಾಯುವ ಕ್ಷಣದಲ್ಲಿರುವ ವ್ಯಕ್ತಿಯ ದೇಹದೊಳಗೆ ಹೋದಾಗ ಮೃತದೇಹ ಕೆಡದಂತೆ ಇರುತ್ತದೆ ಎನ್ನುವುದು ವಾಸ್ತವ ಸಂಗತಿ.

ಮಾಸ್ತಿಯಮ್ಮ ಸ್ಥಾಪನೆ ಮತ್ತು ಆರಾಧನೆ

ಮಹಾಸತಿ ಎಂಬುದರ ರೂಪಾಂತರವೇ ಮಾಸ್ತಿ. ಹೆಣ್ಣೊಬ್ಬಳು ಸಂಸಾರದ ಹಿತಕ್ಕಾಗಿ ಅಥವಾ ಊರಿನ ಹಿತಕ್ಕಾಗಿ ಬಲಿದಾನ ಮಾಡಿದ, ಯುದ್ಧದಲ್ಲಿ ಮಡಿದ ತನ್ನ ಗಂಡನ ಶವದೊಂದಿಗೆ ತಾನೂ ಚಿತೆಗೇರುವ ಕಥೆ ಈ ಆರಾಧನೆಯು ಹಿಂದಿರುವ ಐತಿಹ್ಯ ಭಾಗದ ಅನೇಕ ಕಡೆ ಪ್ರಚಲಿತದಲ್ಲಿದೆ. ಈ ಐತಿಹ್ಯ ಹೀಗಿದೆ 'ಒಂದೂರಿನಲ್ಲಿ ಒಬ್ಬ ಗೌಡನಿದ್ದನು. ಅವನಿಗೆ ಒಬ್ಬಳು ಹೆಂಡತಿ ಇದ್ದಳು. ಪರಸ್ಪರ ಅನ್ಯೋನ್ಯ ಸಂಸಾರವನ್ನು ಸಾಗಿಸಿಕೊಂಡು ಸಂತೋಷದಲ್ಲಿದ್ದರು. ಒಂದು ದಿನ ಗೌಡನಿಗೆ ಸೈನ್ಯದಿಂದ ತುರ್ತಾಗಿ ಯುದ್ಧಕ್ಕಾಗಿ ಕರೆ ಬಂದಿತು. ಅನಿವಾರ್ಯವಾಗಿ ಹೆಂಡತಿಯನ್ನು ಅಗಲುವ ಸಂದರ್ಭ ಅನಿವಾರ್ಯವಾಗಿ ಆತ ಯುದ್ಧಕ್ಕೆ ತೆರಳಿದನು. ಕೊನೆಗೆ ಬಹುಕಾಲ ಕಳೆದರೂ ಗಂಡ ಹಿಂದಿರುಗದಿದ್ದಾಗ ಗಂಡ ಯುದ್ಧದಲ್ಲಿ ಮಡಿದನೆಂದು ತಾನೇ ಚಿತೆಯನ್ನು ನಿರ್ಮಿಸಿ ಆತ್ಮಾರ್ಪಣೆ ಮಾಡಿಕೊಂಡಳು. ದುರದೃಷ್ಟವಶಾತ್ ಯುದ್ಧಕ್ಕೆ ತೆರಳಿದ ಗೌಡ ಯುದ್ಧದಲ್ಲಿ ಸಾಯದೆ ಮರಳಿ ಊರಿಗೆ ಬಂದು ತನ್ನ ಹೆಂಡತಿ ಚಿತೆಗೇರಿದ ವಿಷಯ ತಿಳಿದು ತಾನೂ ಕೂಡ ಹೆಂಡತಿಯ ದುಃಖವನ್ನು ತಾಳದೆ ಚಿತೆಗೇರಿದ. ಈ ಪ್ರದೇಶದಲ್ಲೇ ಏಕೆ ಇಡೀ ಕರ್ನಾಟಕದ ಬಹುತೇಕ ಕಡೆ ಈ ಐತಿಹ್ಯ ಪ್ರಚಲಿತದಲ್ಲಿದೆ.

ಕೆಲವು ಮಹಾಸತಿ ಕಥೆಗಳ ಐತಿಹ್ಯ ಹೀಗಿದೆ. ಪತಿಯ ಮರಣಾನಂತರ ಸತಿಯೂ ಕೂಡ ಪತಿಯ ಚಿತೆಗೆ ಜೀವಂತವಾಗಿ ಹಾರಿ ಆತ್ಮಾರ್ಪಣೆ ಮಾಡಿಕೊಂಡವಳು ಜನಪದರಲ್ಲಿ ಮಹಾಸತಿಯಾಗಿ ದೇವಿಯಾಗಿ ಆರಾಧಿಸಲ್ಪಡುತ್ತಿದ್ದಾಳೆ. ಈ ಮಹಾಸತಿ ಚಿತೆ ಏರುವುದಕ್ಕೆ ಮೊದಲು ಎಲ್ಲೆಲ್ಲಿ ಸಾಗಿದ್ದಳೋ ಅಲ್ಲೆಲ್ಲ ಅವಳ ಸ್ಮಾರಕವಾಗಿ ಕಲ್ಲುಗಳನ್ನು ಸ್ಥಾಪಿಸಲಾಗಿದೆ. ಇವನ್ನು **ಮಾಸ್ತಿಕಲ್ಲುಗಳು** ಎಂದೇ ಕರೆಯಲಾಗುತ್ತದೆ. ಅವಳ ಮಕ್ಕಳೇ 'ನಾಗಗಳು'. ಅವುಗಳ ವಾಸ ಮಹಾಸತಿಕಲ್ಲಿನ ಬುಡದಲ್ಲೇ. ತಮ್ಮ ವಾಸದ ನೆಲೆಯ ಆವರಣದಲ್ಲಿ ಸೂತಕ ಅಶುಚಿ ಏನೇ ಸಂಭವಿಸಿದರೂ ಅವು ಕಾಣಿಸಿಕೊಳ್ಳುತ್ತವಂತೆ. ಆಗ ಅದು ಮಾಸ್ತಿಯ ಉಪದ್ರವ ಎಂದು ತಿಳಿದು ಹಣ್ಣುಕಾಯಿ ಸೇವೆ ನಡೆಸಿದರೆ ತೊಂದರೆ ನಿವಾರಣೆಯಾಗುತ್ತದೆಂದು ನಂಬಿಕೆ. ಈ ಬಗೆಯ ವಿವರಗಳನ್ನು ಜನಪದ ವಿದ್ವಾಂಸ ಅಂಬಳಿಕೆ ಹಿರಿಯಣ್ಣನವರ ಕೃತಿಗಳಲ್ಲೂ ಗಮನಿಸಬಹುದು.

‘ಕೆಂಡಕೊಂಡವಾದ ಮಹಾಸತಿಯನ್ನು ಗಂಡನ ಚಿತೆಯಲ್ಲಿಟ್ಟು ಸುಡುವ ಸಂದರ್ಭದಲ್ಲಿ ತಾರಿ ಎಂಬುವವನು (ಈತ ಮಾದಿಗ) ಕೊಳ್ಳಿ ತಂದುಕೊಟ್ಟನೆಂದು ಪ್ರತೀತಿ. ಅಂತೆಯೇ ಕೆಲವೆಡೆಗಳಲ್ಲಿ ಈ ಕೊಳ್ಳಿ ಕೊಟ್ಟ ತಾರಿಗೂ ಮಾಸ್ತಿಕಲ್ಲಿನ ಜೊತೆಯಲ್ಲಿ ಪೂಜೆ ನಡೆಯುತ್ತದೆ. ಮಾಸ್ತಿಯ ಜೊತೆಯಲ್ಲಿ ಪೂಜೆಗೊಳ್ಳುವ ತಾರಿಗೆ ‘ತಾರಿ ಕೊಳ್ಳಿ ಮಾಸ್ತಿಕಲ್ಲು ’ ಎಂಬ ಹೆಸರು ನಿಂತಿದೆ. ಮಾಸ್ತಿಕೊಂಡ, ಮಾಸ್ತಿಕಲ್ಲು , ತಾರಿಕೊಳ್ಳಿ ಮಾಸ್ತಿಕಲ್ಲುಗಳಷ್ಟೇ ಅಲ್ಲದೆ ಕೆಲವೆಡೆಗಳಲ್ಲಿ ಕೆಲವು ಮನೆಗಳಲ್ಲೇ ಮಾಸ್ತಿ ನೆಲೆಸಿದ್ದಾಳೆ. ವಾಸದ ಮನೆಯ ಅಟ್ಟವೊ ಮಹಡಿಯೊ ಅವಳ ವಾಸದ ತಾಣ. ಒಂದು ಮರದ ಮಣೆ, ಅದರ ಮೇಲೆ ನಾಲ್ಕು ಗಿಂಡಿ (ಕುಡಿಕೆ) ಗಳಿದ್ದು ಮೂರು ಗಿಂಡಿಗಳಲ್ಲಿ ಎರಡೆರಡು ಬೆಳ್ಳಿಗಿರಿ, ಒಂದರಲ್ಲಿ ತಾಮ್ರದ ಗಿರಿ, ಮೂರು ಕಂಚಿನ ಗಂಟೆಗಳು ಇರುತ್ತವೆ. ಉಳಿದ ಇನ್ನೊಂದನ್ನು ಕಾಣಿಕೆ ಸಂಗ್ರಹಕ್ಕಾಗಿ ಇಟ್ಟಿರಲಾಗುತ್ತದೆ. ಇವುಗಳ ಜೊತೆಗೆ ಬೆಳ್ಳಿ ಬಸವ, ತಾಳ ಮತ್ತು ಮಣ್ಣಿನ ಬಳೆಗಳನ್ನು ಆ ಮಣೆಯ ಮೇಲೆ ಇಟ್ಟಿರಲಾಗುತ್ತದೆ (ಆ ಮಣ್ಣಿನ ಬಳೆಗಳು ಮದುವೆಯಾಗಿ ಹೋದ ಹೆಣ್ಣು ಮಕ್ಕಳು ತವರಿಗೆ ಬಂದು ಹೋಗುವಾಗಲೆಲ್ಲ ಇಟ್ಟು ಹೋಗುವಂಥವು) ಇದು ಮಾಸ್ತಿಯನ್ನು ಸ್ಥಾಪಿಸಿರುವ ರೀತಿ ’.[9]

ಮನೆದೇವತೆಗಳ ಗುಂಪಿನಲ್ಲಿ ಬರುವ ಮಹಾಸತಿ ದೇವರ ಬಗೆಗೆ ಹುಟ್ಟಿಕೊಂಡಿರುವ ಐತಿಹ್ಯಗಳು ಆತ್ಮಾರ್ಪಣೆಯ ಹಿನ್ನೆಲೆಯವು. ಈ ಐತಿಹ್ಯಗಳಿಗೆ ಅಸಂಖ್ಯಾತ ವಿಭಿನ್ನವಾದ ರೂಪಗಳಿವೆ. ಐತಿಹ್ಯದ ಮೂಲ ಎಳೆಯಲ್ಲಿ ಯಾವ ರೂಪಬೇಧಗಳಿಲ್ಲದಿದ್ದರೂ ಪ್ರಾದೇಶಿಕವಾಗಿ ವಿಭಿನ್ನ ರೀತಿಯಲ್ಲಿದೆ. ಕೆರೆಕಟ್ಟೆಯ ದಂಡೆ ನಿಲ್ಲುವಿಕೆಗೆ, ತೋಡಿದ ಕೆರೆ ನೀರು ಬರದೇ ಇದ್ದಾಗ, ಊರಿಗೆ ಬರಗಾಲ ಬಂದಾಗ ಊರಿನ ಹಿತಕ್ಕೆ ಆತ್ಮಾರ್ಪಣೆ ಮಾಡಿಕೊಂಡ ಮಹಾಸತಿಯರ ಕಥೆಯ ರೂಪದಲ್ಲಿವೆ.

ಈ ಪ್ರದೇಶದಲ್ಲಿ ಮಾಸ್ತಿಯಮ್ಮ , ಮಹಾಸತಿದೇವಿಯ ಆರಾಧನೆಯ ಪರಿಕಲ್ಪನೆಯ ಬಗೆಗೆ ಜಾನಪದ ತಜ್ಞ ಡಾ.ಅಂಬಳಿಕೆ ಹಿರಿಯಣ್ಣ ಈ ರೀತಿ ಅಭಿಪ್ರಾಯಪಡುತ್ತಾರೆ.

''ಪತಿಯ ಮರಣಾನಂತರ ಸತಿಸಹಗಮನ ಮಾಡುವುದು ಪ್ರಾಚೀನ ಪದ್ಧತಿ. ಅಂಥ ಸತಿಯನ್ನು 'ಮಹಾಸತಿ ' ಎಂದು ಕೊಂಡಾಡಿ ಅವರ ಸ್ಮಾರಕವಾಗಿ ಮಾಸ್ತಿಕಲ್ಲುಗಳನ್ನು ಸ್ಥಾಪಿಸುತ್ತಿದ್ದರು. ಪತಿ ಬದುಕಿದ್ದಾಗಲೇ ಆತ ತನ್ನಿಂದ ದೂರವಿದ್ದಾಗ, ಸತಿ ತನ್ನ ಶೀಲಕ್ಕೆ ಕಳಂಕ ಬರುವ ಸಂಭವವಿದ್ದಾಗ ಸತಿ ಹೋಗುತ್ತಿದ್ದುದೂ ಉಂಟು. ಮಾಸ್ತಿಕತೆ ಇದಕ್ಕೆ ಒಂದು ಸ್ಪಷ್ಟ ಉದಾಹರಣೆ. ಮನೆಯಲ್ಲಿ ಸ್ಥಾಪನೆಗೊಳ್ಳುವ 'ಮಾಸ್ತಿ ' ಎಂದರೆ ಸ್ತ್ರೀಯ ವಸ್ತ್ರಾಭರಣಗಳು ಮಾತ್ರ ; ಮೂರ್ತಿ ಇರುವುದಿಲ್ಲ. 'ಅಟ್ಟರಕೆ 'ಯ ದಿನ ಮಾತ್ರ ಸ್ತ್ರೀಗೊಂಬೆ ಸಾಲಂಕೃತಗೊಳಿಸಲಾಗುವುದು. ಮಾಸ್ತಿ ಸ್ಥಾಪನೆಗೊಂಡ ಮನೆಗಳು ಸದಾ ಶುಚಿತ್ವವನ್ನು ಕಾಯ್ದುಕೊಳ್ಳುತ್ತವೆ. ಮಾಸ್ತಿ ಬಗೆಗಿನ ನಂಬಿಕೆಯ ಅಸ್ತಿತ್ವವೇನೇ ಇರಲಿ ಪರೋಕ್ಷವಾಗಿ ಮಾಸ್ತಿಯಾರಾಧನೆ ಈ ಜನರಲ್ಲಿ ಸ್ವಚ್ಛತೆಯ ಶಿಸ್ತನ್ನು ಮೂಡಿಸಿದೆ ''[10]

ಮಲೆನಾಡಿನ ಬಹುತೇಕ ಕುಟುಂಬಗಳ ಮನೆದೇವತೆಯ ಗುಂಪಿನಲ್ಲಿ ಅಸ್ತಿತ್ವದಲ್ಲಿರುವ ಮಾಸ್ತಿಯ ಬಗೆಗಿರುವ ಕತೆಗಳೆಲ್ಲಾ ಲೋಕಕಲ್ಯಾಣಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡ ಕಥೆಯ ಹಿನ್ನೆಲೆಯುಳ್ಳದ್ದು. ಈ ಕಥೆಗೆ ಅನೇಕ ರೂಪಗಳಿದೆ. ಕಥೆಯ ರೂಪದಲ್ಲಿ ಯಾವ ಬದಲಾವಣೆಗಳಿಲ್ಲದಿದ್ದರೂ ಪ್ರತೀ ಮಾಸ್ತಿ ದೇವರುಗಳ ಸ್ಥಾಪನೆಯ ಹಿಂದೆ ಅವರದ್ದೇ ಆದ ಕಥಾನಕಗಳಿವೆ. ಆದರೆ ಆ ಎಲ್ಲಾ ಕಥೆಗಳ ಉದ್ದೇಶ ಆತ್ಮಾರ್ಪಣೆಯಾದ ನಂತರ ದೈವಿಕ ಶಕ್ತಿಯನ್ನು ಹೊಂದಿದುದು ಆಗಿದೆ ಎಂದು ನನ್ನ ಭಾವನೆ.

ಗಿಡದೈವಗಳು : ತೀರ್ಥಹಳ್ಳಿ ತಾಲ್ಲೂಕಿನ ಬಹುಸಂಖ್ಯಾತರು ಬಹು ದೇವತಾರಾಧಕರು. ಇವರು ಪ್ರಕೃತಿಯ ಎಲ್ಲಾ ಜೀವರಾಶಿಗಳಲ್ಲಿಯೂ ದೈವದ ಅಸ್ತಿತ್ವವಿದೆ ಎಂದು ನಂಬಿದ್ದಾರೆ. ಹಲವಾರು ಗ್ರಾಮ ದೈವಗಳು ಬನದೇವತೆಗಳಾಗಿಯೇ ನೆಲೆಸಿವೆ. ಇವರ ದೇವರುಗಳ ಬಗ್ಗೆ ಅಪಾರವಾದ ಭಯ, ಭಕ್ತಿ ಪ್ರತಿ ಕುಟುಂಬದವರಲ್ಲೂ ಇದೆ. ಅನೇಕ ಬನದೈವಗಳನ್ನು ಪೂಜಿಸುವ ಪದ್ಧತಿ ಇರಿಸಿಕೊಂಡಿರುವ ಆಯಾ ಕುಟುಂಬದವರು ತಮ್ಮ ತಮ್ಮ ಗದ್ದೆ, ತೋಟ, ಮನೆ, ಜನ, ಜಾನುವಾರುಗಳನ್ನು ಕಾಯುವ ಅಧಿ ದೇವತೆಗಳೆಂದು ಪೂಜಿಸುತ್ತಾರೆ. ಅಲ್ಲದೆ ಈ ಗಿಡದೈವಗಳ ಸನಿಹದಲ್ಲಿಯೇ ಇವರು ತಮ್ಮದೇ ಆದ ಮನೆದೇವರುಗಳನ್ನೂ ಸ್ಥಾಪಿಸಿಕೊಂಡಿರುತ್ತಾರೆ. ಅವುಗಳನ್ನು **ಜಕಣಿ** ಎಂಬ ಹೆಸರಿನಿಂದ ಪೂಜಿಸಿ ಆರಾಧಿಸುತ್ತಾರೆ. ದುರಂತ ಸಾವು , ಆತ್ಮಹತ್ಯೆ, ಅಕಾಲ ಮೃತ್ಯು ಮೊದಲಾದ

ಕಾರಣಗಳಿಂದ ಸಾವನ್ನಪ್ಪಿದ ಸತ್ತವರ ಆತ್ಮಗಳಿಗೆ ಈ ಗಿಡದೈವದ ಬನದಲ್ಲಿಯೇ ನೆಲೆಯನ್ನು ಒದಗಿಸಿ 'ದೈವ ನಿಲ್ಲಿಸುವುದು' ಎಂಬ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಹೀಗೆ ತಮ್ಮ ಕುಟುಂಬದ ಸಹವರ್ತಿಗಳೆಲ್ಲರೂ ಸತ್ತಾಗ ಅವರು ಬನದೇವತೆಗಳ ಸಾಲಿಗೆ ಸೇರುತ್ತಾರೆ.

ಬನದೈವಗಳಿಗೆ ಪ್ರತೀ ವರ್ಷವೂ ಸೇವೆ ಸಲ್ಲುತ್ತದೆ. ಇವುಗಳಲ್ಲಿ ಬಹುತೇಕ ದೈವಗಳಿಗೆ ರಕ್ತಾಹಾರ ನಡೆಯುತ್ತದೆ. ಕೆಲವೇ ಕೆಲವು ದೈವಗಳು ಮಾತ್ರ ರಕ್ತಾಹಾರಕ್ಕೆ ಬದಲಾಗಿ 'ಜೈನೆಡೆ'ಯ ಸೇವೆ ಸಲ್ಲುತ್ತದೆ. ರೋಗ ರುಜಿನಗಳನ್ನು, ಕಷ್ಟ - ನಷ್ಟಗಳನ್ನು ನಿವಾರಿಸುದ ದೈವಕ್ಕೆ ಹರಕೆ ಸಲ್ಲಿಸಲಾಗುವುದು. ಮುಖ್ಯವಾಗಿ ಚೌಡಿ, ಜಟಗ, ಭೂತ, ಪಂಜರವಳ್ಳಿ, ರಣ, ಹೆಗ್ಗರಚೌಡಿ, ಮಾದಿಗದ್ದೆ ಚೌಡಿ, ಮಾಟದ ಚೌಡಿ, ಉರಿಚೌಡಿ, ಕೋಮಾರಮ್ಮ ,ರಕ್ತೇಶ್ವರಿ ಹೀಗೆ ಹಲವಾರು ಹೆಸರುಗಳಿಂದ ಪೂಜಿಸಲ್ಪಡುವ ಈ ಬನದೇವತೆಗಳ ಪೂಜಾ ವಿಧಾನಗಳು ದ್ರಾವಿಡ ಸಂಸ್ಕೃತಿಯ ವಿವರಗಳನ್ನು ಒದಗಿಸುತ್ತವೆ.

ಕುಲದೇವತೆ : ಈ ಪ್ರದೇಶದ ಬಹುತೇಕ ಕುಟುಂಬಗಳು ವೈಯಕ್ತಿಕವಾಗಿ ತಮ್ಮ ಕುಟುಂಬ ವ್ಯಾಪ್ತಿಯಲ್ಲಿಯೇ ಬನದೇವತೆಗಳ ಆರಾಧನೆಯ ಕ್ರಮವನ್ನು ಇರಿಸಿಕೊಂಡಂತೆಯೇ ಒಂದು ಪ್ರದೇಶಕ್ಕೆ ಒಂದೊಂದು ದೇವತೆಗಳನ್ನು ಸಾಮೂಹಿಕವಾಗಿ ಆರಾಧಿಸುವ ಸೀಮೆ ದೈವಗಳ ಆರಾಧನಾ ಪರಂಪರೆ ಈ ಭಾಗದಲ್ಲಿದೆ. ಈ ಪ್ರದೇಶದ ಮುಖ್ಯ ಸೀಮೆಗಳಾದ ಮಾಳೂರು ಸೀಮೆ, ಮಂಡಗಾರು ಸೀಮೆ, ತೀರ್ಥಮುತ್ತೂರು ಸೀಮೆ, ಸೀತೂರು ಸೀಮೆ ಮೊದಲಾದ ಪ್ರಾದೇಶಿಕ ಸೀಮೆಗಳನ್ನು ಹೊಂದಿರುವ ಈ ಪ್ರದೇಶದಲ್ಲಿ ಸೀಮೆ ದೇವತೆಗಳನ್ನು ಕುಲದೇತೆಗಳೆಂದೇ ಕರೆದು ಆರಾಧಿಸುವ ಪರಿಪಾಠವಿದೆ. ತೀರ್ಥಹಳ್ಳಿ ಪ್ರದೇಶದ ಬಹುತೇಕ ಕುಟುಂಬಗಳಲ್ಲಿ ಒಂದೊಂದು ಕುಟುಂಬಕ್ಕೂ ಒಂದೊಂದು ಸೀಮೆ ದೈವಗಳಿವೆ. ಈ ಸೀಮೆ ದೈವಗಳು ಬಹುತೇಕ ಸ್ತ್ರೀದೈವಗಳೇ ಆಗಿರುವುದು ವಿಶೇಷ. ಹೀಗೆ ಸೀಮೆ ದೇವತೆಗಳು ನೆಲೆಗೊಂಡ ಬಗ್ಗೆ ಐತಿಹ್ಯಗಳ ಆಧಾರವನ್ನು ಒದಗಿಸುವ ಕಥೆಗಳು ವಿಫುಲವಾಗಿ ದೊರೆಯುತ್ತವೆ. ಜನಪದ ವಿದ್ವಾಂಸ ಡಾ|| ಅಂಬಳಿಕೆ ಹಿರಿಯಣ್ಣನವರು ಸೀಮೆ ದೇವತೆಗಳ ಉಗಮದ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ -

'ಬಿದನೂರಿನ ಪಾಳೆಯಗಾರರ ಆಳ್ವಿಕೆ ಕಾಲದಲ್ಲಿ ಈಗ ಸೀಮದೇವತೆಯ ನೆಲೆ ಇರುವ ಜಾಗದಲ್ಲಿ ಅನೇಕ ದೇವಾಲಯಗಳಿದ್ದವು. ಆ ದೇವಾಲಯಗಳಲ್ಲಿಉಗ್ರ ನರಸಿಂಹದೇವರ ಉಪದ್ರವ ವಿಪರೀತವಾಗಿ ಅನೇಕ ಜನ ಸಾವಿಗೀಡಾದರು ; ದನಕರುಗಳೂ ಸತ್ತವು. ಪರಿಣಾಮವಾಗಿ ಜನ ಭೀತಿಯಿಂದ ಉಗ್ರಹನರಸಿಂಹನ ಕಾಲು ಕಟ್ಟಿಕೊಂಡರು. ಉಗ್ರ ನರಸಿಂಹನ ಅಪೇಕ್ಷೆಯಂತೆ ಅವನ ನೆಲೆಗೆ ಅಭಿಮುಖವಾಗಿ ಒಂದೆಡೆ ದೇವಿಯ ನೆಲೆ ಸೃಷ್ಟಿಯಾಯಿತು.

ಬಹುತೇಕ ಕಡೆಗಳಲ್ಲಿ ದೇವಿ ತನ್ನ ಪರಿವಾರದೊಂದಿಗೆ ನೆಲೆ ಕಂಡುಕೊಂಡಿದ್ದಾಳೆ. ಆರಗ ಸೀಮೆದೇವೆಯ ಪರಿವಾರದ ಮುಖ್ಯರು : ಮಾತಂಗಿ, ರಕ್ತೇಶ್ವರಿ, ಉರಿವಿನ ಚೌಡಿ, ಬ್ರಹ್ಮ ಇತ್ಯಾದಿ. ಆ ದೈವಗಳ ಸ್ಥಾನ ದಿಕ್ಕುಗಳು ಹೀಗಿವೆ : ದೇವಿಯ ಗರ್ಭಗುಡಿಯ ಎಡಭಾಗದಲ್ಲಿ ಭೂತರಾಯ : ಬಲಭಾಗದಲ್ಲಿ ಇಬ್ಬರು ಚೌಡಮ್ಮನವರು, ಗುಡಿಯ ಮುಂಭಾಗದ ಎಡಪಕ್ಕದಲ್ಲಿ ಬೈರೇದೇವರ ಕಟ್ಟೆ ಅದಕ್ಕೆ ಅಭಿಮುಖವಾಗಿ ಮಾತಂಗಿ ಮತ್ತು ಬ್ರಹ್ಮನ ಕಟ್ಟೆಗಳು : ಗುಡಿಯ ಮುಂಭಾಗದ ಬಲಭಾಗದಲ್ಲಿ ಎಲ್ಲಮ್ಮನ ಕಟ್ಟೆ , ರುಂಡಮೂಲಕಟ್ಟೆಗಳು. ಮಾತಂಗಿ ಕಟ್ಟೆಯ ಎದುರಿನಲ್ಲಿ ರಕ್ತೇಶ್ವರಿ, ಉರಿ ಚೌಡಕಮ್ಮನವರ ಗದ್ದುಗೆ, ಗುಡಿಯ ಎಡಭಾಗದಲ್ಲಿ ಸುಬ್ರಹ್ಮಣ್ಯ, ಅಶ್ವತ್ಥರಾಯನ ಕಟ್ಟೆಗಳು ಹತ್ತಿರದಲ್ಲೇ ಗಣಪತಿ ವಿಗ್ರಹವೂ ಸ್ಥಾಪನೆಗೊಂಡಿದೆ. ನಿತ್ಯಪೂಜೆ ವಿಶೇಷಪೂಜೆಗಳ ಎಲ್ಲಾ ಸಂದರ್ಭಗಳಲ್ಲೂ ಗಣಪತಿಗೆ ಪೂಜೆಯಾದ ಅನಂತರವೇ ಕುಲದೇವತೆಗೆ ಪೂಜೆ ನಡೆಯುತ್ತದೆ '[11]

ರೋಗರುಜಿನಗಳ ದೇವತೆ 'ಉರಿವಿನ ಚೌಡಿ ' ಸೀಮೆಯ ಒಕ್ಕಲುಗಳಿಗೆ ಕಜ್ಜಿ , ತುರಿ ಕಾಣಿಸಿಕೊಂಡ ಸುದ್ದಿ ತಿಳಿದಾಗ ಪೂಜಾರಿಯು ಸೀಮೆ ಸಮಸ್ತರ ಕ್ಷೇಮದ ದೃಷ್ಟಿಯಿಂದ ಕೋಳಿಯೊಂದನ್ನು ಚೌಡಿಗೆ ಬಲಿಕೊಡುವನು. ಕಜ್ಜಿ , ತುರಿ ಕಾಣಿಸಿಕೊಂಡ ಕುಟುಂಬಗಳ ಜನ ಮನೆಗಳಿಂದ ಮೆಣಸಿನ ಕಾಳುಗಳನ್ನು ತಂದು ಉರಿವಿನ ಚೌಡಿಯ ಮೇಲೆ ಚೆಲ್ಲುವರು. ಕೆಲವರು ಶೂಲ ಮಾಡಿಸಿ ತಂದು ಅರ್ಪಿಸುವರು. ಮತ್ತೆ ಕೆಲವರು ಮೈಲಿಗೆ ದೋಷ ಪರಿಹಾರಕ್ಕಾಗಿ ನಾಗರಕಲ್ಲುಗಳನ್ನು ಸ್ಥಾಪಿಸುವರು. ವಿಶೇಷವಾಗಿ ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳುವ ಕುಟುಂಬಗಳು ಮತ್ತು ಸಾಮಾನ್ಯವಾಗಿ ಎಲ್ಲಾ ಸೀಮೆ ಒಕ್ಕಲುಗಳೂ ನಾಗರಪಂಚಮಿ, ಸುಬ್ರಹ್ಮಣ್ಯ ಷಷ್ಠಿ ದಿನಗಳಲ್ಲಿ ನಾಗರಕಲ್ಲುಗಳಿಗೆ ಹರಕೆ

ಸಲ್ಲಿಸುವುದು ವಾಡಿಕೆ. ಎಡೆ ಅಡುಗೆಗೆ ಉಪ್ಪು ಹಾಕದಿರುವುದು ಅಂದಿನ ವಿಶೇಷ.

ಒಟ್ಟಿನಲ್ಲಿ ಗಿಡದೈವಗಳ, ಸೀಮೆ ದೇವತೆಗಳ ಆರಾಧನೆಯ ಹಿಂದಿರುವ ಪ್ರಬಲವಾದ ಕಾರಣ ಧಾರ್ಮಿಕ ಹಿನ್ನೆಲೆಯಿಂದ ಬಂದಂತಹದ್ದು. ವಾಸ್ತವದಲ್ಲಿ ಗಿಡದೈವಗಳ ಆರಾಧನೆಯ ಬಗೆಗಿರುವ ಉದ್ದೇಶ ಕೇವಲ ಕಾಲ್ಪನಿಕವಾದ ವಿವರಗಳೇ ವಿನಃ ಸತ್ಯಕ್ಕೆ ಸಾಕ್ಷಿಯಲ್ಲ. ಆದರೆ, ಗ್ರಾಮ ಜೀವನದ ವೈವಿಧ್ಯಮಯ ಸಹಬಾಳ್ವೆ, ಧಾರ್ಮಿಕ ಪರಂಪರೆಯ ಮುಂದುವರಿಕೆಗೆ ಒಂದು ಕಾರಣವಷ್ಟೆ. ನಂಬಿಕೆ ಇಲ್ಲಿ ಪ್ರಮುಖವಾದುದು ಎಂದೆನಿಸುತ್ತದೆ. ಈ ಬಗ್ಗೆ ಜನಪದ ವಿದ್ವಾಂಸ ಡಾ॥ ಶ್ರೀಕಂಠ ಕೂಡಿಗೆ ಈ ರೀತಿ ಅಭಿಪ್ರಾಯಪಡುತ್ತಾರೆ.

> ' ನಂಬಿಕೆಗಳನ್ನು ಹೊರತುಪಡಿಸಿ ಬದುಕಿನ ಕಲ್ಪನೆಯೇ ಅಸಾಧ್ಯ. ಪುರಾತನ ಮಾನವನಿಂದ ಹಿಡಿದು ಅತ್ಯಂತ ಆಧುನಿಕ ಮನುಷ್ಯನ ಚಟುವಟಿಕೆಗಳವರೆಗೆ ಇವು ವ್ಯಾಪಿಸಿವೆ. ಬದುಕು ಎಷ್ಟು ಪ್ರಾಚೀನವೋ ನಂಬಿಕೆಗಳು ಅಷ್ಟೇ ಪ್ರಾಚೀನವಾದವು. ಆದಿಮಾನವನ ಅತಾರ್ಕಿಕ ಮನಸ್ಸು ಅವ್ಯಕ್ತ ಶಕ್ತಿಯೊಂದರ ಬಗೆಗಿನ ಭಯ ಇವುಗಳ ಹುಟ್ಟಿಗೆ ಕಾರಣವಾಯಿತು. ಅಭಿವ್ಯಕ್ತಿಗೆ ಮೂಲವಾದ ಭಾಷೆ ರೂಪುಗೊಂಡಾಗ ನಂಬಿಕೆಗಳು ಜನಜೀವನದಲ್ಲಿ ಚಲಾವಣೆ ಪಡೆದವು. ಮೊದಮೊದಲು ಇವು ವ್ಯಕ್ತಿನಿಷ್ಠ ಅನಿಸಿಕೆಗಳಾದರೂ ಕಾಲಕ್ರಮದಲ್ಲಿ ಸಾರ್ವತ್ರಿಕವಾದವು. ಇವುಗಳನ್ನು ನಂಬಿ ನಡೆಯುವುದರಿಂದ ಒಳ್ಳೆಯದಾಗುತ್ತದೆ, ಆಪತ್ತು ನಿವಾರಣೆಯಾಗುತ್ತದೆ ಎಂಬ ಸಾಮೂಹಿಕ ಭಾವನೆ ಬೆಳೆಯತೊಡಗಿತು. ಕ್ರಮೇಣ ನಂಬಿಕೆ ಎಂಬ ಕಲ್ಪನೆಯ ವೃಕ್ಷಕ್ಕೆ ಹಲವು ಕವಲುಗಳು ಮೂಡಿದವು. ಅವು ಮುಗ್ಧ ಅತಾರ್ಕಿಕ ಪುನರಾವರ್ತಿತ ಆಲೋಚನೆಗಳ ಚಿತ್ರಮಯ ಭಾವವಿನ್ಯಾಸ. ವೈಚಾರಿಕ ಪರಿಗ್ರಹಿಕೆಗೆ ನಂಬಿಕೆಗಳು ಇಂಬು ಕೊಡದಿದ್ದರೂ ವಸ್ತುಸ್ಥಿತಿಯ ನೈಜಾಭಿವ್ಯಕ್ತಿಗೆ ಆಸರೆಯಾಗದಿದ್ದರೂ ಸಾಮೂಹಿಕವಾಗಿ ನಂಬಲರ್ಹ ಜೀವನವಿಧಾನ ಅದೊಂದು ನೆಮ್ಮದಿ ತಂದುಕೊಡುವ ಮಾನಸಿಕ ಸಾಧನ. ಹಾಗಾಗಿ ಅವು ಸಾಮಾನ್ಯ ಮನುಷ್ಯನ ನಿತ್ಯ ಬದುಕಿನ ನಿರಂತರ ಸಹಚರಿಗಳು. ನಂಬಿದವರಿಗೆ ಅವು ಎಷ್ಟೇ ಹಾನಿಕಾರಕವಾಗಿದ್ದರೂ ಮೂಢಾಚರಣೆ ಎಂಬ ಭಾವನೆ ಮನಸ್ಸಿನಲ್ಲಿ ಸುಳಿಯುವುದಿಲ್ಲ , ಅಂತಹವರಿಗೆ ನಂಬಿಕೆಗಳು ಸದಾ ಅಬಾಧಿತ ಹಾಗೂ ರಕ್ತಗತ '[12]

ಎಂಬ ಈ ಅಭಿಪ್ರಾಯವನ್ನು ಗಮನಿಸಿದಾಗ ಐತಿಹ್ಯಗಳ ಅಧ್ಯಯನದ ಈ ಸಂದರ್ಭದಲ್ಲಿ ಈ ಪ್ರದೇಶದ ಜನಪದರಲ್ಲಿರುವ ಗ್ರಾಮದೇವತೆಗಳ ಆರಾಧನೆಯ ಹಿಂದೆ ಲೇಖಕರ ಅಭಿಪ್ರಾಯವನ್ನು ಒಪ್ಪಬಹುದಾದರೆ, ಭೌಗೋಳಿಕ ಸಂಗತಿಗಳು, ಧಾರ್ಮಿಕ ನಂಬಿಕೆಗಳು, ವ್ಯಕ್ತಿಗತವಾದ ಮನೋಭೂಮಿಕೆಯ ಹಿನ್ನೆಲೆಯಲ್ಲಿಯೇ ಬರುತ್ತವೆ. ಗ್ರಾಮ ದೇವತೆಗಳ ಆರಾಧನೆಯ ಬಗೆಗಿರುವ ಐತಿಹ್ಯಗಳು ಕೇವಲ ನಂಬಿಕೆಗಳೆಂದು ಸಾರಾಸಗಟಾಗಿ ಅವುಗಳು ಅನುಪಯುಕ್ತವಾದವುವೆಂದು ಹೇಳುವುದು ಕಷ್ಟವಾಗುತ್ತದೆ. ಆರೋಗ್ಯ ಸಂಬಂಧಿಯಾದ ಹಾಗೂ ಮನೋವೈಜ್ಞಾನಿಕವಾದ ಎಳೆಗಳನ್ನು ತನ್ನೊಳಗೆ ಇರಿಸಿಕೊಂಡಿರುವ ಈ ಐತಿಹ್ಯಗಳು ಆಧುನಿಕ ವಿದ್ಯಾಭ್ಯಾಸ ಮತ್ತು ವೈಚಾರಿಕ ಜ್ಞಾನಗಳ ಮೂಲಕ ಇಂತಹ ಐತಿಹ್ಯ ಬೇರನ್ನು ಸ್ವಲ್ಪ ಮಟ್ಟಿಗೆ ಅಲುಗಾಡಿಸಿದ್ದರೂ ಈಗಲೂ ಇವುಗಳ ಅಸ್ತಿತ್ವವನ್ನು ಕಾಣಬಹುದು.

ಟಿಪ್ಪಣಿಗಳು ಮತ್ತು ವಕ್ತೃಗಳು :

1. Alexander H. Krappe -The science of Folklore-1971 , Page-115
2. ದುರ್ಗಾ ಭಾಗವತ್ 1997, ಭಾರತೀಯ ಜನಪದ ಸಮೀಕ್ಷೆ, ಅನುವಾದ - ಕೆ.ಮರುಳಸಿದ್ದಪ್ಪ, ಬೆಂಗಳೂರು ವಿ.ವಿ. ಪುಟ- 45
3. ಡಾ. ಅಂಬಳಿಕೆ ಹಿರಿಯಣ್ಣ, 'ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ ' 1999,ಪುಟ -397
4. ಅದೇ, ಪುಟ - 397
5. ಅದೇ, ಪುಟ - 395
7. ಎನ್.ಆರ್.ನಾಯಕ್ : ಸಿರಸಿಯ ಶ್ರೀಮಾರಿಕಾಂಬೆ ಮತ್ತು ಜಾತ್ರೆ, 1985 ಪುಟ 32
6. ಡಾ. ಅರವಿಂದ ಮಾಲಗತ್ತಿ - ಜಾನಪದ ಕ್ರೀಡೆಗಳು 1989, ಪುಟ -45. ಕರ್ನಾಟಕ ಜಾನಪದ ಸಂ. ಜೀಶಂ ಪರಮಶಿವಯ್ಯ, ಬೆಂಗಳೂರು , ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
8. ಸಂಸ್ಕೃತಿ ವಿಕೃತಿ -ಲೇಖಕರು-ಡಾ. ಎಂ.ಎಂ. ಕಲ್ಬುರ್ಗಿ, ಸುವರ್ಣ ಸಾಹಿತ್ಯ ಗ್ರಂಥಮಾಲೆ 2006, ಪುಟ-98.
9. ಡಾ. ಅಂಬಳಿಕೆ ಹಿರಿಯಣ್ಣ, 'ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ '1999 ಪುಟ 177,ಪೂರ್ವೋಕ್ತ.
10. ಪೂರ್ವೋಕ್ತ ,1999, ಪುಟ 193.
11. ಅದೇ ,1999, ಪುಟ -180
12. 'ಪ್ರಾದೇಶಿಕ ಜಾನಪದ ' ಸಂ. ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ) ಲೇಖನ : 'ಮಲೆನಾಡಿನ ಪರಂಪರಾನುಗತ ನಂಬಿಕೆಗಳು ಮತ್ತು ಆಚರಣೆಗಳು '- ಲೇಖಕರು : ಡಾ. ಶ್ರೀಕಂಠ ಕೂಡಿಗೆ 2004. ಪ್ರಕಟಣೆ : ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
13. ಡಾ.ಬಸವರಾಜ್ ನೆಲ್ಲಿಸರ, ಜನಪದ ಐತಿಹ್ಯಗಳು -ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ಸ್ವಾಗತ ಸಮಿತಿ, ಚಿಕ್ಕಮಗಳೂರು 2003

'ಜೈನೆಡೆ' - ಈ ಪ್ರದೇಶದ ಬಹುತೇಕ ಕುಟುಂಬಗಳು ಜೈನ ಧರ್ಮಕ್ಕೆ ಸೇರಿದ್ದವು ಎನ್ನುವುದಕ್ಕೆ ಕೆಲವು ಆಚರಣೆಗಳಲ್ಲಿ ಈಗಲೂ ಕುರುಹು ಸಿಗುತ್ತದೆ. ಪಿತೃಗಳನ್ನು ಸ್ಮರಿಸುವ ಸಲುವಾಗಿ ಇಡುವ ಎಡೆಯಲ್ಲಿ ಮಾಂಸ, ಮೀನುಗಳನ್ನು ಉಣಬಡಿಸದೇ ಎಡೆಯ ಸಾಲಿಗೆ ಅಡ್ಡಲಾಗಿ ''ಜೈನೆಡೆ '' ಯನ್ನು ಪ್ರತ್ಯೇಕವಾಗಿ ಇರಿಸಿ ಪೂಜಿಸಲಾಗುತ್ತದೆ.

'ಜಕಣಿ' - ಕುಟುಂಬದ ಸದಸ್ಯ ಅಕಾಲ ಮರಣ, ಆತ್ಮಹತ್ಯೆಗಳಿಂದಾಗಿ ತೀರಿಕೊಂಡಾಗ ಅವರ ಆತ್ಮಗಳನ್ನು ನೆಲೆಗೊಳಿಸಿದ ದೈವಗಳನ್ನು ಜಕಣಿ ಎಂದು ಕರೆಯುತ್ತಾರೆ.

ಉಪ ಸಂಹಾರ

ಐತಿಹ್ಯಗಳನ್ನು ಸಂಶೋಧಿಸುವಾಗ ವಕ್ತೃಗಳಿಂದ ಆ ಬಗೆಯ ನಿರೂಪಣೆಯನ್ನು ಆಲಿಸುವಾಗ ಅದರ ವಾಸ್ತವಿಕತೆ - ಸತ್ಯ ಸಾಬೀತಾಗುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲೂ ಕೂಡ ಸಾವಿರಾರು ಐತಿಹ್ಯಗಳಿವೆ. ಆದರೆ ಅತ್ಯಂತ ರೋಚಕವೆನಿಸಿದ ಐತಿಹ್ಯಗಳನ್ನು ಮಾತ್ರ ನಾನು ನನ್ನ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ನನ್ನ ಸಂಶೋಧನೆಗೆ ನಾನು ಆಯ್ಕೆ ಮಾಡಿಕೊಂಡ ವ್ಯಾಪ್ತಿ ಅತ್ಯಂತ ವಿಸ್ತಾರವಾಗಿದ್ದರೂ ಮುಖ್ಯವಾದ ಐತಿಹ್ಯಗಳ ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿಗೆ ನನ್ನ ಸಂಶೋಧನೆಯನ್ನು ಮಿತಿಗೊಳಿಸಿಕೊಂಡೆ. ಈ ಪ್ರದೇಶದ ವ್ಯಕ್ತಿ ಸಂಬಂಧಿ ಐತಿಹ್ಯಗಳು, ಸ್ಥಳ ಸಂಬಂಧಿ ಐತಿಹ್ಯಗಳು ಮತ್ತು ಸಂಚಾರಿ ಐತಿಹ್ಯಗಳನ್ನು ಮಾತ್ರ ಸಂಶೋಧಿಸಿದ್ದೇನೆ. ಐತಿಹ್ಯಗಳ ಅಧ್ಯಯನದ ವ್ಯಾಪ್ತಿ ಅಗಾಧವಾದುದು ಎಂದು ಹೇಳುತ್ತಾ ಜಾನಪದ ವಿದ್ವಾಂಸ ಡಾ|| ಬಸವರಾಜ್ ನೆಲ್ಲಿಸರರವರು

'' ಐತಿಹ್ಯಗಳು ವ್ಯಕ್ತಿ, ಸ್ಥಳ, ಬೆಟ್ಟ , ಗುಡ್ಡ ,ಹಳ್ಳ , ಕೊಳ್ಳ , ಊರು, ಕೇರಿ ಮುಂತಾದುವನ್ನು ಕುರಿತಂತೆ ಸಾಂಪ್ರದಾಯಿಕ ವಿವರಣೆಯನ್ನು ನೀಡುವಂತಹವು. ಜನರ ಬಾಯಲ್ಲಿ ಪರಂಪರೆಯಿಂದ ಪರಂಪರೆಗೆ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಉಳಿದುಬಂದಂತಹವು. ಕೆಲವರು ಇವುಗಳನ್ನು ಕಟ್ಟುಕಥೆಗಳೆಂದು, ಸತ್ಯಾಂಶವಿಲ್ಲದ ಊಹೆಗಳೆಂದೂ ಕರೆದಿದ್ದರೂ, ಗ್ರಾಮೀಣ ಜನ ಮಾತ್ರ ತಮ್ಮ ತಮ್ಮ ಊರಿನ ಬಳಿಯಿರುವ ವಿಶೇಷ ಸ್ಥಳಗಳಿಗೆ, ವಸ್ತುಗಳಿಗೆ ಕಥೆಯೊಂದನ್ನು ಕಟ್ಟಿ ಇದು ಹಿಂದೆ ನಡೆದ ಘಟನೆಯೆಂದೇ ನಂಬಿಸುತ್ತಾರೆ. ಇಂತಹ ಐತಿಹ್ಯಗಳಿಂದ ಆಯಾ ಭಾಗದ ವೈಶಿಷ್ಟ್ಯ ವಿಶೇಷಗಳು, ಚಾರಿತ್ರ್ಯಿಕ ಮತ್ತು ಪೌರಾಣಿಕ ಅಂಶಗಳು ಬೆಳಕಿಗೆ ಬರಲು ಸಹಾಯಕವಾಗಿವೆ ''[1] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂತೆಯೇ ನಾನೂ ಕೂಡ ನನ್ನ ಸಂಪ್ರಬಂಧದಲ್ಲಿ ಈ ಪ್ರದೇಶದ ಚಾರಿತ್ರಿಕ , ಪೌರಾಣಿಕ ಮತ್ತು ಸಂಚಾರಿ ಐತಿಹ್ಯಗಳ ಕಡೆ ಹೆಚ್ಚು ಗಮನ ಕೇಂದ್ರೀಕರಿಸಿದೆ.

'ತೀರ್ಥಹಳ್ಳಿ ತಾಲ್ಲೂಕು ಸುತ್ತಮುತ್ತಲಿನ ಐತಿಹ್ಯಗಳು' ಈ ವಿಷಯ ನನ್ನ ಸಂಪ್ರಬಂಧ ನಿರ್ಮಿಸಹೊರಟ ನಾನು ಮೊದಲ ಅಧ್ಯಾಯದಲ್ಲಿ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿವರಿಸಿದ್ದೇನೆ. ಆಯ್ದುಕೊಂಡ ಸಂಪ್ರಬಂಧದ ವಿಷಯದ ಬಗೆಗೆ ಅವಲೋಕಿಸಿದ

ಶೂನ್ಯ ವಾತಾವರಣವನ್ನು ಮನದಟ್ಟು ಮಾಡಿಕೊಡಲಾಗಿದೆ. ಈ ಶೂನ್ಯತೆಯನ್ನು ನಿವಾರಿಸಲು ವಸ್ತು -ಸಾಮಾಗ್ರಿ, ಪ್ರಾಥಮಿಕ ಆಕರ -ಆನುಷಂಗಿಕ ಆಕರ, ಕ್ರಿಯಾಸಾಮಾಗ್ರಿ ಮತ್ತು ಜ್ಞಾನಸಾಮಾಗ್ರಿಗಳ ಜೊತೆಗೆ ದತ್ತ ಅನುಭವಗಳನ್ನು ಬೆಳೆಸಿಕೊಳ್ಳುವ ಇಂಗಿತ ವ್ಯಕ್ತಪಡಿಸಲಾಗಿದೆ. ಸತ್ಯವನ್ನು ಆಮೂಲಾಗ್ರವಾಗಿ ಕಂಡು ಹಿಡಿಯುವುದು ಅಸಾಧ್ಯವೆಂಬ ಹಿರಿಯರ -ಜ್ಞಾನಿಗಳ ಎಚ್ಚರಿಕೆಯ ಅರಿವಿದ್ದರೂ ಪ್ರಾಮಾಣಿಕ ಸಂಶೋಧನೆಯಲ್ಲಿ ತಪ್ಪುಗಳು ಕೆಲ ಮಟ್ಟಿಗೆ ಸೇರಬಹುದೇ ಹೊರತು ಸುಳ್ಳು ಸುಳಿಯದು ಎಂಬ ನಂಬಿಕೆಯ ಹಿನ್ನೆಲೆಯಿಂದ ಸತ್ಯದ ಸಾಕ್ಷಾತ್ಕಾರಕ್ಕೆ ಹೊರಟಿರುವ ಬಯಕೆ ಈ ಅಧ್ಯಾಯದಲ್ಲಿದೆ.

'ಇತಿಹಾಸವನ್ನು ಅರಿಯದವ ಇತಿಹಾಸವನ್ನು ಸೃಷ್ಟಿಸಲಾರ 'ಎಂಬ ಮಾತೊಂದಿದೆ ಹಾಗೆಯೇ ಐತಿಹ್ಯಗಳ ಅಧ್ಯಯನಕಾರ, ಸಂಶೋಧಕ ಈ ಕ್ಷೇತ್ರದಲ್ಲಿನ 'ಕೃಷಿ' ಯನ್ನು ಅರಿಯುವ ತವಕ ಹೊಂದಿರುವುದು ಸಹಜ. ಐತಿಹ್ಯಗಳ ಬಗೆಗೆ ಅಧ್ಯಯನ ನಡೆಸಿದ ಪಾಶ್ಚಾತ್ಯ, ಭಾರತೀಯ - ಕನ್ನಡದ ವಿದ್ವಾಂಸರ ಅಭಿಪ್ರಾಯ, ವ್ಯಾಖ್ಯೆ , ಸಂಶೋಧನಾ ಗ್ರಂಥಗಳ ಬಗೆಗೆ ಅಧ್ಯಾಯದಲ್ಲಿ ವಿವರಿಸಿದ್ದೇನೆ. ಐತಿಹ್ಯಗಳ ಅಧ್ಯಯನವನ್ನು ಬಹಳ ಗಂಭೀರವಾಗಿ ತೆಗೆದುಕೊಂಡ ವಿದ್ವಾಂಸರುಗಳು ಐತಿಹ್ಯಗಳನ್ನು ಹಲವಾರು ವರ್ಗಗಳಾಗಿ ವಿಂಗಡಿಸಿ ಗುರುತಿಸಿದ್ದಾರೆ. ಈ ಪ್ರಚಲಿತ ವರ್ಗೀಕರಣವು ಯಾವುದೇ ಒಂದು ಪ್ರದೇಶಕ್ಕೆ ಮಾತ್ರ ಮಿತಿಗೊಳ್ಳದೆ ಜಗತ್ತಿನ ಯಾವುದೇ ಪ್ರದೇಶದ ಐತಿಹ್ಯಗಳ ವರ್ಗೀಕರಣಕ್ಕೆ ಅನ್ವಯ ಮಾಡಿದಂತಿದೆ. ಈ ಬಗೆಯ ವರ್ಗೀಕರಣವನ್ನು ಎರಡನೇ ಅಧ್ಯಾಯದಲ್ಲಿ ನಿರೂಪಿಸಿದ್ದೇನೆ. ಈ ಅಧ್ಯಯನದ ಬಲದಿಂದ ಐತಿಹ್ಯಗಳು ಯಾವ ಯಾವ ಮೂಲದಿಂದ ಸೃಷ್ಟಿಯಾಗುತ್ತವೆ ಎಂಬ ಸ್ಥೂಲ ಚಿತ್ರಣ ದೊರಕಿದಂತಾಗುತ್ತದೆ.

ಐತಿಹ್ಯಗಳ ಅಧ್ಯಯನದ ಸಂದರ್ಭದಲ್ಲಿ ಅವುಗಳು ಸೃಷ್ಟಿಯಾದ ಬಗೆಗೆ ವಾಸ್ತವ ಸಂಗತಿಯನ್ನು ದಾಖಲಿಸುವುದು ಅತ್ಯಂತ ಪ್ರಮುಖವಾದದ್ದು. ಅದಲ್ಲದಿದ್ದರೆ ಅಧ್ಯಯನದ ಉದ್ದೇಶ ಅಪೂರ್ಣವಾದಂತಾಗುತ್ತದೆ. ಈ ಸಂಪ್ರಬಂಧದ ವಿಷಯಕ್ಕೆ ಸಂಬಂಧಿಸಿದ ಪ್ರದೇಶದ ಭೌಗೋಳಿಕ ಮತ್ತು ಸಾಂಸ್ಕೃತಿಕ ವಿವರಣೆಗಳ ಕಿರು ಪರಿಚಯವನ್ನು ವಿವರಿಸಿಕೊಂಡು ನಂತರ ಇಲ್ಲಿಯ ಸಾಂಸ್ಕೃತಿಕ ಮತ್ತು ಪೌರಾಣಿಕ ಐತಿಹ್ಯಗಳ

ವಿವರಣೆಯನ್ನು ನೀಡಿದ್ದೇನೆ. ಐತಿಹ್ಯಗಳ ನಿಷ್ಪತ್ತಿ ನಿರ್ಣಯ ನಾವೆನಿಣಿಸಿಕೊಂಡಷ್ಟು ಸುಲಭವಲ್ಲವೆಂಬ ಪ್ರಜ್ಞಾಪೂರ್ವಕ ವಿಚಾರದಿಂದಲೇ ಮೂರನೇ ಅಧ್ಯಾಯವನ್ನು ರಚಿಸಿದ್ದೇನೆ. ಸಂಶೋಧಕನ ನಿಜವಾದ ಶ್ರದ್ಧೆ, ನಿಷ್ಠೆ , ಬುದ್ಧಿಮತ್ತೆ ಮತ್ತು ತರ್ಕಗಳು ಅನಾವರಣಗೊಳ್ಳುವುದೇ ಈ ಭಾಗದಲ್ಲಿ ಐತಿಹ್ಯಗಳನ್ನು ತರ್ಕಬದ್ಧವಾಗಿ, ಪ್ರಾಮಾಣಿಕವಾಗಿ ಮತ್ತು ವಾಸ್ತವವಾಗಿ ನಿರೂಪಿಸುವುದೇ ಇದರ ಮುಖ್ಯ ಉದ್ದೇಶ. ಈ ಅಧ್ಯಯನದ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ದಾಖಲಿಸಬಹುದು.

1. ಒಂದು ಐತಿಹ್ಯಕ್ಕೆ ಒಂದೇ ನಿಷ್ಪತ್ತಿಯನ್ನು ದಾಖಲಿಸಲಾಗಿದ್ದರೂ ಕೆಲವೆಡೆ ಅದೇ ಐತಿಹ್ಯಕ್ಕೆ ಬೇರೆ ಬೇರೆ ಕಥೆ, ವ್ಯಕ್ತಿ ವಿವರಗಳಿದ್ದಾಗ ಒಂದಕ್ಕಿಂತ ಹೆಚ್ಚು ಐತಿಹ್ಯಗಳನ್ನು ನಿರೂಪಿಸಲಾಗಿದೆ. ಸ್ವೀಕಾರಾರ್ಹವೆನಿಸಿದ ಐತಿಹ್ಯಗಳ ನಿಷ್ಪತ್ತಿಯ ನಿರ್ಣಯ ಕೈಗೊಳ್ಳುವುದು ಆ ಪ್ರದೇಶದ ಭೌಗೋಳಿಕ, ಸಾಮಾಜಿಕ ಐತಿಹ್ಯಗಳನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ನಡೆಸಿದ ಅಧ್ಯಯನ ಮತ್ತು ಆಕರಗಳ ಸಂಗ್ರಹಣೆಯಿಂದ ಹಾಗೂ ವಕ್ತೃಗಳ ಮಾಹಿತಿಗಳ ವಿವರಣೆಗಳ ವಿಶ್ಲೇಷಣೆಯಿಂದ ವಿವರಿಸಲಾಗಿದೆ.

2. ' ಅತಿ ಪರಿಚಯಾತ್ ಅವಜ್ಞೆ ' - ಅತಿ ಪರಿಚಯವಾದದ್ದು ಯಾವಾಗಲೂ ಅವಜ್ಞೆಗೆ ಗುರಿಯಾಗುತ್ತದೆ- ಎಂಬಂತೆ ಈ ತಾಲ್ಲೂಕು ಸುತ್ತಮುತ್ತಲಿನ ಐತಿಹ್ಯಗಳು ಕಂಠಸ್ತವಾಗಿದ್ದರೂ ನಿಷ್ಪತ್ತಿ ನಿರ್ಣಯದಿಂದಾಗಿ ಕೈಯೊಳಗಿನ ಕನ್ನಡಿಯಂತೆ ಅವುಗಳ ಸೃಷ್ಟಿಗೆ ಕಾರಣಗಳನ್ನು ಈ ಅಧ್ಯಾಯದಲ್ಲಿ ಸ್ಪಷ್ಟವಾಗಿ ಪ್ರತಿಪಲಿಸಲಾಗಿದೆ.

ಸಂಸ್ಕೃತಿ ಬದುಕಿನ ಒಂದು ಅಭಿನ್ನ ಅಂಗವೇ ಆಗಿದ್ದು , ಜನಪದರ ಸಂಸ್ಕಾರಗಳಿಂದ ಅವು ಪ್ರೇರೇಪಿತವಾಗುತ್ತವೆ. ಸಂಸ್ಕೃತಿ ಮಾನವನಲ್ಲಡಗಿರುವಂತೆ ಐತಿಹ್ಯಗಳನ್ನು ಕೂಡ ಇದೇ ರೀತಿ ಸೃಷ್ಟಿಸಿಕೊಂಡಂತಿದೆ. ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲು ಅನೇಕ ಸಂಚಾರಿ ಐತಿಹ್ಯಗಳು ಇದೇ ರೀತಿ ಸೃಷ್ಟಿಯಾಗಿವೆ. ಅವರ ನಿತ್ಯ ಬದುಕಿನ ಧಾರ್ಮಿಕ ನಂಬಿಕೆಗಳು ದಟ್ಟ ಜೀವನಾನುಭವಕ್ಕೊಂದು ಧಾರ್ಮಿಕ ಚೌಕಟ್ಟನ್ನು ನಿರ್ಮಿಸಿಕೊಂಡು ಹಲವಾರು ನಂಬಿಕೆ, ಆಚರಣೆಗಳನ್ನು ಉಳಿಸಿಕೊಂಡು ಅವು ಸಂಚಾರಿ ಐತಿಹ್ಯಗಳಾಗಿವೆ. ಇವು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನ ರೀತಿಯಲ್ಲಿದ್ದರೂ ಮೂಲ ಸ್ವರೂಪದ ಕಲ್ಪನೆ ಒಂದೇ ರೀತಿ ಇದೆ. ಈ ವಿವರಗಳನ್ನು ಕೊನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಉಪ ಸಂಹಾರ ಅಧ್ಯಾಯವೂ ಒಳಗೊಂಡಂತೆ ಪ್ರಸ್ತುತಿಗೊಂಡಿರುವ ಈ ಸಂಪ್ರಬಂಧ ಅತ್ಯಂತ ಶ್ರದ್ಧೆ ,

ಪ್ರಾಮಾಣಿಕತೆ ಮತ್ತು ಸ್ಪಷ್ಟತೆಗಳಿಗೆ ಸಾಕ್ಷ್ಯ ಒದಗಿಸುತ್ತದೆ ಎಂಬುದನ್ನು ಅತ್ಯಂತ ವಿನಮ್ರತೆಯಿಂದ ನಿವೇದಿಸುತ್ತಾ ತೀರ್ಥಹಳ್ಳಿ ತಾಲ್ಲೂಕು ಸಮುತ್ತಮುತ್ತಲಿನ ಐತಿಹ್ಯಗಳ ಅಧ್ಯಯನದ ಉದ್ದೇಶ ಸಫಲವಾಗಿದೆ ಎಂಬುದು ನನ್ನ ಭಾವನೆ.

ಟಿಪ್ಪಣಿಗಳು :

1. ಡಾ|| ಬಸವರಾಜ್ ನೆಲ್ಲಿಸರ - ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ಪುಟ 78, 2003
   ಡಾ||ಬಸವರಾಜ್ ನೆಲ್ಲಿಸರ, ಜನಪದ ಐತಿಹ್ಯಗಳು -ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ಸ್ವಾಗತ ಸಮಿತಿ, ಚಿಕ್ಕಮಗಳೂರು 2003

ಆಕರ ಗ್ರಂಥಗಳು

1. ಸಂಪಾದಕರು
   ಹೆಚ್.ಜಿ. ಲಕ್ಕಪ್ಪ ಗೌಡ
   'ಜನಪದ ಕೈಪಿಡಿ '
   ಕರ್ನಾಟಕ ಸರ್ಕಾರ ಕನ್ನಡ
   ಪುಸ್ತಕ ಪ್ರಾಧಿಕಾರ, ಬೆಂಗಳೂರು
   1997.

2. ಸಂಪಾದಕರು
   ಡಾ.ವೀರಣ್ಣ ದಂಡೆ
   ಡಾ.ಶ್ರೀಪಾದ ಶೆಟ್ಟಿ
   'ಸುವರ್ಣ ಜಾನಪದ ಲೇಖನಗಳು'
   (ಕನ್ನಡ ಜಾನಪದ ಸಾಹಿತ್ಯ
   ರೂಪಗಳು)
   ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ
   ಇಲಾಖೆ, ಕನ್ನಡಭವನ, ಜೆ.ಸಿ. ರಸ್ತೆ
   ಬೆಂಗಳೂರು
   2006.

3. ಲೇಖಕರು
   ಡಾ. ಅಂಬಳಿಕೆ ಹಿರಿಯಣ್ಣ
   'ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ '
   ಕರ್ನಾಟಕ ಸರ್ಕಾರ ಕನ್ನಡ
   ಪುಸ್ತಕ ಪ್ರಾಧಿಕಾರ, ಬೆಂಗಳೂರು
   1999.

4. ಲೇಖಕರು
   ಮೃಗವಧೆ ಸೂರ್ಯನಾರಾಯಣ
   'ಶ್ರೀ ಮೃಗವಧೆ ಕ್ಷೇತ್ರದ ಸಮಗ್ರ ಪರಿಚಯ '
   ಧರ್ಮದರ್ಶಿ ಸಮಿತಿ ಮತ್ತು ಜೀರ್ಣೋದ್ಧಾರ
   ಸಮಿತಿ, ಶ್ರೀ ಮೃಗವಧಾ ಕ್ಷೇತ್ರ,
   ಶೇಡ್ಗಾರು -ಅಂಚೆ, ತೀರ್ಥಹಳ್ಳಿ ತಾ॥
   1997.

5. ಲೇಖಕರು
   ಡಾ. ಬಿ.ಗಣಪತಿ
   'ತೀರ್ಥಹಳ್ಳಿ ಎಳ್ಳಮಾವಾಸ್ಯೆ ಜಾತ್ರೆ '
   ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
   ಶಂಕರಘಟ್ಟ , ಶಿವಮೊಗ್ಗ ಜಿಲ್ಲೆ
   2004.

ಪರಾಮರ್ಶನ ಗ್ರಂಥಗಳು :

1. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಗಳು	ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು 1970.
2. ಡಾ.ಅಂಬಳಿಕೆ ಹರಿಯಣ್ಣ	'ಮಲೆನಾಡ ಜನಪದ ಸಂಪ್ರದಾಯಿಗಳು ' ಪುಸ್ತಕ ಚಿಲುಮೆ, ತಿಲಕ್‌ನಗರ, ಮೈಸೂರು, 1978.
	'ಶಿವಮೊಗ್ಗ ಜಿಲ್ಲೆಯ ಜಾನಪದ ಕಥೆಗಳು ' ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1976.
	'ವೈಷ್ಣವ ಒಕ್ಕಲಿಗರ ಮೌಖಿಕ ಸಾಹಿತ್ಯ ' ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು 1999.
3. ದುರ್ಗಾ ಭಾಗವತ್	'ಭಾರತೀಯ ಜಾನಪದ ಸಮೀಕ್ಷೆ ' ಅನುವಾದ :ಕೆ.ಮರುಳಸಿದ್ದಪ್ಪ , ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು 1997.
4. 'ಕನ್ನಡ ವಿಶ್ವಕೋಶ ' ಸಂಪುಟ : 3	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1971.
5. ಕೆ.ಜಗನ್ನಾಥ ಶಾಸ್ತ್ರಿ	'ಕೌಲೇದುರ್ಗ' ಐ.ಬಿ.ಹೆಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು -09 1983.
6. ಡಾ. ಎಂ.ಚಿದಾನಂದಮೂರ್ತಿ	'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ' ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಮೈಸೂರು, 1979.

6. ಇಮ್ರಾಪುರ, ಸೋಮಶೇಖರ — 'ನಮ್ಮ ಜಾನಪದ ಸಮೀಕ್ಷೆ '
ಚೇತನಾ ಪ್ರಕಾಶನ, ಧಾರವಾಡ,
1979.

'ಜಾನಪದ ಸಾಹಿತ್ಯ ದರ್ಶನ '-15
ಪುರಾಣ, ಐತಿಹ್ಯ, ಪವಾಡ, ದಂತಕತೆ ;
ಧಾರವಾಡ : ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾನಿಲಯ
1994.

7. ಡಿ.ಜವರೇಗೌಡ — 'ಜಾನಪದ ಅಧ್ಯಯನ '
ಡಿ.ವಿ.ಕೆ.ಮೂರ್ತಿ ಪ್ರಕಾಶನ,
ಮೈಸೂರು
1976.

8. ಹಾ.ಮಾ.ನಾಯಕ್ — 'ಜಾನಪದ ಸ್ವರೂಪ '
ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ,
ಮೈಸೂರು
1971.

9. ಜಿ.ಶಂ. ಪರಮಶಿವಯ್ಯ — 'ಕನ್ನಡ ಜಾನಪದ ಕಥೆಗಳು '
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
1970

10. ಡಾ. ಕೆ.ವಿ. ಪುಟ್ಟಪ್ಪ — 'ಕಾನೂರು ಹೆಗ್ಗಡತಿ '
ಉದಯರವಿ ಪ್ರಕಾಶನ,
ಮೈಸೂರು
1970

,, ,, — 'ಮಲೆಗಳಲ್ಲಿ ಮದುಮಗಳು '
ಉದಯರವಿ ಪ್ರಕಾಶನ,
ಮೈಸೂರು
1974

,, ,, — 'ನೆನಪಿನ ದೋಣಿಯಲ್ಲಿ '
ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು
ವಿದ್ಯಾವರ್ಧಕ ಟ್ರಸ್ಟ್, ಮೈಸೂರು
1980.

11. ಪುಟ್ಟಣ್ಣ ವೈ.ಎಸ್. — 'ನಾ ಕಂಡ ಮಲೆನಾಡು '
ವೀರಶೈವ ಅಧ್ಯಯನ ಸಂಸ್ಥೆ,
ಶಿವಮೊಗ್ಗ, 1997.

12. ತೀ.ನಂ. ಶಂಕರನಾರಾಯಣ — 'ಜಾನಪದ ವಿಚಾರ '
ಹಂಸಧ್ವನಿ ಪ್ರಕಾಶನ, ಬೆಂಗಳೂರು
1978.

13. 'ಎಪಿಗ್ರಾಫಿಯಾ ಕರ್ನಾಟಕ '
ಸಂಪುಟಗಳು,2ನೇ ಮುದ್ರಣ — ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು

14. ಸುಬ್ಬಣ್ಣ ರೈ — 'ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು '
ಮುಂಬೈ ಕನ್ನಡ ವಿಭಾಗ,
ಮುಂಬೈ ವಿಶ್ವವಿದ್ಯಾನಿಲಯ
1994.

15. ಸಂಧ್ಯಾ ರೆಡ್ಡಿ ಕೆ.ಆರ್. — 'ಕನ್ನಡ ಜಾನಪದ ಕಥೆಗಳು '
ಬೆಂಗಳೂರು - ಕನ್ನಡ ಸಾಹಿತ್ಯ ಪರಿಷತ್
1982.

16. ಸಂಧ್ಯಾ ರೆಡ್ಡಿ ಕೆ.ಆರ್. — Meta Folklore, ಜನಪದವನ್ನು ಕುರಿತ
ಜಾನಪದ (ಜಾನಪದ ಗಂಗೋತ್ರಿ (ಸಂ.)
ತಿಪ್ಪೇಸ್ವಾಮಿ ಜಿ.ಆರ್.), ಬೆಂಗಳೂರು,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,

17. ಸಿ.ಪಿ. ಕೃಷ್ಣಕುಮಾರ್ — 'ಜಾನಪದ ಸಾಹಿತ್ಯ ಪ್ರವೇಶಿಕೆ '
ಮೈಸೂರು ಭಾರತಿ ಪ್ರಕಾಶನ, 1989.

18. ಹಿರೇಮಠ ಎಸ್.ಎಸ್. — 'ಜಾತ್ರೆಗಳು '
ಹೊಸಪೇಟೆ ಸಮತಾ ಪ್ರಕಾಶನ, 1993.

19. ಡಾ. ಪುರುಷೋತ್ತಮ ಬಿಳಿಮಲೆ — ' ಜನಪದ ಕ್ಷೇತ್ರಕಾರ್ಯ ಆಧುನಿಕ ವಿಧಾನಗಳು '
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1993.

20. Degh Linda — 'Folk Narrative '(In Folklore and Folklife
(Ed) Dorson M Richard)
London : The University of
Chikago Press, 1972.

21. Flower H.W. — ' The pocket Oxfor Dictionary of
Current English ; Delhi : Oxford
Universitfy Press, 1982.

22. Ghosh A.K. — 'Legends from Indian History ' ; New Delhi :
Children's Book Trust
1985.


23. Kittel R.F. — ' Kannada , English Dictionary ' ;
Mangalore :Bassel Mission Press, 1894.

24. ಡಾ. ಎಂ.ಎಂ. ಕಲ್ಬುರ್ಗಿ — 'ಸಂಸ್ಕೃತಿ ವಿಕೃತಿ'
ಸುವರ್ಣ ಸಾಹಿತ್ಯ ಗ್ರಂಥಮಾಲೆ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕನ್ನಡ ಭವನ, ಬೆಂಗಳೂರು
2006.

25. ಡಾ.ಬಸವರಾಜ್ ನೆಲ್ಲಿಸರ — 'ಜನಪದ ಐತಿಹ್ಯಗಳು'
ತರಳಬಾಳು ಹುಣ್ಣಿಮೆ ಸ್ಮರಣ
ಸಂಚಿಕೆ ಸ್ವಾಗತ ಸಮಿತಿ,
ಚಿಕ್ಕಮಗಳೂರು 2003

26. ಡಾ. ಶ್ರೀಕಂಠ ಕೂಡಿಗೆ — 'ಪ್ರಾದೇಶಿಕ ಜಾನಪದ '
(ಸಂ)ಡಾ.ಸಿ.ಎಸ್.ಶಿವಕುಮಾರಸ್ವಾಮಿ
(ಕುಮಾರಚಲ್ಯ) ಲೇಖನ :
'ಮಲೆನಾಡಿನ ಪರಂಪರಾನುಗತ ನಂಬಿಕೆಗಳು
ಮತ್ತು ಆಚರಣೆಗಳು '
ಪ್ರಕಟಣೆ : ಕನ್ನಡ ಭಾರತಿ, ಕುವೆಂಪು
ವಿಶ್ವವಿದ್ಯಾನಿಲಯ, ಶಂಕರಘಟ್ಟ .
2004.

27. ಡಾ. ಅರವಿಂದ ಮಾಲಗತ್ತಿ — ' ಕರ್ನಾಟಕ ಜಾನಪದ '
ಜಾನಪದ ಕ್ರೀಡೆಗಳು
(ಸಂ) ಜೀಶಂಪರಮಶಿವಯ್ಯ,
ಕರ್ನಾಟಕ ಜಾನಪದ
ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು
1989.



ಅನುಬಂಧ -1

ಐತಿಹ್ಯಗಳು	ವಕ್ತೃ	ವೃತ್ತಿ
ರಾಮತೀರ್ಥ	ಶ್ರೀ ರಾಜಶೇಖರ ಭಟ್ ಶ್ರೀ ರಾಮೇಶ್ವರ ದೇವಸ್ಥಾನ, ತೀರ್ಥಹಳ್ಳಿ	ಅರ್ಚಕರು
ತೀರ್ಥಹಳ್ಳಿ	ಶ್ರೀ ಲಕ್ಷ್ಮೀಶ ವಿ.ತಂತ್ರಿ ವ್ಯಾಸರಾಯನ ಅಗ್ರಹಾರ ರಥಬೀದಿ - ತೀರ್ಥಹಳ್ಳಿ	ಅರ್ಚಕರು
ಕವಲೇದುರ್ಗ	ಶ್ರೀ ಶೇಷಪ್ಪ ಗೌಡ, ಕವಲೇದುರ್ಗ	ಕೃಷಿಕರು
ಮೃಗವಧೆ	ಶ್ರೀ ಸೂರ್ಯನಾರಾಯಣ ಜೋಯಿಸ್ ಮೃಗವಧೆ ಶ್ರೀ ಶ್ರೀಧರಮೂರ್ತಿ, ಮೃಗವಧೆ	ಕೃಷಿಕರು ಕೃಷಿಕರು
ಭೀಮನಕಟ್ಟೆ	ಶ್ರೀ ಗುರುರಾಜ ಆಚಾರ್ಯ ಮುಳುಬಾಗಿಲು ಶ್ರೀ ಸುರೇಶ್, ಭೀಮನಕಟ್ಟೆ	ಅರ್ಚಕರು ಕೃಷಿಕರು
ಆರಗ	ಶ್ರೀ ವೆಂಕಟೇಶ್, ಕುಂಬಾರಗೇರಿ	ಕೃಷಿಕರು
ಗುತ್ಯಮ್ಮದೇವಿ	ಶ್ರೀಮತಿ ಲಕ್ಷ್ಮೀದೇವಮ್ಮ ,ಆರಗ	ಗೃಹಿಣಿ
ಅರುಣಗಿರಿ	ಶ್ರೀ ಅಣ್ಣಪ್ಪ ನಾಯಕ್ ಕುಂಬಾರಗೇರಿ ಡಾ॥ ಬಿ.ಗಣಪತಿ, ಬಾಳಗೋಡು	ಕೃಷಿಕರು ಪ್ರಾಧ್ಯಾಪಕರು
ನಡಬೂರು	ಶ್ರೀ ಶ್ರೀಪಾದ್ ಭಟ್, ನಡಬೂರು	ಅರ್ಚಕರು
ಕಳ್ಳರಮನೆ	ಶ್ರೀ ಚೂಡಪ್ಪ ಗೌಡ, ಕಳ್ಳರಮನೆ	ಕೃಷಿಕರು
ಮಾರಿಜಾತ್ರೆ	ಶ್ರೀ ಮುಕುಂದ ನಾಯಕ್, ಬುಕ್ಲಾಪುರ	ಕೃಷಿಕರು
ಅಂಬುತೀರ್ಥ	ಶ್ರೀ ಶ್ರೀರಾಮ ಜೋಯಿಸ್, ಅಂಬುತೀರ್ಥ	ಅರ್ಚಕರು
ಮಾಸ್ತಿಯಮ್ಮ	ಶ್ರೀ ಮಂಜಪ್ಪ ನಾಯಕ್, ಕೆಸಲೂರು	ಕೃಷಿಕರು
ಸಿಬ್ಬಲಗುಡ್ಡೆ	ಶ್ರೀ ಎ.ಎಸ್.ಭಾಸ್ಕರ ಭಟ್, ಸಿಬ್ಬಲಗುಡ್ಡೆ	ಅರ್ಚಕರು

ಅನುಬಂಧ -2

ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ಇವರಿಂದ ಪ್ರಕಟಣೆಗೊಂಡ
ಶ್ರೀಮತಿ ಮಹಿಷಿ ಭಾನುಮತಿಯವರು ಸಂಪಾದಿಸಿದ
'ಸಹ್ಯಾದ್ರಿ ಖಂಡದ ಉತ್ತರಾರ್ಧದಲ್ಲಿ (95,96,97,98 ನೇ ಅಧ್ಯಾಯಗಳಲ್ಲಿ)
ತುಂಗಭದ್ರಾ ತೀರದ ತೀರ್ಥಕ್ಷೇತ್ರದ ವರ್ಣನೆಗಳಿದ್ದು , ಅದರಲ್ಲಿ ಬರುವ ಮೃಗವಧೆ
ಕ್ಷೇತ್ರಕ್ಕೆ ಸಂಬಂಧಿಸಿದ ವರ್ಣನೆಯ ಶ್ಲೋಕಗಳು.

'ಶ್ರೀ ಶತಾನೀಕಃ ॥

ವಿಪ್ರಾತಿವೈಚಿತ್ರ್ಯತಮಂ ತ್ವಯೋದಿತಮಿದಂಶುಭಂ । ॥1॥

ಯತ್ಕುರಂಗವಧಾಸ್ಪಷ್ಟಂ ರಾಘವೇಂದ್ರ ಪ್ರಚೋದಿತಂ ।
ತದೇವಮಾನಸಂ ಮೇದ್ಯ ಪ್ರಲಾತ್ತಯತಿವಲ್ಲಭ ॥2॥

ಪರಿಹಾರಯತಿಚ್ಛಂತಾಂ ಹೃತ್ಯಂಕು ವಿವಸಂಸ್ಥಿತಾಂ ।
ಬಹುಶ್ರುತೋರಹಸ್ಯಾನಿ ಗುರೋರ್ವಕ್ತ್ವ ಸರೋರುಹಾತ್ ॥3॥

ಅನಾದಿ ಪುರುಷೋ ರಾಮಃ ಪ್ರಾಕೃತೀಂತನುಮಾಶ್ರಿತಃ
ಅಪಾಲಯಕೌಶಿಕಸ್ಯಮಹಾಸತ್ವಂ ಮಹಾದ್ಯುತಿಃ ॥4॥

ಅಥ್ವಾಂಕ್ಷೀಚ್ಛಾಂಕರಂಚಾಪಂ ಲಬ್ಧ ಸೀತಾಸ್ವಯಂವರ ॥
ಪಿತುರ್ನಿರ್ದೇಶಾದ್ವಿಪಿನಂ ಸೀತಯಾಲ ಕ್ಷ್ಮಣೇನಚ ॥5॥

ಚಿತಾಚೀರೇಖ ಮಾಶ್ರಿತ್ಯ ದಂಡಕಾನ್‌ಪ್ರವಿಶೀತಿಶಃ ॥
ತತಃ ಸತ್ರಾಹವೇರಾಮಸ್ತಿಷ್ಠನ್ನೇವಾವವೀಕ್ಷಿಲ ॥6॥

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮ ಕರ್ಮಣಾಂ ॥
ಖರಂಚ ದೂಷಣಂಚೈವ ತಥತ್ರಿಶಿರ ಸಂರಣೇ ॥7॥

ಕೃದ್ಧೇನತೇಷಾಂ ಪತಿನಾ ರಾವಣೇನ ಪ್ರಚೋದಿತಂ ॥
ತತೋಮಾಯಾ ವಿನಂದೃಷ್ಟ್ವಾ ಮಾರೀಚನ್ನಾಮರಾಕ್ಷಸಂ ॥8॥

ಜಾಯಯಾಪ್ರೇರಿತೋ ರಾಮೋ ಧನುರಾದಾಯ ವೀರ್ಯವಾನ್ ॥
ವಿಧಾಯತಸ್ಯದೈತ್ಯಸ್ಯ ಬಹುರೂಪಮಗಾದಿತಿ ॥9॥

ನಾನಾಕ್ಷೇತ್ರಾಣಿ ತೀರ್ಥಾನಿ ಋಷೀಣಾಮಾಶ್ರಮಾಣಿಚ ॥
ವಿಹಾಯತುಂಗಭದ್ರಾಯಾಃ ದಕ್ಷಿಣೇರೋದಸಿಸ್ವರಃ ॥10॥

ಆಮಾರೀತ್ಕಥಮಾಖ್ಯಾಹಿ ಋಷೀಣಾಮಗ್ರಸಂಚರಂ॥
ಸಾಯಕಾಗ್ರಸ್ಯರಾಮಸ್ಯ ತೈಕ್ಷ್ಣತ್ವಂ ನಾತ್ರಿವಾಕಿಮು ॥11॥

ದೋರ್ದಂಡ ಲಕ್ಷ್ಮೀಸ್ಸೈವ ತ್ರಪಾಸಿಂಧೌ ನಿಮಚ್ಚಿತಾ ॥
ತಥಾಮಹಾನುಭಾವಸ್ಯ ಪ್ರಜ್ಞಾಶಕ್ತಿರ್ಭವೇನ್ನರಂ ॥12॥

ಚಿತ್ರಕೂಟಸಿತಾರಾಮಃ ಕುಶಾಗ್ರೇವಿಷ್ಟರಸ್ಯಚ ॥
ಪೈತಾಮಹಾಸ್ತ್ರಸಂಧಾಯ ಜಯಂ ತಾಮನಿಯೋಜಯತ್ ॥13॥

ಸೀತಾಪರಾಧೀ ಪಾಪಾತ್ಮಾಕಾಕರೂಪಧರಃಪುರಾ ॥
ಭಿಭಾಯತೇನೈವಾಸ್ತ್ರೇಣಬಭ್ರಾಮ ಭುವನತ್ರಯಂ ॥14॥

ಬ್ರಹ್ಮೇಂದ್ರಾದಿಭಿಃಸರ್ವೈರ್ನಾರಕ್ಷಿಧ್ವಾಂಕ್ಷ ರೂಪಧತ್ ॥
ಅಥೈಂದ್ರೋಪಿ ರಾಮಸ್ಯವವಂದೇ ಚರಣಾಂಬುಜಮ್ ॥15॥

ಅರಕ್ಷೀದ್ರಾಘವೋಭೀ ತಾಮೂರ್ತತ್ರಾಣ ಪರಾಯಣಾ ॥
ಏತಾದೃದ್ಗುಣ ಸಂಪನ್ನೋ ದಂಡ ಕಾತ್ಕಥಮಾನತಃ ॥ 16॥

ಅನೇಕ ರಕ್ಷಸಾಂ ಮಧ್ಯೇಮಾರೀಚನ್ನಾವಧೀತ್ಕಥಂ ॥
ಧನುರ್ಧರಾಣಾಂ ಅಗ್ರೇಗ್ರಂ ರಾಮಃ ಶಸ್ತ್ರಭೃತಾಂವರಃ ॥17॥

ಏತತ್ಸರ್ವಂ ವಿಸ್ತರೇಣ ಸಮಾಖ್ಯಾಹಿ ಮುನೀಶ್ವರಃ ॥
ಕೋವಿದಾನಾಂ ಸ್ವಭಾವಂಹಿ ಸಂಶಯಸ್ಯಾಪನೋದನಂ ॥18॥

ನೂನಂಭವಾದೃಶಾಂಜನ್ಮದರ್ವೇಷಾಮುಪಕಾರಕಂ ॥
ಶ್ರೀಶೌನಕಃ -
ಓ ಭೋ ! ನೃಪತಿಶಾರ್ದೂಲ ಮಹಾಶಂಕಾಸ್ಪದಂತಿದಂ ॥ ॥19॥

ಸಾಧು ಸಾಧುತ್ವಯಾಪೃಷ್ಟಂ ಲೋಕಾನುಗ್ರಹಕಾರಕಂ ॥
ನಹಿ ಪ್ರಜಾವತಾಂ ಮಧ್ಯೇತ್ವತ್ಸಮೋ ಭುವನತ್ರಯೆ ॥20॥

ವಿದಾಮಿ ವಿಸ್ತರೇಣಾದ್ಯ ಶ್ರೂಯತಾಂಸಾದರೇಣವೈ ॥
ವಿದ್ಯದೇಕೋಪಿಹೆಸತ್ವ ಚಿತ್ರಂಚಿತ್ರ ಕಥಾಮೃತಂ ॥21॥

ಪುರಾಕೈಲಾಸ ಶಿಖರೇ ಸಿದ್ಧಗಂಧರ್ವ ಸೇವಿತೆ ॥
ವಿಚಿತ್ರಮಯ ಸೋಪಾನ ಮಣಿಸಿಂಹಾಸನೇಶುಭೇ ॥22॥

ವಿರೇಜೆ ಶಿವಯಾಸಾರ್ಥಂ ಶಂಕರೋ ಲೋಕ ಶಂಕರಃ ॥
ಸದಾಶಿಷೇವಿರೇದೇವಾಃ ಶಕ್ರಾದ್ಯಾ ಲೋಕ ಪಾಲಕಾಃ ॥23॥

ಮಹರ್ಷಯೋಗೌತಮಾದ್ಯಾಃ ಸನಕಾದ್ಯಶ್ಚಯೋಗಿನಃ ॥
ಜಗುರ್ಗಂಧ ರ್ವಪತಯೋವೀಣಾಮಾಲಿಂಗ್ಯಕಿನ್ನರಾಃ ॥24॥

ನನೃತುರ್ನಾಕಗಣಿಕಾಃ ರಂಭಾದ್ಯಾನೇಕಯೋ ಷಿತಾಃ ॥
ನಂದೀಭೃಂಗಿಃಪುರೋಗಾದ್ಯಾಃ ಚಕ್ರುರ್ವೈಯೋಗಿರೇಂಶ್ರಿಯಾಂ ॥25॥

ಚಾಮರಂ ಬೀಜಯಾಮಾಸುಃ ಬ್ರಾಹ್ಮೀತ್ಯಾದ್ಯಾಶ್ಚಮಾತರಃ ॥
ದಧಾರ ಧನದಃ ಶ್ವೇತಚ್ಛತ್ರಂ ರಾಕೇಂದು ಸನ್ನಿಭಂ ॥26॥

ಅಂಭಸಾಮಧಿಪಸ್ತಸ್ಯತಾ ಲವೃಂತಮವೀಜಯತ್ ॥
ವೈಶ್ವಾನರಸ್ತು ಭೃಂಗಾರುಮಗ್ರೇತ ಸ್ಕೈದದೌಕಿಲ ॥27॥

ತಸ್ಮಿನ್ ಕಾಲೇ ವಿತೀಹೋತ್ರೋಜಗ್ರಹಾದರ್ಶಮುತ್ತಮಮ್ ॥
ಪಾದುಕೇಧಾರ ಯಾಮಾಸತ್ವೇಕದಾನರ ವಾಹನಃ ॥28॥

ತಾಂಬೂಲ ಪುಟ್ಟಿಕಾಂಧತ್ರೇವಾಯುರೀಶ್ವರ ಸಮ್ಮುಖೇ ॥
ಆದಿತ್ಯಾದಿಗ್ರಹಾಃ ಸರ್ವೇಸ್ವೇಷಾಂ ನೈಯೋಗಮಾಶ್ರಿತಾಃ ॥29॥

ಯಕ್ಷಾಸುರಾದಾನವಾಶ್ಚಚತುಸ್ವೇಷಾಂ ಕ್ರಿಯಾಂತದಾ ॥
ತಸ್ಮಿನ್ಕಾಲೇ ಭವಾಂಗಸ್ಥಾಭವಾನೀಶಿವಮಾದರಾತ್ ॥30॥

ಊಚೇಮನೋಜ್ಞಾಂ ವಾಣೇಂಸಾಸ್ಮಿತ ಪೂರ್ವಂನೃಪೋತ್ತಮ ॥
ಚಂದ್ರಚೂಡಾಸ್ಮದೀಯಂಚ ವಾಕ್ಯಮಾರ್ಕಣಯಾಧುನಾ ॥31॥

ಅಹಂಕಾರಂ ಸರಸ್ವತ್ಯಾ ವ್ಯಪೋಹಯಮಹಾಮತೆ ॥
ಪತಿರ್ಮೇ ಪಂಚವಕ್ತ್ರೋಯಂ ಪ್ರಿಯಃಪಂಚ ಮುಖಸ್ತುತೇ ॥32॥

ಕಿಮಾವಯೋಸ್ತಾರತಮ್ಯಂ ಅತಿ ಶ್ರೇಷ್ಠಾಸ್ಮಿಭಾಷಸೆ ॥
ಪತಿರ್ಮೇ ಪಂಚವಕ್ತ್ರೋಯಂ ಪ್ರಿಯಃಪಂಚ ಮುಖಸ್ತುತೇ ॥33॥

ಕಿಮಾವಯೋಸ್ತಾರತಮ್ಯಂ ಅತಿ ಶ್ರೇಷ್ಠಾಸ್ಮಿಭಾಷಸೆ ॥
ತ್ರಯ ಸ್ತ್ರಿಂಶತ್ಕೋಟಿದೇವಾಃ ದಾಸಾಸ್ಯುಃ ಬ್ರಹ್ಮರ್ಣಪರಂ ॥34॥

ತಸ್ಮಾತ್ಸರ್ವಾಸುಗಾಥಾಸು ಸುರಶ್ರೇಷ್ಠ ಇತೀರತಃ ॥
ತೇಷಾಂ ಮಧ್ಯೇ ಶತಾನಂದಃ ತ್ರಯೀಮೂರ್ತಿಶ್ಚಕಾಸತೆ ॥35॥

ತಮೋಗುಣಸಮಾಶ್ಲಿಷ್ಟೋ ಭರ್ಕಾತೇ ಸರ್ಪಭೂಷಣಃ ॥
ವಿರೂಪಾಕ್ಷಃ ಸ್ಮಶಾನಸ್ಥೋ ಭೂತಸಂಘ ನಿಷೇವಿತಃ ॥36॥

ವೃದ್ಧೋಕ್ಷಪಾಹಃ ಕ್ರೂರೋಸೌ ಸದಾಭಸ್ಮಾಂಗಲೇಪನಃ ॥
ಭೈಕ್ಷವೃತ್ತಿರುದಾರಾಂಗಃ ನಾಗಚಲವರ್ಮೋತ್ತರೀಯವಾನ್ ॥37॥

ದಿಗಂಬರೋ ದೀರ್ಘಶಿಶ್ನಃ ಕಪಾಲಾಭರಣಃ ಶಠಃ ॥
ನೈಕತ್ರಸ್ಥಿತಿರಸ್ಯಾಸ್ತಿಕುಂಡಲ್ಯಾವಕ್ರಕುಂಡಲಃ ॥38॥

ಇತ್ಯಾದಿಗರ್ವವಚ ನೈರಾಲಾ ಪಂಕುರುತೇಸದಾ ॥
ತಸ್ಯಾಹಂಕಾರ ವಾತ್ಯಾಸಿ ನಸಿಷೇಹೆಮುಹೇಶ್ವರಾ ॥39॥

ಶೌನಕಃ - ಅಪರ್ಣಾವಾಕ್ಯ ಮೂಕರ್ಣ್ಯಹತಸ್ಮೇರ ಮುಖಾಂಬುಜಂ ॥
ವಾಕ್ಯಂಹೇತ್ವರ್ಥ ಸಂಯುಕ್ತ ಸಾಂತ್ವಪೂರ್ವಮಭಾಷತ ॥40॥

ಯೇ ಕಲ್ಯಾಣಿ! ನಿಭದ್ರಂತೆ ತವರೂಪಾಹಿಭಾರತಿ ॥
ತವಸ್ವರೂಪ ಮಾದೇವೀತ್ವದ್ರೂಪೇದಂ ಜಗತ್ರಯಂ ॥41॥

ಸರ್ವಂವಿಲಯಮಾಯಾತಿ ಸ್ವಯಂಭೂನಾಂ ನವಾಂಸ್ಯಕೆ ॥
ಆವಾಂವತವಿಹೆಸುಭ್ರು ಶಾಶ್ವತೀಂ ತನುಮಾಶ್ರಿತಾ ॥42॥

ಸರ್ಗಾದೌಭೂಯವಿವಾವಾಂ ಸರ್ವಾನ್ಕುರ್ವಾವಹೇಪ್ರಿಯೆ ॥
ಆವಾಭ್ಯಾಮಗ್ರತಸ್ತತ್ರ ಜಾಯಂತಿ ತ್ರಿವಿಧಾಗುಣಾಃ ॥43॥

ಸತ್ವೇನ ವಿಷ್ಣುಃ ಸಂಜಾತೋರಜಸಾದ್ರುಹಿಣೋಭವೇತ್ ॥
ತನುಮಸೀತ್ಕಾಲರುದ್ರಃಸ್ಯಥಾಸನ್ ಶಕ್ತಯ ಸ್ತ್ರಿಕಾಃ ॥44॥

ಸ್ಥಿತಿಕರ್ಮಾಣಿ ಸತ್ತಸ್ಯ ವಿಷ್ಣೋರ್ಲಕ್ಷ್ಮೀತಿಗದ್ಯತೆ ॥
ಸೃಷ್ಟಿಕರ್ಮರತ ತಸ್ಯಾಸ್ಯವಾಣೀ ಬ್ರಹ್ಮಣಿ ಮಾಪಸಾ ॥45॥

ನಾಶಕಾರಣ ಭೂತಸ್ಯ ರುದ್ರಸ್ಯಲಯಕಾರಿಣಿ ॥
ತಮಸಾಚ್ಛಾದಿತಾಯಾತ್ತು ಸಾಕಾಲೀತ್ಯಭಿಧೀಯತೇ ॥46॥

ಲೋಕತ್ರಯಂ ಮೋಹಯಸೆತ್ವಮೇಚತ್ರಿಗುಣಾತ್ಮಿಕಾ ॥
ತ್ರಿಷು ಲೋಕೇಷು ವಾ ಪ್ರಾಣಿಷ್ವಂತಸ್ಥಿತಾಸತಿ ॥47॥

ಭಾರತೀಯಾ ಪ್ರಸಿದ್ಧಾಸಾ ಲೋಕಪ್ರತ್ಯಯ ಗೋಚರ ॥
ಪಂಚಾಶದ್ವರ್ಣಾನಿತಯಾ ಚೈನಯಾ ವಂಚ್ಯತೆ ಜಗತ್ ॥48॥

ಸಾಮಸಂಗೀತ ಸಾಹಿತ್ಯ ಗಾನವಿದ್ಯಾದಯಃಪರೇ ॥
ಹಸ್ತ್ಯಾಂಗೇಷು ಸಮುದ್ಭೂತಾ ರಾಗಾಸ್ತಾಲಾಃ ಸಹಸ್ರಶಃ ॥49॥

ತಥೈವತಾಲಗೀತಾಶ್ಚಪ್ರಬಂಧಾಃ ಕವಿಸಮ್ಮತಾಃ ॥
ವೇದಾನಂತಾಶ್ಚಶಾಸ್ತ್ರಾಣಿ ಪುರಾಣಾನಿತಥೈವಚ ॥50॥

ಸ್ಮೃತ್ಯಾಗಮಾನಿಕಾವ್ಯಾನಿ ರಾಮಾಯಣ ಮುಖಾನಿಚ ॥
ಭಾರತಃ ಪಂಚಮೋವೇದಃ ಸಾಕ್ಷಾದ್ವ್ಯಾಸಮುಖೋದಿತಃ ॥51॥

ತರ್ಕಮೀಮಾಂಸ ಭಗಣವೇದಾಂತಪ್ರಮುಖಾನಿಚ ॥
ಸಪ್ತಕೋಟಿ ಮಹಾಮಂತ್ರಾಃ ನವವ್ಯಾಕರಣಾನಿಚ ॥52॥

ಚತುಷ್ಷಷ್ಟಿಮಹಾವಿದ್ಯಾಃ ಶಕ್ರಜಾಲಪುರಃಸರಾಃ ॥
ನೀತಿ ನ್ಯೆಯೋಗಕರಣಾಃ ಮಾರಣೋಚ್ಚಾಟನೋದಯಃ ॥53॥

ಋಷೀಣಾಂ ವಕ್ತ್ರಸಂಜಾತಾಃ ಶೇಷಾ ಗಾಥಾತ್ಸಹಸ್ರಶಃ ॥
ತೇಷಾಮಧ್ಯೇ ಗಾನವಿದ್ಯಾ ಸರ್ವೇಷಾಂ ಪ್ರೇಮವರ್ಧನಾ ॥54॥

ತಾಂಚತೇ ಕಥಯಿಷ್ಯಾಮಿಶ್ರೂಯತಾಂ ಗೌರಿಸಾದರಾತ್ ॥
ಕಾಂಬೋಧೀ ಭೈರವೀ ದೇಶೀ ಕಲ್ಯಾಣೀ ಮಾರವಿತಥಾ ॥55॥

ಸಾವೇರೀ ಚಾಹರೀಕೇ ತಾರಗೌಳಿ ನಾಟಿಕಾವರಾ ॥
ತೋಡೀಮುಖಾರೀ ಸೌರಾಷ್ಟ್ರ್ಯ ಶಂಕರಾಭರಣಾಪರಾ ॥56॥

ಘಂರವಾಕಂಠರವೀಧನ್ಯಾಸೀ ರೇವಗೌಪತಿ ॥
ಮಯೂರ ಕಾಹಲೀ ಶ್ರೇಷ್ಠಾ ಸೋಮೀಮುಖವಿಕಾಸಿಕಾ ॥57॥

ದ್ವಿರೇಪಾ ರಾವಿಣೀ ಸೀಲೀಘನೀ ಘನವರಾಲಿಕಾ ॥
ಕಾಪೀ ಚಾರಭತೀಚೈವ ಕಾಳಿಕೀಮಧುಮಾಧವೀ ॥58॥

ಸಾರಂಗರಾಗೋ ಗಾಂಧರ್ವೀಪಾತಳೀ ಚಿತ್ರಲಾಸಕೇ ॥
ದ್ವಾತ್ರಿಂಶದೇವೇ ಲೋಕೇಷು ಘನರಾಗಾಃ ಪ್ರಕೀರ್ತಿತಾಃ ॥59॥

ಯೇತೇರಾಗಾಸ್ಸರಸ್ವತ್ಯಾಸರ್ವಾಂಗೇಷು ಸಮುದ್ಭವಾಃ ॥
ಕಂಠೇಕಾಂಬೋಧಿಕಾಜಾತಾ ಲಲಾಟೇ ಭೈರವೀತಥಾ ॥60॥

ದೇಶೀಧಮ್ಮಿಲ್ಲ ಮೂಲಾಯಾಃ ಸಂಭೂತಾಸುಖಕಾರಿಣೀ ॥
ಕಲ್ಯಾಣಿ ಮಾರಪೀಚ್ಯೇತೆ ನೇತ್ರಾಭ್ಯಾಮುದಿತೇಪರೇ ॥61॥

ಜಾತೆನಾಸಾಭಿಲಾಭ್ಯಾಂಚ ಸಾವೇರೀ ವೈಪರಾಹರೀ ॥
ಕೇತಾರ ಗೌಲೀನಾಟೀತು ಶ್ರೋತ್ರಾಭ್ಯಾಂದ್ವೇಸಮುದ್ಭವೇ ॥62॥

ತೋಡೋಮುಖಾರೀ ಸೌರಾಷ್ಟ್ರ್ಯ ಭ್ರುವೋರ್ಮಧ್ಯೆಸಮುದ್ಭವಾಃ ॥
ಬ್ರಹ್ಮರಂದ್ರಾತ್ಸಮುದ್ಭೂತಾ ಶಂಕರಾಭರಣಾಪರಾ ॥63॥

ರಸಜ್ಞಾಯಾಸಮುತ್ಪನ್ನಾಪರಾಘಂಟಾರವೀತಥಾ ॥
ದಂತಪಕ್ತಿಃಸ್ಸಮಾಜಿಹ್ವೇ ಶ್ರೇಷ್ಠಾಕಂತರವೀಮತಾ ॥64॥

ಧನ್ಯಾಸೀರೇವಗೋಪೀತು ಕಪೋಲಾಭ್ಯಾಂ ಭಭೂವತುಃ ॥
ಮಯೂರಕಾಹಲೀಗಾರಃ ಸಮಸ್ವಿಮುಖತೋಭವೇತ್ ॥65॥

ದೋಭ್ರ್ಯಾಮುಭಾಭ್ಯಾಮೇಧಾತೇ ಮಹಿಷ್ಯಾಂ ಪರಮಾತ್ಮನಃ ॥
ದ್ವಿರೇಫರಾವಿಣೀ ಸೀತ್ಯಾ ಘನೀಕರ ತಲೋಭವ ॥66॥

ಉರಃಸ್ಥಲಾತ್ಸಮಭವತ್ತಸ್ಯಾಘನರವೀತ್ತಥಾ ॥
ತಥೈವ ಕಾಪ್ಯಾರಭಟ್ಯೋವಕ್ಷೋಜಾಭ್ಯಾಂ ಸಮುದ್ಭವ ॥67॥

ಸಂಜಾತಾ ಕೌಶಿಕೀ ತಸ್ಯಾಃನಾಭೀ ಕಮಲ ಮಧ್ಯತಃ ॥
ಉಪಸ್ಥಾತ್ಸಮಭೂದ್ದೇವ್ಯಾಃರಮ್ಯಾಸಾ ಮಧುಮಾಧವೀ ॥68॥

ಸಾರಂಗರಾಗೌ ಗಾಂಧರ್ವೀ ಜೋರೂಭ್ಯಾಮುಪಜಾಗ್ರತಃ ॥
ಭಭೂವತುಃ ಪದಾಭ್ಯಾಂಚ ಪಾಂಚಾಲೀ ಚಿತ್ರಲಾಸಕೀ ॥69॥

ತಸ್ಯಾಏಕೈಕರೋಮ್ಣಾತು ಜಾತಾ ರಾಗಾಃ ಪೃಥಕ್ ಪೃಥಕ್॥
ತ್ರಿಕೋಟಿ ಸಂಖ್ಯಾಲೋಕೇಸ್ಮಿನ್ ರಾಗಾಭೂವನ್ ಶಿವಾತ್ಮಿಕಾ ॥70॥

ತಥೈವ ಚೋಪರಾಗಾಣಾಂ ತತ್ತತ್ತಾಲ ಲಯಾನಿಚ ॥
ತೇಷಾಂನಾಮಾನಿಚಾಕ್ಯಾತಂ ಅಕ್ಷಮಃಫಣಿರಾಟ್‌ಸ್ವಯಂ ॥71॥

ಯೇತೇಷಾಂ ರಾಗಭೇದಾನಾಂ ತಾಲಭೇದಾದ್ಯನೇಕಥಾ ॥
ಉತ್ತುಮಾದಿ ವಿಭೇದೇನ ನಾಭಿಕಂಠ ಮುಖಾದಿಷು ॥72॥

ಏಕೈಕಂ ತ್ರಿವಧಂ ಪ್ರೋಕ್ತಂ ನಿಷಾಧಾದಿ ಸ್ವರೈಶ್ಚತೆ ॥
ಪ್ರತ್ಯೇಕ ಮೇಷಾಂ ತ್ರಿಷಷ್ಟತ್ವಮುವಾಪ್ನುಯಾತ್ ॥73॥

ಉದಾತ್ತಾದಿ ವಿಭೇದೇನ ಭವಂತಿಹಿ ಚತುರ್ವಿದಾಃ ॥
ಲೋಕೇತಾಲಾದ್ವಿಪಂಚಾಶಂ ದುತ್ತರಸ್ಥಶತದ್ವಯಂ ॥74॥

ಪ್ರತ್ಯೇಕಮೇಷಾಂ ರಾಗಾಣಾಂ ವಕ್ರೇಷುಚ ನಿಜೇಷು ಚ॥
ಭವಂತಿ ಬಹುಭೇದಾನಿ ಚೇಕೈಕಸ್ಯಪೃಥಕ್ ಪೃಥಕ್ ॥75॥

ಶ್ರೋತೃವ್ಯಂ ಗಾಯನಮುಖೈರ್ವರ್ಣಾನಾಂಚವಿರೇಚನಂ ॥
ವಿಶುದ್ಧವರ್ಣಾಕಾಂಬೋಧಿತಸ್ಯಾಸೀ ದೇವತಾಃಸ್ವಯಂ ॥76॥

ಸರ್ವತ್ರಗೇಯಾ ಗೀತಜ್ಞೈ ಸ್ಸರ್ವದಾಶುಭದಾಯಿನೀ ॥
ಭೈರವೀಕಾಲಮೇಘಾಭಾ ಭೈರವೋಸ್ಯಾಧಿ ದೇವತಾ ॥77॥

ಕಾಲತ್ರಯೇ ಪ್ರಶಸ್ತಾಸಾವನ್ಯತ್ರ ಕಲಹಪ್ರದಾ ॥
ದೇಶೀಶುಭಾಗೌರವರ್ಣಾ ಗೌರೀತಸ್ಯಾಧಿದೇವತಾ ॥78॥

ಸಂಪತ್ಕರೀ ಗಾಯಕಾನಾಂ ಗೇಯಾಸಾಸಾರ್ವಕಾಲಿಕಾ ॥
ಕಲ್ಯಾಣೀ ಕುಂಕುಮಚ್ಛಾಯಾಗೇಯಾಸರ್ವತ್ರಗಾಯಕೈಃ ॥79॥

ತಸ್ಯಾಧಿದೇವತಾಲಕ್ಷ್ಮೀಃ ಸರ್ವದಾಮಂಗಲಾಯನಾ ॥
ಮಾರವೀ ಕನಕಚ್ಛಾಯಾ ಮಹಾಸೇನೋಧಿದೇವತಾ ॥80॥

ಪ್ರತರೇವ ಪ್ರಶಸ್ತಾಸಾ ವನ್ಯತ್ರಾಭದ್ರದಾಯಿನೀ ॥
ಸಾವೇರೀಕೌಪ್ಯಸಂಕಾಶಾತ ಸ್ಯಾಧೀಶೋ ಗಣೇಶ್ವರಃ ॥81॥

ಆಹರೀ ಹರಿ ನೀಲಾಭಾತಸ್ಯಾಃ ಪೂರ್ವಹರಿತ್ಪತಿಃ ॥
ಅಧೀಶಃಷಣ್ಮುಹೂರ್ತಾಂತೇ ಗೇಯಾತೀತ ವಿದುತ್ತಮೈಃ ॥82॥

ಮೋಹೇನಮಾನವೋ ಮೂಢಃ ಪ್ರಭಾತೇತಾಂ ಪಠೇದ್ಯಸಿ ॥
ಅತಿ ದುಃಖಮವಾಪ್ನೋತಿ ದೇಹಾದಸ್ರಂ ಪ್ರಪಶ್ಯತಿ ॥83॥

ಕೇತಾರ ಗೌಲೀಕಿಂಜಲ್ಕವರ್ಣ ಕಾಲೋದಿದೇವತಾ ॥
ಅಹ್ನಿಃ ಪ್ರಶಸ್ತಾ ಸಾನ್ಯೇತ್ರ ಸೂಚಕಾಮರಣಸ್ಯಚ ॥84॥

ನಾಟೀ ಸ್ಫಟಿಕಸಂಕಾಶಾ ಚಂದ್ರಸ್ತಸ್ಯಾಧಿದೇವತಾ ॥
ಶಸ್ತಾಸಾ ಪ್ರಥಮೇ ಯಾಮೇ ಪ್ರಾತರೇವ ಪ್ರಶಸ್ಯತೆ ॥85॥

ಮುಖಾರೀ ಮೌಕ್ತಿಕಾಭಾಸ್ಯಾದ್ಭಾನುಸ್ತಸ್ಯಾಧಿದೇವತಾ ॥
ಮಧ್ಯಾಹ್ನಾ ತ್ಪರತಃ ಶಸ್ತಾ ಪ್ರಭಾತೇನಿಷ್ಟಪುಷ್ಟಿಣೆ ॥86॥

ಯಾಸೌರಾಷಟ್ರ ಪ್ರವಾಲಾಭಾಸೋಮಸ್ತ ಸ್ಯಾಧಿದೇವತಾ ॥
ಮಧ್ಯಂದಿನೇ ಪ್ರಶಸ್ತಾಸಾಸರ್ವದಾಭೀಷ್ಟದಾಯಿನೀ ॥87॥

ಶಂಕರಾಭರನಾ ಶಂಖವರ್ಣಾಸೋಮ್ಯೋಧಿ ದೇವತಾ ||
ಸರ್ವತ್ರಗೇಯಾವಿದ್ವಿದ್ಭಿಃ ನೃಪವಶ್ಯಕರೀಸದಾ ||88||

ಘಂಟಾರವೀ ಹರಿದ್ರಾಭಾಧಾತಾತಸ್ಯಾಧಿದೇವತಾ ||
ಸಾಧ್ವಯೋ ಸಂಧ್ಯಯೋಗೇಯಾತುಲ್ಯಾನ್ಯತ್ರೇಷ್ಟಕಷ್ಟಯೋಃ ||89||

ಪುಷ್ಯರಾಗ ಸಮುಚ್ಛಾಯಾ ಯಾ ಸಾಗರ ವರಾಲಿಕಾ ||
ರಾತ್ರೌಪ್ರಶಸ್ತಾ ವಿದ್ವದ್ಧಿಃ ಗೇಯನೃತ್ಯಾರ್ಥಹಾರಿಣಿ ||90||

ಧನ್ವಾಸೀವಜ್ರಸಂಕಾಶಾವಹ್ನಿ ಸ್ತಸ್ಯಾಧಿದೇವತಾ ||
ಗೇಯಯಾಮದ್ವಯಾತ್ಪಶ್ಚಾತ್‌ಪ್ರಾನರ್ಘವಿಧಾಯಿನಿ ||91||

ರೇವಗೋಪ್ತೀಸುವರ್ಣಾಭಾ ಭಾರತ್ಯಸ್ಯಾಧಿದೇವತಾ ||
ಸಾತುಗೇಯಾಪರಾಹ್ನಾಯಾಂ ಅನ್ಯತ್ರೌಲಾಭಕಾರಿಣಿ ||92||

ಮಯೂರಕಾಹಲೀರಾಗೋ ಗೋಮೇಧಿಕ ಸಮಪ್ರಭಃ ||
ತಸ್ಯಾಧೀಶಃ ಪಾಶಹಸ್ತೋ ಗಾಯತಾಂ ನಿಶಿಸೂರಿಣಾ ||93||

ಸೌಮೀ ಸೌಗಂಧಿಕ ಕಚ್ಛಾಯಾ ಮರುತ್ತಸ್ಯಾಧಿ ದೇವತಾ ||
ಸಾಮಾನ್ಯ ಭಾವಾಸರ್ವತ್ರ ಪೌರ್ಣಮ್ಯಾಂಚ ವಿಶೇಷದಾ ||94||

ಕೇಸರೀಪತ್ರ ಸಂಕಾಶಾಯಾ ಸಾಮುಖವಿಕಾಸಿನೀ ||
ಯಕ್ಷರಾತ್ ದೇವತಾ ತ್ತಸ್ಯಾಃ ಸಾಯಾಹ್ನೇ ಸಾಪಿಗಾಯಿನೀ ||95||

ನೀಲಜೀಮೂತ ಸಂಕಾಶಾನೀಲೀ ನಾಮವರಾಲಿಕಾ ||
ತಸ್ಯಾಧೀಶೋನೀಲಕಂಠೋಕ್ಷಪಾಪಾಂ ಸುಖದಾಯಿನೀ ||96||

ದ್ವಿರೇಫರಾವಿಣೀ ರಾಗಃ ಕುಂದಕುಡ್ಮಲಸನ್ನಿಭಃ ॥
ಪ್ರಾತಃ ಸಂಧ್ಯಾಮಧ್ಯಾಹ್ನ ಕಾಲಾಸೌರ್ಯಾಧಿ ದೇವತಾ ॥97॥

ಘನೀನಾಮವರಾಲೀಕ ಖರ್ಜೋರ ಸದೃಶ ಪ್ರಭಾ ॥
ಮುರ್ತಚ್ಗೇಯಸಾಬ್ರಾಹ್ಮೀತ ಸ್ಯಾಃ ಸಃ ಸೋಮಮೌಲಿಕಾಃ ॥98॥

ಅನ್ಯೋಘು ನರವೀರಾಗಶ್ಚಂಪಕಾಸುಮಸನ್ನಿಭಃ ॥
ಷಣ್ಮುಹೂರ್ತಾಂತರೇಶಸ್ತು ಸಾಯಾಹ್ನೇನಿಷ್ಟವರ್ಧಿನೀ ॥99॥

ಕಾಪೀ ಕೈರಪಿಪುಷ್ಟಾಭಾ ಕಾಮಸ್ತಸ್ಯಾಧಿದೇವತಾ॥
ಗಾತುಂ ಯೋಗ್ಯಾಸಾರ್ವಕಾಲೇ ಕಾಮಿನೀ ಪ್ರೇಮದಾಯಿನೀ ॥100॥

ಯಾಕರಾಭಾರಭವೇ ವೀರಭದ್ರೋಧಿ ದೇವತಾ ॥
ಪ್ರದೋಷಕಾಲೇಶಸ್ತು ಸಾಮಧ್ಯಾಹ್ನೇ ಶೂನ್ಯದಾಯಿನಿ ॥101॥

ಕೈಶಿಕಾಪದ್ಮಸಂಕಾಶಾ ಕುಂಡಲೀ ಶೋಧಿದೇವತಾ ॥
ದಿನಾಂತ್ಯಭಾಗೇ ಗೇಯಾಸಾವನ್ಯತ್ರ ಸಮದರ್ಶಿನೀ ॥102॥

ಭೂರಧೀಶಾ ಚಕ್ರವರ್ಣಾಗೇಯಾಸಾ ಮದು ಮಾಧವೀ ॥
ಶ್ರೀಕರೀಯಾದಿವಾರಾತ್ರಂ ಪಂಡಿತೈರ್ಬುದ್ಧಿಶಾಲಿಭಿಃ ॥103॥

ಸಾರಂಗಕನಕಚ್ಛಾಯೋ ಜಲಂತಸ್ಯಾಧಿ ದೇವತಾಃ ॥
ಸೂರಿಭಿಃ ಸರ್ವದಾಗೇಯೋ ನೈರುಂತರ್ಯ ಸುಖಪ್ರದಃ ॥104॥

ಪಾಂಚಲಿಕಾ ಪಂಚವರ್ಣಾನಭ ಸ್ತಸ್ಯಾಧಿದೇವತಾ ॥
ಯಂಗೇಯಾಗಾನ ವಿದ್ಯಾದ್ಧಿಃ ಸದಾರೋಗ್ಯವಿವರ್ಧಿನೀ ॥105॥

ಹಂಸೋಧಿದೇವತಾಶ್ಚಿತ್ರ ಲಾಸಿಕಾಚಿತ್ರವರ್ಣಿನೀ ॥
ಗಾತುಂ ಯೋಗ್ಯಾ ಸದಾಧೀರೈಃ ಚಿತ್ತಾನಂದ ವಿವರ್ಧಿನೀ ॥106॥

ಯೇತೇಷಾಂ ರಾಗಭೇದಾನಾಂ ಕಾಭೇದಾಹ್ಯ ನೇಕಧಾ ॥
ಧೃತಮಧ್ಯವಿಲಂಬಾತಾನ್ ಕಾಲಾನ್ ಕಾಲ ವಿದೋವಿಧುಃ ॥107॥

ಉಚ್ಚನೀಚ ಸಮ ತ್ವೇಚಪ್ರತ್ಯೇಕಂ ತ್ರಿವಿಧಂ ಭವೇತ್ ॥
ತೇಕಂಠ ನಾಸಿಕಾಭ್ಯಾಂಚ ಪ್ರತ್ಯೇಕಂ ದ್ವಿವಿಧಾ ಭವನ್ ॥108॥

ಉತ್ತಮಷ್ಟಾವಶಪ್ರೋಕ್ತಾ ಸ್ತೇಕಾಲಾಃಕಾಲ ಸೂಚಕಾಃ ॥
ಚತುರ್ವಿಧ ಪ್ರಬಂಧಾಸ್ಯುರಾಗಾಃ ಪುಷ್ಪತ್ವ ಕಾರಕಾಃ ॥109॥

ತದ್ವಿದ್ಗೀತಾಷ್ಟಧಾಪ್ರೋಕ್ತಾನವಭೇದಾ ಸ್ಸುದಾದಯಃ ॥
ಯೇತೇಷಾಂ ವಿವರ ಜ್ಞಾತ್ವಾ ಗಾಯತಾಂಗಾನ ಕೋವಿದೈಃ ॥110॥

ಅಜ್ಞಾತ್ವಾತು ಸಭಾಮಧ್ಯೇವಕ್ತು ಮಿಚ್ಛತಿ ಯೋಧಮಃ ॥
ತಂಗಾನಮಿತಿ ಪ್ರಾಹುರಾ ಸಭೋತ್ಸಾ ನಸಂಶಯಃ ॥111॥

॥ಇತಿ ಸಹ್ಯಾದ್ರೌ ಉತ್ತರಭಾಗೇ ತುಂಗಭದ್ರಾಮಹಿಮಾಯಾಂ
ಪಂಚನವತಿತಮೋಧ್ಯಾಯಃ ॥

॥ಶ್ರೀರಸ್ತು ॥

ಪಾರ್ವತ್ಯುವಾಚ ॥ ಕೇ ತಾಲಾಃ ಕೇ ಸ್ವರಾಃ ಪ್ರೋಕ್ತಾಃ ಕಃಕಾಲಃ ಕುತ್ರಸಂಭವಾಃ ॥
ಯೇತಾನ್ ವಿಸ್ತರವಿಶ್ವೇಶ ವಿಸ್ತರೇಣಾದ್ಯ ಮೇ ಪ್ರಭೋ ॥112॥

ಈಶ್ವರ ಉವಾಚ॥ ತಾಲಾನಾಂ ಮೇಲಿನಂ ವಕ್ಷ್ಯೇ ಲಕ್ಷಸಂಖ್ಯೇಷು ಕೇಚನ ॥
ಯಾದೃಶೀಬುದ್ಧಿರುತ್ಪನ್ನಾ ಹಂತಾನ್ ತಾದೃಶಃ ಕ್ರಮಾತ್ ॥113॥

ತಾಲೋತ್ಪತ್ತೌ ಬುದ್ಧಿತಾ ಕಾ ಲೋಜ್ಞೇಯೋತಿ ಸೂಕ್ಷ್ಮತಃ
ಅನೇಕ ಪದ್ಮಪತ್ರಾಣಿ ಯೇಕೃತ್ಯಾತಿತೈಕ್ಷಿಕಾಂ

ಸೂಚೀಂಪ್ರಕ್ಷೇಪ ವೇಲಾಯಾಂಧಿತ್ವೈ ಕೈಕ ವಿಹಚ್ಛತಿ ॥
ಭಿತ್ವೈಕಮನ್ಯುಂ ಭೇದಸ್ಯಯಃ ಕಾಲ ಉಪ ಪದ್ಯತೆ ॥114॥

ಏಕಕಾಲಂ ತೃಟಿಮಿತ್ಯಾಹುಃ ತಚ್ಛ ತಂ ಲವಮಿಷ್ಯತಿ ॥
ತಲ್ಲವಾನಾಂ ಶಯಪ್ರಾಹುಃ ಕ್ಷಣಾರ್ಧ ಮಿತಿ ಪಂಡಿತಾಃ ॥115॥

ಯುಗ್ಮಂ ಕ್ಷಣಾರ್ಧಂಕ್ಷಣಮಿತ್ಯಾಹುಃ ಕಾಲ ಪರೀಕ್ಷ ಕಾಃ ॥
ಅನುದೃಶೋಚ್ಚಾರಣ ಸ್ಯತಂಕ್ಷಣಂ ಪ್ರವರಸಂತಿಹಿ ॥116॥

ತಥಾಯುಗ್ಮಾನುದೃತಸ್ಯ ಕಾಲ ಪ್ರೋಚ್ಚಾರಣಸ್ಯಚ ॥
ದೃತ ಕಾಲ ಮಿತಿ ಪ್ರಾಹುಃ ಕಾಲ ಜ್ಞಾಸ್ತಾಲಪಾಣಯಃ ॥117॥

ಇತ್ಥಂ ಪ್ರಸ್ತಾರ ಮುಖತಸ್ತಾಲಾ ನಾಂಚ ವಿವೇಚನಂ ॥
ಅನೇಕ ಸಂಖ್ಯಾಭೇದಾನಿ ದೃಷ್ಟವ್ಯಾನಿ ವಿಚಕ್ಷಣೈಃ ॥118॥

ತಾಲಾನಾಂ ಸಪ್ತಕಮಿಟಿ ನೋಽಶಕ್ಯಂ ವಕ್ತುಮತ್ವತು ॥
ಅನ್ಯೇಹ್ಯೇಕಶತಂ ತಾಲಾ ಇತ್ಯಾಚ ಸ್ಯುರ್ಹಿಪಾಮರಾಃ ॥119॥

ಅನೇಕತಾಲಾಃ ಸಹಸ್ರಂಚೇತ್ಯಾಹುರ್ವಿಥ್ಯಾ ಪ್ರಲಾಪಿಕಾಃ ॥
ಚತುರ್ದಶಸು ಲೋಕೇಷು ಸಂಖ್ಯಾ ವಕ್ತುಂ ನಶಕ್ಯತೆ ॥120॥

ಜಾತೋವಾ ಜಾಯ ಮಾನೋವಾ ಹರಿಬ್ರಹ್ಮಕುತೀಮತಿ ॥
ಕಾಲತ್ರಯೋಪಿನಾಸ್ತೀತಿ ಸಾಂಪ್ರತಾಂಬ್ರೂಮ ಹೇವಯಂ ॥121॥

ತಾಲಾನಾಂ ಮೇಲನಂ ಸುಭ್ರು ಸಾವೇಣೇವೇತ್ತಿ ವಾನವಾ ॥
ತಾತ್ವಾಪಿ ಸಪ್ತತಾಲಾನಾಂ ವಕ್ಷ್ಯತೆ ಲಕ್ಷಣಂ ವಯಂ ॥122॥

ಅನುದೃತೋಧೃತಶ್ಚೈವ ತಥಾಲಘು ಗುರುಪ್ಲು ತಾಃ ॥
ಏತೇತಾಲೋಚ್ಚಾರಣಸ್ಯ ಕಾರ್ಯಕಾರಿತ್ವ ಕಾರಿಕಾಃ ॥123॥

ಅನುಧೃತಂ ಬುಧಾಃ ಪ್ರಾಹು ಯುದ್ದಾಲೇಂದು ಸಮಾಕೃತಿಂ ॥
ದ್ರುತಂತು ವಲಯಾಕಾರಂ ಊರ್ಧ್ವದಂಡಾಕೃತಿಂ ಲಘು ॥124॥

ವಕ್ರಾಕಾರಂ ಗುರುಂಜ್ಞೇಯಂ ಗುರೋರ್ಮೂರ್ಧ್ನಿಲಘುಪ್ಲುತಂ ॥
ಧೃತಂ ಲಘು ಗುರೂತದ್ವಪ್ಲುತಂಸ್ಯಾತ್ ಪಡ್ಲುತಾತ್ಮಕಂ ॥125॥

ತಾಲಖ್ಯೈಃ ಕಥಿತಾಸಮ್ಯಕ್ ಚತುರಂಗೇಷು ವಿಸ್ಫುಟಂ ॥
ಪುಚ್ಛಸೂತ್ರೇಲಿಖೇತಾಲಾನ್ ಏಕೈಕದೃತವೃದ್ಧಿತಃ ॥126॥

ನೀಚೆಭವಂತಿ ಭೇದಾನಿ ನೀಚಾಸೀ ಚೆದ್ರುತಾದಿಕಂ ॥
ತಾಲಮಾದೌ ವಿಲಿಖ್ಯಾತಸ್ಯಾದೋಧ್ವಂಲಿತಿತ್ತತಃ ॥127॥

ವಾಮಸ್ಥಮಹತಸ್ಸಾರ್ಥಂತಸ್ಮಾದಸ್ಯಲಿಖೇತ್ ಕ್ರಮಾತ್ ॥
ಭೂಯಃ ಕುರ್ಯೋನ್ಮಹತ್ವಾರ್ಥಮಥೋಧೋಭಾಗಮಾಹರೇತ್ ॥128॥

ಯಥೊಪರಿತಥಾಶೇಷಂ ತಚ್ಛೇಷಂ ವಾಮತೋನ್ಯಸೇತ್ ॥
ಪ್ರಸ್ತಾರೋಯಂ ಸಪ್ತಮಾಕ್ಯಾತಂ ಯಾವತ್ಸರ್ವದೃತಂ ಭವೇತ್ ॥129॥

ವಕ್ಷಂತಿ ಸಪ್ತತಾಲಸ್ಯಲಕ್ಷಣಾಸಿಯಥಾಕ್ರಮಂ ॥
ಧ್ರುವಮಟ್ಯೋರೊಊಪಕೋಥ ಜಂಪೋತ್ರಿ ತ್ರಿವಿಡಮೇವಚ ॥130॥

ಅಟ್ಟತಾಲೇಕತಾಲೌಚ ಸಪ್ತತಾಲಾಃ ಪ್ರಕೀರ್ತಿತಃ ॥
ಆದೌಧ್ಯುವಾಖ್ಯತಾಲಸ್ಯ ಲಘ್ವೇಕಂಚ ತಥಾ ಗುರು ॥131॥

ತಥಾಚಮಟ್ಟತಾಲಸ್ಯ ದೃತಾನಿ ತ್ರೀಣ್ಯತೋಲಘು ॥
ರೂಪಕಾಖ್ಯಸ್ಯತಾಲಸ್ಯದೃತಂಮೇಕಂ ತಥಾಲಗು ॥132॥

ತಥಾಚ ಜಂಪತಾಲಸ್ಯದೃತೇದ್ವೇಲಂಘ್ವಿರಾಮಕಂ ॥
ಆಹುರಟ್ಟಾಖ್ಯತಾಲಸ್ಯ ಆದಾವಂತೆ ಲಿಖೇಲ್ಲಘು ॥133॥

ಮಧ್ಯೇದೃತದ್ವಯಂಕುರ್ಯಾದೇಕತಾಲಸ್ಯಲಕ್ಷಣಂ ॥
ದೃತಾಸಿ ತ್ರೀಣಿ ವಿಜ್ಞೇಯಾಪಂ ಡಿತೈರ್ಬುದ್ಧಿಶಾಲಿಭಿಃ ॥134॥

ವರ್ಣಾನಾಂ ಯದಭಾವಶ್ಚವಿರಾಮಾಯಿತಿ ಕಥ್ಯತೆ ॥
ಯೇತೇಷಾಂ ಸಪ್ತಕಾಲಾನಾಂ ವರ್ಣಾನ್ ದೇವಾನ್ ಮಹಾಮಿತೆ ॥135॥

ಧೃವತಾಲೇವಸಂ ಕಾಶೋಹೇರಂಭಸ್ತಸ್ಯದೇವತಾ ॥
ಅಟ್ಯೋಟ್ಟಾಪದ್ಮ ಸಂಕಾಶ ಗೌರಿಃ ತಸ್ಯಾಧಿದೇವತಾ ॥136॥

ತದಾಮೃದಂಗ ಪಟಹಾವಿಇಣಾ ತುಂಬುರ ಮಡ್ಡುಕಾಃ ॥
ತಾಲಾಶ್ಚಢಕ್ಕಢಕ್ಕಾಶ್ಚಭೇರೀ ಮೊರ್ವೀಚಕಾಹಲೀ ॥137॥

ಢಿಂಢಿಮಾಸ್ತಂಪಜಾಢಿಕ್ಕಾಅಂಕ್ಯಾಲಿಂಗ್ಯಾ ಸಹಸ್ರಶಃ ॥
ಮುಖೇನಧ್ವನಿತಾಃ ಕೇಚಿದಿಂಧನೈರ್ಧ್ವನಿತಾಂಪರೆ ॥138॥

ಯೇತೇಷಾಂ ಲಕ್ಷನಂ ವಕ್ಷ್ಯೇಕಿಂಚಿದಿಗ್ಭ್ರಾಂತ ಮತ್ರತೆ॥
ತ್ರೀಣ್ಯರತ್ನಿಪ್ರಮಾಣಂತು ಮದ್ದಲಂ ವಿಧಿಶುದ್ಧಧೀಃ ॥139॥

ಲೋಹೇನರಜತೇನಾಪಿದಾರುಣಾ ಪಿತ್ತಲೇ ನವಾ ॥
ಅಸ್ಯದ್ವಯಂ ಪ್ರಕರ್ತ ವ್ಯಂಚ್ಛಾಯನೀಯ ಮುಭೇತತಃ ॥140॥

ಚರ್ಮಣಾಕೃಷ್ಣ ಸಾರಸ್ಯಮೇಷ ಸ್ಯಾಲಘು ಚರ್ಮಣಾ ॥
ಬುದ್ಧೀಯಚ್ಚಣ ಸೂತ್ರೇಣ ತ್ರಿರಾವರ್ತಿತವರ್ತಿನಾ ॥141॥

ಮಧ್ಯಸ್ಥೌಲ್ಯಂವರ್ತುಲತ್ವಂ ಪಾರ್ಶ್ವಯೋಸ್ತು ಕೃಶಾಂಭವೇತ್ ॥
ಪಣ್ಣಾಮಂಗುಲಿ ವಿಸ್ತಾರಂ ಮುಖೆಯೋರುಭಯತ್ರಚ ॥142॥

ಮದ್ದಲಂತಂ ಬುಧಾಃ ಪ್ರಾಹುಃ ಬ್ರಹ್ಮಾವಿಷ್ಣು ಶಿವಾತ್ಮಕಂ ॥
ಮಧ್ಯೇಬ್ರಹ್ಮಾದಕ್ಷಿಣೇತು ಶಿವೋ ವಾಮೇಸ್ವಯಂಹರಿಃ ॥143॥

ಮಧೆಲ್ಯೋವಾಣೀರ್ಗುಣೇರ್ಲಕ್ಷ್ಮೀಃ ಸರ್ವಾಂಗೇಶಂಕರೀಸ್ಥಿತಾ ॥
ತತ್ವೀಚಕಾರ ಮದ್ದೀ ಶೋಮಪ್ರಿಯಕರಂ ಸದಾ ॥144॥

ಸವ್ಯಾಪಸವ್ಯ ಹಸ್ತಾಭ್ಯಾಂ ರಚನೀಯಂ ಮುಹುರ್ಮುಹುಃ ॥
ಭುಂಭುಂ ಕಾರೇಣಮು ಸಲ್ಯೈಃ ವೀಣಾಂಹೃದಯೇಸದಾ ॥145॥

ಏಸ್ಯಶಬ್ಧಮಾತ್ರೇಣ ಘಟನಾಯಿಕ ಭಾದತೆ ॥
ವಾಮಮಾತ್ರಂ ಸ್ವರ್ಣದಂಡಂ ತಂತೀಸಪ್ತ ಸಮಾಶ್ರಿತಂ ॥146॥

ಮೂಲಾಂತ್ಯ ಭಾಗೇ ಸೌವರ್ಣ ಕಲಶೈ ಸನ್ನಿಬಧ್ಯತಾಂ ॥
ಆಚಖ್ಯತೆ ತುಂಬರೇತಿ ವೀಣಾವಾದನ ಕೋವಿದೈಃ ॥147॥

ಲಯಃ ಪಿತ್ತಲ ಸೌವರ್ಣ ತಾಮ್ರ ಕಾಪ್ಯಮಯಾಶ್ಶುಭಾಃ ॥
ತೃಪು ರೂಪಾ ಲೋಹ ರೂಪಾ ಶ್ಶುದ್ಧಾಶ್ಶೃತಿ ಸ್ವರಾಗ್ನಿ ತಾಃ ॥148॥

ತಂತ್ರೀ ಸೂಕ್ಷ್ಮಾ ಘನೀಭೂತಾಃ ಸ್ಥಾನ ಗಾನವಿದಾಯಿನೀ ॥
ರಂಧ್ರಾಣಿಕಾರಯೇ ತ್ಸಪ್ತ ಬಧ್ನೀಯಾತ್ಸಹ ಕೀಲಕೈಃ ॥149॥

ಮೇರು ಹಿಮಾಚಲೋಗಂಧಮಾದ ನೋಮಾಲ್ಯವಾನ್‌ಸರಿದೀಶ್ವರಃ ॥
ಪೂರ್ವೋತ್ತರ ಗಿರೀ ಗೌರೀ ಸಪ್ತೈತಾಃ ಕೀಲದೇವತಾಃ ॥150॥

ನಿಷಾದರ್ಷಭಗಾಂಧಾರ ಷಡ್ಜಮಧ್ಯದೈವತಂ ॥
ಸಪ್ತಮಂಪಂಚಮಂ ಪ್ರಾಹುಃ ಸ್ವರೈಃ ಸಪ್ತಸಮಾಶ್ರಿತ ॥151॥

ಮತಂಗಜೊ ನಿಷಾಧಾಖ್ಯ ಸ್ವರಂವಕ್ತಿ ವಿಚಕ್ಷಣೆ ॥
ಆತನೋತಿ ಸ್ವರಂ ಸುಭ್ರು ವೃಷಭೋ ಋಷ ಭಾಖ್ಯಕಂ ॥152॥

ವಕ್ತಷಡ್ಜ ಸ್ವರಂಬರ್ಹೀ ಗಾಂಧಾರಂಬ್ರುವತೇಮೃಗಾಃ ॥
ದೈವತಂ ವಕ್ತಿಗಂಧರ್ವೋ ಮಧ್ಯಮಂಬ್ರವ ತೇಹರಿಃ ॥153॥

ಪ್ರಾಪ್ತೇ ಮಾಧವಮಾಸೇತು ಪಿಕಃ ಕೂಜತಿ ಪಂಚಮಂ ॥
ಆರೇಭೇತಾನಿ ದ್ವಿತ್ರಿಂಶತ್ಸ್ವರ ವೆವರಣಾನಿಚ ॥154॥

ಅಂಗುಷ್ಠತರ್ಜನೀಭ್ಯಾಂಚ ವಾಮ ಹಸ್ತೇನ ಘಟ್ಟನಂ ॥
ದಕ್ಷಿಣಸ್ಯಚ ಹಸ್ತಸ್ಯ ನಖೈಸ್ತಂ ತ್ರೀವಿಘಟ್ಟನಂ ॥155॥

ಕಾಲೀಕರಾಳೀ ಚಾಮುಂಡೀ ಭೈರವೀಭೂತ ನಾಯಕಿ ॥
ಸಾವಿತ್ರೀ ಸೌಸ್ವಗಾಯತ್ರೀ ವಾಣೀ ಕಾತ್ಯಾಯಿನೀ ಸ್ಥಿರಾ ॥156॥

ಭಾನುರ್ಹಂಸೋಮಹೇಂದ್ರಶ್ಚ ವರುಣೋಮರುತ್ತಸ್ಥಥಾ ॥
ವೈಶ್ವಾನರೋಯಮೋನಂದೀಚಂ ದೀಶಃ ಕಾಲಭೈರವಃ ॥157॥

ರುದ್ರೋರುಗ್ಣೋರಮಾನಾಥೋ ರೇವತೀ ರಮಣೋ ಗುರುಃ ॥
ಸಿಂಧುರ್ಗಂಧರ್ವರಾಜಶ್ಚ ಗರುಡೋಗಣನಾಯಕಃ ॥158॥

ಐರಾವತೋವಿಶ್ವಕರ್ಮೋ ಯೇತಾ ಸೋಪಾನದೇವತಾಃ ॥
ಮದನೋ ಮಂಗಲಾದೇವೀ ರತಿರ್ಲಕ್ಷ್ಮೀಶ್ಚ ರೋಹಿಣಿ ॥159॥

ವಿಶ್ವಂಭರಾ ವಿರೂಪಾಕ್ಷೀ ತಂತ್ರೀಣಾಮಧಿ ದೇವತಾಃ ॥
ಕಲಶದ್ವಯ ಯೋಶ್ಚೈವ ಚಿತ್ರಗುಪ್ತಾವಧೀಶ್ವರೌ ॥160॥